VOLUME: 16 | 26 MARCH 2026 | ಗುರುವಾರ | RS: 2 | PAGE: 06 ISSUE: 58 ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

ಆದಿತ್ಯ ಧರ್ ನಿರ್ದೇಶನದ ಧುರಂಧರ್ ಸಿನಿಮಾವನ್ನು ತಮಿಳು ಸೂಪರ್ ಸ್ಟಾರ್ ರಜನಿಕಾಂತ್ ಶ್ಲಾಘಿಸಿದ್ದು, "ಪ್ರತಿಯೊಬ್ಬ ಭಾರತೀಯ ನೋಡಲೇಬೇಕಾದ ಚಿತ್ರ" ಎಂದು ಬಣ್ಣಿಸಿದ್ದಾರೆ. ತಮ್ಮ ಅಧಿಕೃತ ಸೋಷಿಯಲ್ ಮೀಡಿಯಾ ಪೋಸ್ಟ್ ಮೂಲಕ, ಬಾಲಿವುಡ್ ನಟ ರಣ್‌ವೀರ್ ಸಿಂಗ್ ಮತ್ತು ಚಿತ್ರದ ಹಿಂದಿರುವ ತಂಡವನ್ನು ಅಭಿನಂದಿಸಿದ ಹಿರಿಯ ನಟ, ಬಾಕ್ಸ್ ಆಫೀಸ್‌ನಲ್ಲಿನ ಚಿತ್ರದ ಓಟವನ್ನೂ ಶ್ಲಾಘಿಸಿದ್ದಾರೆ.



BHARATHA SARATHI
KANNADA DAILY NEWS PAPER

# 3S ಭಾರತ ಸಾರಥಿ

CALL 9740160669

RNI KARKAN2011/44806

ಸದಾ ನಿಮ್ಮೊಂದಿಗೆ ಕನ್ನಡ ದಿನಪತ್ರಿಕೆ



ಸಂಪಾದಕ
ಗಂಡಸಿ ಸದಾನಂದಸ್ವಾಮಿ



## ‘ಸಿಲಿಂಡರ್ ಬುಕಿಂಗ್ ನಿಯಮಗಳಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ’

ನವದೆಹಲಿ: ಎಲ್‌ಪಿಜಿ ಸಿಲಿಂಡರ್ ಬುಕಿಂಗ್ ನಿಯಮಗಳಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಿದೆ. ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆಯ ನಡುವೆ, ಅನಿಲ ಕಂಪನಿಗಳು ತಮ್ಮ ಬುಕಿಂಗ್ ನಿಯಮಗಳಲ್ಲಿ ಗಮನಾರ್ಹ ಬದಲಾವಣೆಗಳನ್ನು ಮಾಡಿವೆ ಎನ್ನುವ ಸುದ್ದಿಗಳು ಹರಿದಾಡಿದ್ದವು. ಆದರೆ ಅಂತಹ ಯಾವುದೇ ಬದಲಾವಣೆ ಮಾಡಿಲ್ಲ ಎಂದು ಸರ್ಕಾರ ಹೇಳಿದೆ.

ತಮ್ಮ ಮುಂದಿನ ಸಿಲಿಂಡರ್ ಬುಕ್ ಮಾಡಲು ಹೆಚ್ಚು ಸಮಯ ಕಾಯಬೇಕಾಗುತ್ತದೆ ಎಂದು ಹೇಳಲಾಗಿತ್ತು. ಗ್ರಾಹಕರು ನಿಗದಿತ ಸಮಯಕ್ಕಿಂತ ಮೊದಲು ಗ್ಯಾಸ್ ಸಿಲಿಂಡರ್ ಅನ್ನು ಬುಕ್ ಮಾಡಲು ಸಾಧ್ಯವಾಗುವುದಿಲ್ಲ. ಪೂರೈಕೆಯನ್ನು ಸಮತೋಲನಗೊಳಿಸಲು ಮತ್ತು ಅಗತ್ಯವಿರುವವರಿಗೆ ಅನಿಲ ಲಭ್ಯವಾಗುವಂತೆ ನೋಡಿಕೊಳ್ಳಲು ಈ ರೀತಿ ಮಾಡಲಾಗಿದೆ ಎಂದು ವರದಿಗಳು ಹೇಳಿದ್ದವು.




ವರದಿಗಳಲ್ಲಿ ಏನಿತ್ತು? 14.2 ಕೆಜಿ ಗೃಹಬಳಕೆ ಸಿಲಿಂಡರ್‌ಗಳ ಬುಕಿಂಗ್ ಅಂತರವನ್ನು ಈಗ ಹೆಚ್ಚಿಸಲಾಗಿದೆ. ಹಿಂದಿನ 25 ದಿನಗಳ ಅವಧಿಯನ್ನು ಈಗ 35 ದಿನಗಳವರೆಗೆ ವಿಸ್ತರಿಸಲಾಗಿದೆ. ಇದರರ್ಥ ನೀವು ಒಂದು ಸಿಲಿಂಡರ್ ಖರೀದಿಸಿದ್ದರೆ, ಮುಂದಿನ ಬುಕಿಂಗ್‌ಗಾಗಿ ನೀವು ಕನಿಷ್ಠ 35 ದಿನಗಳು ಕಾಯಬೇಕಾಗುತ್ತದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಅಡಿಯಲ್ಲಿ, ಈ ನಿಯಮವು ನಿರ್ದಿಷ್ಟವಾಗಿ ಎರಡು ಸಿಲಿಂಡರ್ ಸಂಪರ್ಕವನ್ನು ಹೊಂದಿರುವವರಿಗೆ ಅನ್ವಯಿಸುತ್ತದೆ, ಅಂದರೆ ಡಬಲ್-ಬಾಟಮ್ ಸಂಪರ್ಕವನ್ನು ಹೊಂದಿರುವವರಿಗೆ ಅನ್ವಯವಾಗುತ್ತೆ ಎಂದು ಹೇಳಲಾಗಿತ್ತು.

ಅನಿಲ ಕಂಪನಿಗಳು ವಿವಿಧ ರೀತಿಯ ಗ್ರಾಹಕರಿಗೆ ವಿಭಿನ್ನ ನಿಯಮಗಳನ್ನು ನಿಗದಿಪಡಿಸಿವೆ. ಉಜ್ವಲ ಯೋಜನೆಯ ಫಲಾನುಭವಿಗಳು ಈಗ ಇನ್ನೂ ಹೆಚ್ಚು ಸಮಯ ಕಾಯಬೇಕಾಗುತ್ತದೆ. ಈ ಯೋಜನೆಯಡಿಯಲ್ಲಿ ದಾಖಲಾದವರು ತಮ್ಮ ಮುಂದಿನ ಬುಕಿಂಗ್‌ಗಾಗಿ 45 ದಿನಗಳು ಕಾಯಬೇಕಾಗುತ್ತದೆ.

ಸಿಂಗಲ್-ಸಿಲಿಂಡರ್ ಸಂಪರ್ಕ ಹೊಂದಿರುವ ಗ್ರಾಹಕರು ಹಿಂದಿನ ವಿತರಣೆಯ 25 ದಿನಗಳ ನಂತರ ಮಾತ್ರ ಹೊಸ ಸಿಲಿಂಡರ್ ಅನ್ನು ಬುಕ್ ಮಾಡಲು ಸಾಧ್ಯವಾಗುತ್ತದೆ ಎನ್ನಲಾಗಿತ್ತು.

ಆದರೆ, ಅಸ್ತಿತ್ವದಲ್ಲಿರುವ ಮರುಪೂರಣ ಬುಕಿಂಗ್ ಸಮಯ ಮಿತಿಗಳು ಬದಲಾಗದೆ ಉಳಿದಿವೆ ಮತ್ತು ಮುಂದುವರಿಯುತ್ತವೆ. ನಗರ ಪ್ರದೇಶಗಳಲ್ಲಿ 25 ದಿನಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 45 ದಿನಗಳಲ್ಲಿ ಮತ್ತೊಂದು ಸಿಲಿಂಡರ್ ಬುಕ್ ಮಾಡಬಹುದು.

ದೇಶದಲ್ಲಿ ಸಾಕಷ್ಟು ಎಲ್‌ಪಿಜಿ ಸ್ಟಾಕ್‌ಗಳು ಲಭ್ಯವಿದೆ. ಯಾವುದೇ ವದಂತಿಯನ್ನು ನಂಬಬಾರದು ಎಂದು ಪಿಐಬಿಯಲ್ಲಿ ಬರೆಯಲಾಗಿದೆ.

## ಪೆಟ್ರೋಲ್ ಮತ್ತು ಡೀಸೆಲ್ ಕೊರತೆ: ಸುಳ್ಳು ವದಂತಿ

**ಬೆಂಗಳೂರು: ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಕೊರತೆಯಾಗಿದೆ ಎಂಬ ಸುಳ್ಳು ವದಂತಿಗಳು ಸಾಮಾಜಿಕ ಜಾಲತಾಣಗಳು ಹಾಗೂ ಮಾಧ್ಯಮಗಳಲ್ಲಿ ಹರಿದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.**

ಈ ವದಂತಿಗಳಿಂದ ಸಾರ್ವಜನಿಕರು ಆತಂಕಕ್ಕೊಳಗಾಗಿ ಪೆಟ್ರೋಲ್ ಬಂಕ್‌ಗಳಲ್ಲಿ ಬಾಟಲಿ ಹಾಗೂ ಕ್ಯಾನ್‌ಗಳೊಂದಿಗೆ ಸರತಿ ಸಾಲಿನಲ್ಲಿ ನಿಂತು ಇಂಧನ ಸಂಗ್ರಹಿಸುತ್ತಿರುವುದು ಕಂಡುಬಂದಿದೆ. ಈ ಕುರಿತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಸ್ಪಷ್ಟೀಕರಣ ನೀಡಿದೆ.

ಕೇಂದ್ರ ಸರ್ಕಾರದಿಂದ ಚಿಲ್ಲರೆ ಮಾರಾಟ ಮಳಿಗೆಗಳಿಗೆ ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆ ಸುಗಮವಾಗಿ ನಡೆಯುತ್ತಿದೆ. ಯಾವುದೇ ರೀತಿಯ ಕೊರತೆ ಉಂಟಾಗಿಲ್ಲ.

ವದಂತಿಗಳನ್ನು ನಂಬಬೇಡಿ: ಇಂಧನ ಕೊರತೆಯ ಬಗ್ಗೆ ಹರಡುತ್ತಿರುವ ಸುದ್ದಿಗಳು ಕೇವಲ ವದಂತಿಗಳಾಗಿದ್ದು, ಸಾರ್ವಜನಿಕರು ಅನಗತ್ಯವಾಗಿ ಆತಂಕ ಪಡುವ ಅಗತ್ಯವಿಲ್ಲ.

ಚಿಲ್ಲರೆ ಮಾರಾಟ ಮಳಿಗೆಗಳು ವಾಹನಗಳ ಇಂಧನ ಟ್ಯಾಂಕ್‌ಗಳಿಗೆ ಮಾತ್ರ ನೇರವಾಗಿ ಇಂಧನವನ್ನು ಪೂರೈಸುತ್ತವೆ. ಯಾವುದೇ ರೀತಿಯ ಕ್ಯಾನ್ ಅಥವಾ ಬಾಟಲಿಯಲ್ಲಿ ಇಂಧನ ಪೂರೈಸಲು ಅವಕಾಶವಿಲ್ಲ. ಪ್ರತ್ಯೇಕ ಕಂಟೈನರ್‌ಗಳಲ್ಲಿ ಇಂಧನ ಸಂಗ್ರಹಿಸುವುದು ಅತ್ಯಂತ ಅಪಾಯಕಾರಿ ಹಾಗೂ ಕಾನೂನುಬಾಹಿರವಾಗಿದ್ದು, ಅನಾಹುತಗಳಿಗೆ ಕಾರಣವಾಗಬಹುದು. ಕೇಂದ್ರ ಸರ್ಕಾರದಿಂದ ಚಿಲ್ಲರೆ ಮಾರಾಟ ಮಳಿಗೆಗಳಿಗೆ ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆ ಸುಗಮವಾಗಿ ನಡೆಯುತ್ತಿದೆ. ಯಾವುದೇ ರೀತಿಯ ಕೊರತೆ ಉಂಟಾಗಿಲ್ಲ.

ಇಂಧನ ಕೊರತೆಯ ಬಗ್ಗೆ ಹರಡುತ್ತಿರುವ ಸುದ್ದಿಗಳು ಕೇವಲ ವದಂತಿಗಳಾಗಿದ್ದು, ಸಾರ್ವಜನಿಕರು ಅನಗತ್ಯವಾಗಿ ಆತಂಕ ಪಡುವ ಅಗತ್ಯವಿಲ್ಲ.

ವದಂತಿಗಳನ್ನು ನಂಬಬೇಡಿ: ಇಂಧನ ಕೊರತೆಯ ಬಗ್ಗೆ ಹರಡುತ್ತಿರುವ ಸುದ್ದಿಗಳು ಕೇವಲ ವದಂತಿಗಳಾಗಿದ್ದು, ಸಾರ್ವಜನಿಕರು ಅನಗತ್ಯವಾಗಿ ಆತಂಕ ಪಡುವ ಅಗತ್ಯವಿಲ್ಲ.

ಇಂಧನವನ್ನು ಕೇವಲ ವಾಹನಗಳ ಟ್ಯಾಂಕ್‌ಗಳಿಗೆ ಮಾತ್ರ ಭರ್ತಿ ಮಾಡಬೇಕು. ಬಾಟಲಿ ಅಥವಾ ಪ್ರತ್ಯೇಕ ಕಂಟೈನರ್‌ಗಳಲ್ಲಿ ಇಂಧನ ನೀಡದಂತೆ ಪೆಟ್ರೋಲ್ ಬಂಕ್‌ಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

**ಕೆಲವರು ಈ ಬೆಳವಣಿಗೆಯನ್ನು ಮುಖ್ಯಮಂತ್ರಿ ಬದಲಾವಣೆಯ ಮುನ್ಸೂಚನೆ ಎಂದು ವ್ಯಾಖ್ಯಾನಿಸುತ್ತಿದ್ದಾರೆ. ಸಿಎಂ ಬದಲಾವಣೆ ಸಂಭವಿಸಿದರೆ, ಸಂಪುಟದಲ್ಲಿ ಹಾಗೂ ವಿವಿಧ ಹುದ್ದೆಗಳಲ್ಲಿ ಮಹತ್ತರ ಬದಲಾವಣೆಗಳು ಸಂಭವಿಸಬಹುದು. ಇದೇ ಕಾರಣಕ್ಕಾಗಿ ಮುಂಚಿತವಾಗಿ ನೆನಪಿಗಾಗಿ ಫೋಟೋ ಶೂಟ್ ನಡೆಸಲಾಗಿದೆಯೇ ಎಂಬ ಪ್ರಶ್ನೆಗಳು ಉದ್ಭವಿಸಿವೆ. ಇನ್ನೂ ಕೆಲವರು ಇದು ಸ್ಪೀಕರ್ ಬದಲಾವಣೆ ಅಥವಾ ಸಂಪುಟ ಪುನರ್‌ರಚನೆಗೆ ಮುನ್ನ ನಡೆಯುವ ಸಿದ್ಧತೆಯಾಗಿರಬಹುದೇ ಎಂಬ ಸಂಶಯ ವ್ಯಕ್ತಪಡಿಸುತ್ತಿದ್ದಾರೆ. ಸಂಪುಟ ಪುನಾರಚನೆಯಲ್ಲಿ ಸ್ಪೀಕರ್ ಯುಟಿ ಖಾದರ್‌ಗೆ ಸಚಿವ ಸ್ಥಾನ ನೀಡುವ ಬಗ್ಗೆ ಹೈಕಮಾಂಡ್ ಸಹ ಗ್ರೀನ್ ಸಿಗ್ನಲ್ ಕೊಟ್ಟಿರುವ ಸಾಧ್ಯತೆಗಳಿವೆ.**

## ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದ ವಿಧಾನಸೌಧ ಮುಂದಿನ ಗ್ರೂಪ್‌ಫೋಟೋ

ಬೆಂಗಳೂರು: ಸರ್ಕಾರದ ಅವಧಿ ಇನ್ನೂ ಎರಡು ವರ್ಷ ಬಾಕಿ ಇರುವಾಗಲೇ ವಿಧಾನಸೌಧದಲ್ಲಿ ಶಾಸಕರ ಗ್ರೂಪ್ ಫೋಟೋ ಶೂಟ್ ನಡೆದಿರುವುದು ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ.

ಸಾಮಾನ್ಯವಾಗಿ ವಿಧಾನಸಭೆ ಅವಧಿ ಮುಕ್ತಾಯಗೊಳ್ಳುವ ಸಂದರ್ಭದಲ್ಲಿ ಸ್ಪೀಕರ್ ಸಮ್ಮುಖದಲ್ಲಿ ಶಾಸಕರ ಗ್ರೂಪ್ ಫೋಟೋ ತೆಗೆದುಕೊಳ್ಳುವುದು ಸಂಪ್ರದಾಯವಾಗಿದೆ. ಆದ್ರೆ, ಅವಧಿಗೂ ಮುನ್ನವೇ ಸ್ಪೀಕರ್ ಯುಟಿ ಖಾದರ್,ವಿಧಾನಸೌಧದ ಗ್ರ್ಯಾಂಡ್ ಸ್ಟೆಪ್ ಮುಂಭಾಗದಲ್ಲಿ ಶಾಸಕರ ಫೋಟೋ ಶೂಟ್ ಮಾಡಿಸಿರುವುದು ಅನುಮಾನಗಳಿಗೆ ಎಡೆಮಾಡಿ ಕೊಟ್ಟಿದೆ.

ಈ ಅನಿರೀಕ್ಷಿತ ಬೆಳವಣಿಗೆಯು ಸಿಎಂ ಬದಲಾವಣೆ, ಸ್ಪೀಕರ್ ಬದಲಾವಣೆ ಅಥವಾ ಸಂಪುಟ ಪುನರ್‌ರಚನೆಯ ಮುನ್ಸೂಚನೆಯೇ ಎಂಬ ಗೊಂದಲ ಮತ್ತು ಅನುಮಾನಗಳನ್ನು ಶಾಸಕರಲ್ಲಿ ಹುಟ್ಟುಹಾಕಿದೆ. ಶೀಘ್ರದಲ್ಲೇ ಸಂಪುಟಕ್ಕೆ ಸರ್ಜರಿಯಾಗಲಿದ್ದು, ಸ್ಪೀಕರ್ ಖಾದರ್ ಅವರು ಸಹ ಸಂಪುಟ ಸೇರುವ ಸಾಧ್ಯತೆಯಿದ ಹೀಗಾಗಿಯೇ ವಿಧಾನಸಭೆ ಮುಕ್ತಾಯಕ್ಕೂ ಮೊದಲೇ ಫೋಟೋ ಶೂಟ್ ಮಾಡಿಸಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ.

ಅವಧಿಗೂ ಮುನ್ನವೇ 16 ವಿಧಾನಸಭೆಯ ಸದಸ್ಯರ ಗ್ರೂಪ್ ಫೋಟೋ ಹಿಂದಿನ ಮರ್ಮ ಏನು ಎನ್ನುವ ಬಗ್ಗೆ ಶಾಸಕರಲ್ಲಿಯೂ ಗೊಂದಲ ಉಂಟಾಗಿದೆ. ವಿಧಾನಸೌಧದ ಪಡಸಾಲೆಗಳಲ್ಲಿ ಕೂಡ ಇದೇ ವಿಚಾರ ಚರ್ಚೆಗೆ ಗ್ರಾಸವಾಗಿದ್ದು, ಪರಸ್ಪರ ಶಾಸಕರು ಕಾರಣಗಳನ್ನು



ಊಹಿಸುತ್ತಿದ್ದಾರೆ. ಫೋಟೋ ಶೂಟ್ ಹಿಂದೆ ಏನಾದರೂ ರಾಜಕೀಯ ಸಂದೇಶವಿದೆಯೇ ಎಂಬ ಅನುಮಾನಗಳು ವ್ಯಕ್ತವಾಗುತ್ತಿವೆ.

ವಿಧಾನಸೌಧದ ಒಳಗಡೆ, ವಿಶೇಷವಾಗಿ ಪಡಸಾಲೆಗಳಲ್ಲಿ, ಈ ವಿಷಯವೇ ಪ್ರಮುಖ ಚರ್ಚೆಯಾಗಿದ್ದು, ಶಾಸಕರು ಪರಸ್ಪರ ತಮ್ಮದೇ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಅಧಿಕೃತವಾಗಿ ಯಾವುದೇ ಸ್ಪಷ್ಟನೆ ಸಿಗದಿರುವುದರಿಂದ ಈ ಎಲ್ಲಾ ಪ್ರಶ್ನೆ ಗೊಂದಲ ಅನುಮಾನಗಳು ಹೆಚ್ಚುತ್ತಿದೆ

ಕೆಲವರು ಈ ಬೆಳವಣಿಗೆಯನ್ನು ಮುಖ್ಯಮಂತ್ರಿ ಬದಲಾವಣೆಯ ಮುನ್ಸೂಚನೆ ಎಂದು ವ್ಯಾಖ್ಯಾನಿಸುತ್ತಿದ್ದಾರೆ. ಸಿಎಂ ಬದಲಾವಣೆ ಸಂಭವಿಸಿದರೆ, ಸಂಪುಟದಲ್ಲಿ ಹಾಗೂ ವಿವಿಧ ಹುದ್ದೆಗಳಲ್ಲಿ ಮಹತ್ತರ ಬದಲಾವಣೆಗಳು ಸಂಭವಿಸಬಹುದು.

ಇದೇ ಕಾರಣಕ್ಕಾಗಿ ಮುಂಚಿತವಾಗಿ ನೆನಪಿಗಾಗಿ ಫೋಟೋ ಶೂಟ್ ನಡೆಸಲಾಗಿದೆಯೇ ಎಂಬ ಪ್ರಶ್ನೆಗಳು ಉದ್ಭವಿಸಿವೆ.

ವಿಪಕ್ಷದ ಕೆಲವು ಶಾಸಕರು ಫೋಟೋ ಶೂಟ್ ಬಗ್ಗೆ ನಾನಾ ವ್ಯಾಖ್ಯಾನ ನೀಡುತ್ತಿದ್ದಾರೆ. ಅವಧಿ ದಿಢೀರ್ ಆಗಿ ಸ್ಪೀಕರ್ ಫೋಟೋ ಶೂಟ್ ಮಾಡಿಸಿಕೊಂಡ ಉದ್ದೇಶ ಏನು ಎಂಬುವುದು ಕುತೂಹಲವಾಗಿದೆ. ಇದು ಸಂಪುಟ ಪುನಾರಚನೆ ಆಗಲಿದೆ ಎಂಬ ಸುಳಿವು ಆಗಿರಬಹುದು ಎನ್ನುತ್ತಾರೆ.

ಇನ್ನು ಈ ಬಗ್ಗೆ ಬಿಜೆಪಿ ಶಾಸಕ ಸುರೇಶ್ ಕುಮಾರ್ ಅವರು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಈ ಕುರಿತು ವಿಪಕ್ಷ ಬಿಜೆಪಿ ಸಹ ಟ್ವೀಟ್ ಮಾಡಿದ್ದು, ಇದು ಸಿಎಂ ಸಿದ್ದರಾಮಯ್ಯ ಔಟ್‌ಗೋಯಿಂಗ್ ಫೋಟೋಶೂಟ್ ಅಲ್ವಾ? ಎಂದು ಕಾಂಗ್ರೆಸ್ ಪಕ್ಷವನ್ನು ಪ್ರಶ್ನಿಸಿ ಪೋಸ್ಟ್ ಮಾಡಿದೆ.



ಬುಧವಾರ ಕಾಂಗ್ರೆಸ್ ಶಾಸಕಾಂಗ ಪಕ್ಷದ ಅಧ್ಯಕ್ಷರಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಸಿಎಲ್‌ಪಿ ಸಭೆ ನಡೆಯಿತು. ಈ ಸಂದರ್ಭದಲ್ಲಿ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್, ಹಿರಿಯ ಸಚಿವರುಗಳಾದ ಹೆಚ್.ಕೆ.ಪಾಟೀಲ್, ಕೆ.ಹೆಚ್.ಮುನಿಯಪ್ಪ, ಬೋಸರಾಜು ಸೇರಿ ಹಲವು ಪ್ರಮುಖರು ಉಪಸ್ಥಿತರಿದ್ದು ಸಲಹೆ, ಸೂಚನೆಗಳನ್ನು ನೀಡಿದರು.

## ಉದ್ಯೋಗ ಖಾತ್ರಿಯಲ್ಲಿ ಗೋಲ್‌ಮಾಲ್

ಬೆಂಗಳೂರು: ರಾಜ್ಯದಲ್ಲಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಭಾರೀ ಅಕ್ರಮಗಳು ನಡೆದಿರುವುದನ್ನು ಭಾರತ ಲೆಕ್ಕ ನಿಯಂತ್ರಕ ಹಾಗೂ ಮಹಾಲೆಕ್ಕಪಾಲರ (ಸಿಎಜಿ) ವರದಿ ಬಹಿರಂಗಪಡಿಸಿದೆ.

ವಿಧಾನಸಭೆಯಲ್ಲಿ ಮಂಡಿಸಲಾದ ಈ ವರದಿ ಹಲವು ಗಂಭೀರ ಅಂಶಗಳ ಮೇಲೆ ಬೆಳಕು ಚೆಲ್ಲಿದೆ. ಸಿಎಜಿ ತನಿಖೆ ನಡೆಸಿದ ಗ್ರಾಮ ಪಂಚಾಯ್ತಿಗಳಲ್ಲಿ ಹಲವು ‘ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ’ (ಕೆಟಿಪಿಪಿ) ಕಾಯ್ದೆ ಅನುಸರಿಸದೇ ಟೆಂಡರ್ ನಿಯಮ ಉಲ್ಲಂಘಿಸಿದೆ. ಐದು ಲಕ್ಷ ರೂಪಾಯಿ ಮೀರಿದ ಸಾಮಗ್ರಿಗಳ ಖರೀದಿಯನ್ನು ಟೆಂಡರ್ ಕರೆಯದೇ ಖರೀದಿಸಿವೆ ಎಂದು ವರದಿ ತಿಳಿಸಿದೆ.

ಈಗಾಗಲೇ ಪೂರ್ಣಗೊಂಡ ಮನೆಗಳಿಗೆ ಮತ್ತೆ ಹಣ ಪಾವತಿಸಿರುವುದು, ಅರ್ಹತೆ ಇಲ್ಲದವರಿಗೆ ಹಣ ನೀಡಿರುವುದು ಮತ್ತು ಯಾವುದೇ ಕೆಲಸವಿಲ್ಲದೆ ಕಾರ್ಮಿಕರಿಗೆ ವೇತನ ನೀಡಿರುವುದು ಪತ್ತೆಯಾಗಿದೆ. ಕೆಲವು ಸಂದರ್ಭಗಳಲ್ಲಿ ನಿಗದಿತ ಮಿತಿಗಿಂತ ಹೆಚ್ಚು ಹಣ ಪಾವತಿಸಿರುವುದೂ ಗಮನಕ್ಕೆ ಬಂದಿದೆ.

ಕೆಲವು ಕೆಲಸದ ಸ್ಥಳಗಳಲ್ಲಿ ಕುಡಿಯುವ ನೀರು, ವೈದ್ಯಕೀಯ ನೆರವು ಮತ್ತು ಮಕ್ಕಳ ಆರೈಕೆ ಸೌಲಭ್ಯಗಳ ಕೊರತೆ ಇದ್ದುದರಿಂದ ಮಹಿಳೆಯರು ಹಾಗೂ ಹಿರಿಯ ನಾಗರಿಕರು ಕೆಲಸದಲ್ಲಿ ಪಾಲ್ಗೊಳ್ಳಲು ಹಿಂಜರಿದಿದ್ದಾರೆ. ಇದು ಯೋಜನೆಯ ಮೂಲ ಉದ್ದೇಶಕ್ಕೆ ಧಕ್ಕೆ ತಂದಿದೆ.

ಅನೇಕ ಯೋಜನೆಗಳು ಅನುಮೋದನೆ ಪಡೆದಿದ್ದರೂ ಅವುಗಳನ್ನು ಕೈಗೆತ್ತಿಕೊಳ್ಳದೇ ಬಿಟ್ಟಿರುವುದು ಹಾಗೂ ಕೆಲವು ಕಾಮಗಾರಿಗಳು ಒಂದು ವರ್ಷಕ್ಕಿಂತ ಹೆಚ್ಚು ಕಾಲ ಅಪೂರ್ಣವಾಗಿರುವುದು ವರದಿಯಲ್ಲಿ ಉಲ್ಲೇಖವಾಗಿದೆ. ವಿವಿಧ ಇಲಾಖೆಗಳ ನಡುವಿನ ಸಮನ್ವಯದ ಕೊರತೆಯಿಂದ ಯೋಜನೆ ಅನುಷ್ಠಾನ ಸರಿಯಾಗಿ ನಡೆದಿಲ್ಲ ಎಂದೂ ತಿಳಿಸಲಾಗಿದೆ.

50 ಪ್ರಕರಣಗಳಲ್ಲಿ ಕಾರ್ಮಿಕರ ಹಾಜರಾತಿ ದಾಖಲೆ ಇಲ್ಲದೆ, ಸಹಿ ಅಥವಾ ಬೆರಳಚ್ಚು ಪಡೆಯದೇ ಸುಮಾರು ರೂ.5.51 ಲಕ್ಷ ಪಾವತಿಸಿರುವುದು ಪತ್ತೆಯಾಗಿದೆ. ಮತ್ತೊಂದೆಡೆ, 13 ಗ್ರಾಮ ಪಂಚಾಯಿತಿಗಳಲ್ಲಿ 17 ಕೆಲಸಗಳಲ್ಲಿ ಕೆಲಸ ಮಾಡಿದ 497 ಕಾರ್ಮಿಕರಿಗೆ ರೂ.10.98 ಲಕ್ಷ ವೇತನ ನೀಡದೇ ಇರುವುದು ಗಂಭೀರ ವಿಚಾರವಾಗಿದೆ.

## ‘ಎಸ್‌ಸಿಎಸ್‌ಪಿ/ಟಿಎಸ್‌ಪಿ ಹಣ ಗ್ಯಾರಂಟಿಗೆ ಬಳಕೆ, ಕೇಂದ್ರದ ಅನುದಾನ ಕುರಿತು ತಪ್ಪು ಮಾಹಿತಿ’

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಾಲ ತೀರಿಸಲು ಸಾಲ ಮಾಡುವ ಪರಿಸ್ಥಿತಿಗೆ ಕರ್ನಾಟಕವನ್ನು ತಂದಿದ್ದಾರೆ. ಇದು ಕ್ರೆಡಿಟ್ ಬಜೆಟ್ ಆಗಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಟೀಕೆ ಮಾಡಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪ್ರತಿಕ್ರಿಯೆ ಬಳಿಕ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿರುವ ಆಯವ್ಯಯ, ಕ್ರೆಡಿಟ್ ಬಜೆಟ್ ಆಗಿದೆ ಎಂದು ಈಗಾಗಲೇ ಹೇಳಿದ್ದೇನೆ. ಮುಖ್ಯಮಂತ್ರಿಯವರು ಹೇಳಿದಂತೆಯೇ ನಾನು ಡೀಪ್ ಆಗಿಯೇ ಅಧ್ಯಯನ ಮಾಡಿದ್ದು, ಎಷ್ಟೇ ಡೀಪ್ ಹೋದರೂ ಬಜೆಟ್‌ನಲ್ಲಿ ಸಾಲವೇ ಕಂಡುಬರುತ್ತಿದೆ. ನಾನು ಸಾಲರಾಮಯ್ಯ ಎಂದು ಹೇಳಿದರೆ ಅವರಿಗೆ ಮುಜುಗರವಾಗಬಹುದು. ಬಸವರಾಜ ಬೊಮ್ಮಾಯಿ ಸಿಎಂ ಆಗಿದ್ದಾಗ ಹೆಚ್ಚುವರಿಯಾಗಿ ಉಳಿತಾಯದ ಬಜೆಟ್ ಮಂಡಿಸಿದ್ದರು. ನಂತರ ಬಂದ ಸಿದ್ದರಾಮಯ್ಯನವರು ವಿತ್ತೀಯ ಕೊರತೆಯ ಬಜೆಟ್ ಮಂಡಿಸಿದ್ದು ಏಕೆ? ಎಂದು ಪ್ರಶ್ನಿಸಿದರು.

ಅಭಿವೃದ್ಧಿಗಾಗಿ ಸಾಲ ಮಾಡಿದ್ದೇನೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. 1.32 ಲಕ್ಷ ಕೋಟಿ ರೂ. ಸಾಲ ಮಾಡಲಾಗಿದೆ. 84,000 ಕೋಟಿ ರೂ. ಬಂಡವಾಳ ವೆಚ್ಚಕ್ಕೆ ನೀಡಿದರೆ, ಉಳಿದ ಹಣ ಗ್ಯಾರಂಟಿಗೆ ಖರ್ಚಾಗುತ್ತದೆ. ಸಿದ್ದರಾಮಯ್ಯನವರು ತಮಗೆ ಬೇಕಾದಂತೆ ಎಲ್ಲವನ್ನೂ ಬದಲಿಸುತ್ತಾರೆ. ಗ್ಯಾರಂಟಿಗಳಿಗೆ ನಿಗದಿಪಡಿಸಿದ ಸಂಪೂರ್ಣ ಹಣ ಕೊಟ್ಟಿದ್ದೇನೆ ಎಂದು ಹೇಳಿದ್ದರೂ, ಗೃಹಲಕ್ಷ್ಮಿಯ 5,000 ಕೋಟಿ ರೂ. ಎಲ್ಲಿಗೆ ಹೋಗಿದೆ ಎಂದು ಗೊತ್ತಿಲ್ಲ. 1.26 ಲಕ್ಷ ಮಹಿಳೆಯರಿಗೆ ಆ ಹಣ ತಲುಪಿಲ್ಲ. ಆಹಾರ ಇಲಾಖೆಯಲ್ಲಿ ಅನ್ನಭಾಗ್ಯಕ್ಕೆ 2025 ರಲ್ಲಿ 657 ಕೋಟಿ ರೂ. ಕೊಟ್ಟಿಲ್ಲ ಎಂದರು.



ಯಾವುದೇ ಸರ್ಕಾರ ಬಜೆಟ್ ಮಂಡಿಸಿದಾಗಲೂ ಮರುದಿನ ಪತ್ರಿಕೆಗಳಲ್ಲಿ ಉತ್ತಮವಾಗಿ ವರದಿ ಬರುತ್ತದೆ. ಇದನ್ನೇ ಸರ್ಕಾರದ ಕಾರ್ಯವೈಖರಿಯ ಮಾನದಂಡ ಮಾಡಿಕೊಳ್ಳಬಾರದು. ಪಿಆರ್‌ಎಸ್ ಸರ್ವೆ ಪ್ರಕಾರ, ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರಕ್ಕೆ ದೆಹಲಿ ಸರ್ಕಾರ 14.5% ನೀಡಿದರೆ, ಕರ್ನಾಟಕ 4.9% ನೀಡುತ್ತಿದೆ. ರಾಷ್ಟ್ರೀಯ ಪ್ರಮಾಣ ಸರಾಸರಿ 8.3% ಇದೆ. ಗ್ರಾಮೀಣಾಭಿವೃದ್ಧಿಗೆ ಕರ್ನಾಟಕ 2.9% ಖರ್ಚು ಮಾಡುತ್ತಿದ್ದರೆ, ಒಂದು ರಾಜ್ಯದಲ್ಲಿ 12.4% ಖರ್ಚು ಮಾಡಲಾಗುತ್ತಿದೆ. ಹೀಗೆ ಪ್ರತಿ ಕ್ಷೇತ್ರದಲ್ಲಿ ಕರ್ನಾಟಕ ಹಿಂದುಳಿದಿದೆ. ಸಿಎಂ ಸಿದ್ದರಾಮಯ್ಯನವರ ಪ್ರಕಾರ ಎಲ್ಲದರಲ್ಲೂ ನಾವೇ ಮೊದಲು. ಆದರೆ ಸಾಲ ಮಾಡುವುದರಲ್ಲೂ ನಾವೇ ಮೊದಲು ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಮುಂದಿನ ವರ್ಷವೂ ಒಂದೂವರೆ ಲಕ್ಷ ಕೋಟಿ ರೂ. ಸಾಲ ಮಾಡಬೇಕಾಗಬಹುದು. ಸಾಲ ತೀರಿಸಲು ಮತ್ತೆ ಸಾಲ ಮಾಡಬೇಕಾದ ಸ್ಥಿತಿ ಬಂದಿದೆ ಎಂದರು.

ಇಲಾಖೆಗಳು ಹಾಗೂ ನಿಗಮಗಳಿಗೆ ಬಜೆಟ್‌ನಲ್ಲಿ ಹಣ ಕಡಿತವಾಗಿದೆ. ದೇವರಾಜ ಅರಸು ನಿಗಮಕ್ಕೆ 73% ಕಡಿತವಾಗಿದೆ. ಬಿಜೆಪಿ ಸರ್ಕಾರ 190 ಕೋಟಿ ರೂ. ನೀಡಿದ್ದರೆ, ಕಾಂಗ್ರೆಸ್ ಸರ್ಕಾರ ಈ ಬಾರಿ 50 ಕೋಟಿ ರೂ. ನೀಡಿದೆ. ಮರಾಠ ಅಭಿವೃದ್ಧಿ ನಿಗಮಕ್ಕೆ 75% (25 ಕೋಟಿ ರೂ.) ಕಡಿತವಾಗಿದೆ. ಹೀಗೆ ಎಲ್ಲ ಕಡೆ ಹಣ ಕಡಿತ ಮಾಡಿ, ಬಸವಣ್ಣ, ಅಂಬೇಡ್ಕರ್, ಬುದ್ಧ ಮೊದಲಾದವರ ಹೆಸರು ಉಲ್ಲೇಖಿಸಿದರೆ ಏನು ಪ್ರಯೋಜನ? ಪ್ರತಿ ವರ್ಷ ಎಸ್‌ಸಿಎಸ್‌ಪಿ/ಟಿಎಸ್‌ಪಿ ಹಣವನ್ನು ಗ್ಯಾರಂಟಿಗೆ ವರ್ಗಾಯಿಸಲಾಗುತ್ತಿದೆ. ಅರಣ್ಯದಲ್ಲಿ ಅತಿಥಿ ಗೃಹ ಕಟ್ಟಲು ಈ ಹಣ ಬಳಕೆಯಾಗಿದೆ ಎಂದು ದೂರಿದರು. ಗುತ್ತಿಗೆದಾರರಿಗೆ 38,000 ಕೋಟಿ ರೂ., ಎಸ್ಕಾಂಗಳಿಗೆ 12,500 ಕೋಟಿ ರೂ., ಸಾರಿಗೆ ಇಲಾಖೆಗೆ ಶಕ್ತಿ ಯೋಜನೆಗಾಗಿ 4,850 ಕೋಟಿ ರೂ., ಬಿಬಿಎಂಪಿ ಗುತ್ತಿಗೆದಾರರಿಗೆ 2500 ಕೋಟಿ ರೂ., 26 ಸಾವಿರ ಅನಾಥ ಮಕ್ಕಳಿಗೆ 73 ಕೋಟಿ ರೂ. ಮಾಸಾಶನ, ಭಿಕ್ಷುಕರ ಕಲ್ಯಾಣಕ್ಕೆ 23 ಕೋಟಿ ರೂ. ಹೀಗೆ ಅನೇಕ ಕಡೆ ಬಾಕಿ ಉಳಿಸಿಕೊಳ್ಳಲಾಗಿದೆ ಎಂದರು.

ಕಳೆದ ಬಜೆಟ್ ಪ್ರಕಾರ, ಜನವರಿ ಅಂತ್ಯಕ್ಕೆ ಸರ್ಕಾರದಿಂದ ಒಟ್ಟು ಖರ್ಚುಗಳಿಗೆ 3,39,277.31 ಕೋಟಿ ರೂ. ನೀಡಬೇಕಿತ್ತು. ಆದರೆ ಸರ್ಕಾರದಿಂದ 2,46,465 ಕೋಟಿ ರೂ. ಮಾತ್ರ ಬಿಡುಗಡೆಯಾಗಿದೆ. ಇನ್ನು 94,761.42 ಕೋಟಿ ರೂ. ಬಿಡುಗಡೆ ಮಾಡಿಲ್ಲ. ಬಿಡುಗಡೆಯಾದ ಹಣದಲ್ಲಿ 36,000 ಕೋಟಿ ರೂ. ಖರ್ಚು ಮಾಡಿಲ್ಲ. ಒಟ್ಟು ಅನುದಾನದಲ್ಲಿ 41% ಖರ್ಚು ಮಾಡಿಲ್ಲ. ಕಳೆದ ಮೂರು ವರ್ಷದಿಂದಲೂ ಹೀಗೆಯೇ ಆಗುತ್ತಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಹನ್ನೊಂದು ವರ್ಷಗಳಲ್ಲಿ ಕರ್ನಾಟಕಕ್ಕೆ 4,52,049 ಕೋಟಿ ರೂ. ನೀಡಿದೆ. 2,36,009 ಕೋಟಿ ರೂ. ಅನುದಾನ ನೀಡಿದೆ. ರಸಗೊಬ್ಬರ ಸಬ್ಸಿಡಿಯಾಗಿ 46,429 ಕೋಟಿ ರೂ., ಮೆಟ್ರೊಗೆ 41,993 ಕೋಟಿ ರೂ., ಜಲಜೀವನ್ ಮಿಷನ್‌ಗೆ 24,813 ಕೋಟಿ ರೂ. ನೀಡಿದೆ. ಒಟ್ಟಾರೆಯಾಗಿ 11,45,924 ಕೋಟಿ ರೂ. ಹಣ ಕೇಂದ್ರದ ಎನ್‌ಡಿಎ ಸರ್ಕಾರದಿಂದ ಕರ್ನಾಟಕಕ್ಕೆ ಬಂದಿದೆ ಎಂದು ಹೇಳಿದರು.

ಮೆಟ್ರೊ ಯೋಜನೆಯ 67460 ಕೋಟಿ ರೂ. ನಲ್ಲಿ ರಾಜ್ಯದ ಪಾಲು 59,376 ಕೋಟಿ ರೂ. ಹಾಗೂ ಕೇಂದ್ರದಿಂದ 8,084 ಕೋಟಿ ರೂ. ಬಂದಿದೆ ಎಂದು ಬಜೆಟ್ ಪುಸ್ತಕದಲ್ಲಿ ಹೇಳಲಾಗಿದೆ.

ರಾಜ್ಯದ ಪಾಲು 88% ಹಾಗೂ ಕೇಂದ್ರದ್ದು 12% ಎಂದು ಹೇಳಲಾಗಿದೆ. ಸಂಸದ ಪಿ.ಸಿ.ಮೋಹನ್ ಈ ಬಗ್ಗೆ ಲೋಕಸಭೆಯಲ್ಲಿ ಪ್ರಶ್ನೆ ಕೇಳಿದ್ದಾರೆ. ಕೇಂದ್ರ ನಗರಾಭಿವೃದ್ಧಿ ಸಚಿವರು ನೀಡಿದ ಉತ್ತರದ ಪ್ರಕಾರ, 2026 ಮಾರ್ಚ್ 5 ರವರೆಗೆ ಮೆಟ್ರೊ ಕಾಮಗಾರಿಗೆ 27,184 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಬಿಡಿಎ ಅಧ್ಯಕ್ಷರಾದ ಹ್ಯಾರಿಸ್ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಪ್ರಶ್ನೆ ಕೇಳಿದ್ದು, ಅದರಲ್ಲಿ ಮೆಟ್ರೊಗೆ ಕೇಂದ್ರ ಸರ್ಕಾರ 33,381.69 ಕೋಟಿ ರೂ. ನೀಡಿದೆ ಹಾಗೂ ಕೇಂದ್ರ-ರಾಜ್ಯ ಎರಡೂ ಸೇರಿ 60,123.39 ಕೋಟಿ ರೂ. ವೆಚ್ಚವಾಗಿದೆ ಎಂದು ತಿಳಿಸಲಾಗಿದೆ. ಬಜೆಟ್ ಪುಸ್ತಕದಲ್ಲಿ ಮತ್ತು ಡಿ.ಕೆ.ಶಿವಕುಮಾರ್ ಉತ್ತರದಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಹಾಗಾದರೆ ಬಜೆಟ್ ಪುಸ್ತಕ ಸರಿಯೋ ತಪ್ಪೋ ಎಂದು ತಿಳಿಸಬೇಕು ಎಂದರು.

## ಸೆಂಟ್ರಮ್ ಹೌಸಿಂಗ್ ಫೈನಾನ್ಸ್‌ನ ಬಹುಪಾಲು ಪಾಲುದಾರಿಕೆ ಸ್ವಾಧೀನ



ಮುಂಬೈ

ಭಾರತದಾದ್ಯಂತ ಸಾಲ ಸೌಲಭ್ಯ ವಂಚಿತ ಕುಟುಂಬಗಳಿಗೆ ಮನೆ ಮಾಲೀಕತ್ವವನ್ನು ಹೆಚ್ಚು ಸುಲಭವಾಗಿಸುವ ತನ್ನ ಬದ್ಧತೆಯನ್ನು ಬಲಪಡಿಸಲು, ವೀವರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್, ಸೆಂಟ್ರಮ್ ಕ್ಯಾಪಿಟಲ್ ಲಿಮಿಟೆಡ್‌ನಿಂದ ಸೆಂಟ್ರಮ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನ ಶೇ. 75.01 ರಷ್ಟು ನಿಯಂತ್ರಣ ಪಾಲನ್ನು ಸ್ವಾಧೀನಪಡಿಸಿಕೊಂಡಿದೆ. ಈ ವಹಿವಾಟು ಅಗತ್ಯವಿರುವ ಎಲ್ಲಾ ನಿಯಂತ್ರಕ ಮತ್ತು ಷೇರುದಾರರ ಅನುಮೋದನೆಗಳನ್ನು ಪಡೆದುಕೊಂಡಿದೆ.

ಭಾರತದಾದ್ಯಂತ, ಸ್ವಂತ ಮನೆಯನ್ನು ಹೊಂದುವುದು ಕುಟುಂಬಗಳ ದೊಡ್ಡ ಆಸೆಗಳಲ್ಲಿ ಒಂದಾಗಿದೆ. ಆದಾಗ್ಯೂ, ಅನೇಕರಿಗೆ, ವಿಶೇಷವಾಗಿ ಸಣ್ಣ ಪಟ್ಟಣಗಳಲ್ಲಿರುವವರಿಗೆ ಮತ್ತು ಸ್ವಯಂ ಉದ್ಯೋಗಿಗಳಿಗೆ, ಔಪಚಾರಿಕ ಗೃಹ ಸಾಲಗಳನ್ನು ಪಡೆಯುವುದು ಇಂದಿಗೂ ದೊಡ್ಡ ಸವಾಲಾಗಿದೆ. ಸೀಮಿತ ದಾಖಲೆಗಳು, ಅನಿಯಮಿತ ಆದಾಯ ಮತ್ತು ಸೂಕ್ತ ಹಣಕಾಸು ಉತ್ಪನ್ನಗಳ ಕೊರತೆಯಿಂದಾಗಿ ಇವರು ಸಾಂಪ್ರದಾಯಿಕ ಲೇವಾದೇವಿಗಾರರಿಂದ ಹೊರಗುಳಿದಿದ್ದಾರೆ.

ಈ ಸ್ವಾಧೀನದ ಮೂಲಕ, ವೀವರ್ ಸರ್ವಿಸಸ್ ಸರಳ, ವಿಶ್ವಾಸಾರ್ಹ ಮತ್ತು ಒಳಗೊಳ್ಳುವ ಗೃಹ ಸಾಲ ಪರಿಹಾರಗಳನ್ನು ಒದಗಿಸುವ ಮೂಲಕ ಈ ಅಂತರವನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿದೆ.

ಅಲೂಈಐ ಅನ್ನು ಪೀಪಲ್ ಹೋಮ್ ಫೈನಾನ್ಸ್ ನೊಂದಿಗೆ ಸಂಯೋಜಿಸುವ ಮೂಲಕ, ಕಂಪನಿಯು ಸುಮಾರು 140 ಶಾಖೆಗಳ ಜಾಲ ಮತ್ತು 2,000 ಕೋಟಿಗೂ ಅಧಿಕ ಮೌಲ್ಯದ ನಿರ್ವಹಣೆಯ ಆಸ್ತಿಯೊಂದಿಗೆ ಬಲಿಷ್ಠ ವೇದಿಕೆಯನ್ನು ನಿರ್ಮಿಸುತ್ತಿದೆ. ಈ ವಿಸ್ತರಿತ ಉಪಸ್ಥಿತಿಯು ಕಂಪನಿಯು ಮಾರುಕಟ್ಟೆಗಳ ಆಳಕ್ಕೆ ತಲುಪಲು ಸಹಾಯ ಮಾಡುತ್ತದೆ ಮತ್ತು ಅಗತ್ಯವಿರುವ ಗ್ರಾಹಕರಿಗೆ ಗೃಹ ಸಾಲ ಸೇವೆಗಳನ್ನು ಇನ್ನಷ್ಟು ಹತ್ತಿರವಾಗಿಸುತ್ತದೆ.

ಈ ಬೆಳವಣಿಗೆಯ ಕುರಿತು ಪ್ರತಿಕ್ರಿಯಿಸಿದ ವೀವರ್ ಸರ್ವಿಸಸ್‌ನ ಪ್ರವರ್ತಕ ಮತ್ತು ಕಾರ್ಯಕಾರಿ ಉಪಾಧ್ಯಕ್ಷರಾದ ಸತ್ರಜಿತ್ ಭಟ್ಟಾಚಾರ್ಯ ಅವರು ಹೀಗೆ ಹೇಳಿದರು, "ಲಕ್ಷಾಂತರ ಕುಟುಂಬಗಳಿಗೆ ಸ್ವಂತ ಮನೆ ಹೊಂದುವುದು ಜೀವನದ ಪ್ರಮುಖ ಗುರಿಯಾಗಿರುತ್ತದೆ. ಸಾಲ ಸೌಲಭ್ಯದಿಂದ ವಂಚಿತರಾದವರಿಗೆ ಗೃಹ ಹಣಕಾಸಿನ ಲಭ್ಯತೆಯನ್ನು ಸುಲಭಗೊಳಿಸುವ ಮೂಲಕ ಅವರ ಈ ಕನಸಿನ ಪ್ರಯಾಣವನ್ನು ಸರಳಗೊಳಿಸುವುದು ನಮ್ಮ ಮುಖ್ಯ ಉದ್ದೇಶವಾಗಿದೆ.

## ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ

ಯಲಹಂಕ

ಹೆಸರುಘಟ್ಟ ಹೋಬಳಿಯ ಹೊಸಹಳ್ಳಿಪಾಳ್ಯ ಹಾಲು ಉತ್ಪಾದಕರ ಸಹಕಾರ ಸಂಘದ ಮೊದಲನೇ ಮಹಡಿಯ ನೂತನ ಕಟ್ಟಡ ಕಾಮಗಾರಿಗೆ ಚಿಕ್ಕಬಳ್ಳಾಪುರ ಸಂಸದ ಡಾ.ಕೆ.ಸುಧಾಕರ್, ಬೆಂಗಳೂರು ಹಾಲು ಒಕ್ಕೂಟದ ನಿರ್ದೇಶಕ ಸತೀಶ್ ಕಡತನಮಲೆ ಅವರು ಶಂಕುಸ್ಥಾಪನೆ ನೆರವೇರಿಸಿದರು.

ಸಂಸದರನ್ನು ವಿವಿಧ ಜಾನಪದ ಕಲಾ ತಂಡಗಳ ಕಲಾ ಪ್ರದರ್ಶನದೊಂದಿಗೆ ಗ್ರಾಮಕ್ಕೆ ಅದ್ಧೂರಿಯಾಗಿ ಸ್ವಾಗತಿಸಲಾಯಿತು.

ಈ ವೇಳೆ ಡಾ.ಕೆ.ಸುಧಾಕರ್ ಅವರು ಮಾತನಾಡಿ 'ಬೆಂಗಳೂರು ಹಾಲು ಒಕ್ಕೂಟದ ಪ್ರಸಕ್ತ ಆಡಳಿತ ಮಂಡಳಿ ಅತ್ಯಂತ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದ್ದು, ಹೊಸ ಯೋಜನೆಗಳು, ರೈತಪರವಾದ ಹಲವು ಕಾರ್ಯಕ್ರಮಗಳ ಮೂಲಕ ಲಾಭಾಂಶದಲ್ಲಿ ಮುನ್ನುಗ್ಗುತ್ತಿರುವ ಬಗ್ಗೆ ಕೇಳಿದ್ದೇನೆ, ಹಾಲು ಉತ್ಪಾದಕ ರೈತರ ಹಿತದೃಷ್ಟಿಯಿಂದ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರು ಹಾಲು ಒಕ್ಕೂಟದ ಆಡಳಿತ ಮಂಡಳಿಯ ಸಮರ್ಥ ಕಾರ್ಯವೈಖರಿ ಪ್ರಶಂಸಾರ್ಹವಾದುದು ಎಂದು ಮೆಚ್ಚಿಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಜಿ.ಪಂ.ಮಾಜಿ ಸದಸ್ಯ ಲಕ್ಷ್ಮೀಪುರ ಸೀನಪ್ಪ, ಬಿಜೆಪಿ ಮುಖಂಡರಾದ ಎಚ್.ಬಿ.ಹನುಮಯ್ಯ, ಕೆ.ಸಿ.ಬಾಬು, ಅಜಯ್, ಕೆ.ಆರ್.ತಿಮ್ಮೇಗೌಡ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ನವಾನಂದ ಸೇರಿದಂತೆ ಎಲ್ಲಾ ನಿರ್ದೇಶಕರು, ಸಹಕಾರ ಸಂಘದ ಸದಸ್ಯರು, ಮುಖ್ಯ ಕಾರ್ಯನಿರ್ವಾಹಕರು, ಶಿಬಿರ ಕಚೇರಿಯ ಅಧಿಕಾರಿಗಳು ಹಾಗೂ ಗ್ರಾಮಸ್ಥರಿದ್ದರು.



## ಹಿರಿಯ ರಂಗ ನಟ ಶಂಕರ್ ಭಟ್ ಅವರಿಗೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ



ವಿಜಯನಗರ ಜಿಲ್ಲೆ ಹೂವಿನ ಹಡಗಲಿಯ ರಂಗ ಭಾರತಿ ಸಭಾಂಗಣದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ವತಿಯಿಂದ 2024-25 ಸಾಲಿನ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಅದ್ದೂರಿಯಾಗಿ ನೆರವೇರಿತು. ಈ ಸಂದರ್ಭದಲ್ಲಿ ಹಿರಿಯ ರಂಗ ನಟರಾದ ಶಂಕರ್ ಭಟ್ ಅವರಿಗೆ ಐದು ದಶಕಗಳ ನಿರಂತರ ರಂಗ ಸೇವೆಯನ್ನು ಗುರುತಿಸಿ ಪ್ರತಿಷ್ಠಿತ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಮರುಳಸಿದ್ದಪ್ಪ, ಮಂಜುನಾಥ್, ಶಶಿಧರ ಅಡಪ, ಎಂ.ಪಿ. ಸುಮಾ ವಿಜಯ, ಬಿ. ನೀಲಮ್ಮ, ಕೆ.ವಿ. ನಾಗರಾಜ ಮೂರ್ತಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದು ಪ್ರಶಸ್ತಿ ಪ್ರದಾನ ಮಾಡಿದರು. ರಂಗಭೂಮಿಗೆ ಶಂಕರ್ ಭಟ್ ಅವರ ಕೊಡುಗೆಯನ್ನು ಸ್ಮರಿಸಿ ಗಣ್ಯರು ಪ್ರಶಂಸೆ ವ್ಯಕ್ತಪಡಿಸಿದರು.

## ಟಿಸಿಐ ರೇಸಿಂಗ್ ಮತ್ತೊಮ್ಮೆ ಜಾಗತಿಕ ವೇದಿಕೆಯಲ್ಲಿ ಮಿಂಚಲು ಸಜ್ಜು

ಬೆಂಗಳೂರು

ಭಾರತದ ಪ್ರಮುಖ ಕಾರು ರ್‍ಯಾಲಿ ಸಂಸ್ಥೆಯಾದ ಟಿಸಿಐ ರೇಸಿಂಗ್ ಮತ್ತೊಮ್ಮೆ ಜಾಗತಿಕ ವೇದಿಕೆಯಲ್ಲಿ ಮಿಂಚಲು ಸಜ್ಜಾಗಿದೆ. ರ್‍ಯಾಲಿ ಐಲಾಸ್ ಕ್ಯಾನರಿಯಾಸ್ 2026 ಮೂಲಕ ವಿಶ್ವ ರ್‍ಯಾಲಿ ಚಾಂಪಿಯನ್‌ಶಿಪ್‌ನಲ್ಲಿ ತಂಡವು ಭಾಗವಹಿಸುತ್ತಿದ್ದು, ಯುವ ಚಾಲಕ ಡೀನ್ ಮಸ್ಕರೇನಸ್ ತಮ್ಮ ಚೊಚ್ಚಲ ಪ್ರವೇಶ ಮಾಡುತ್ತಿದ್ದಾರೆ.

ಭಾರತದ ತಂಡವೊಂದು 18 ವರ್ಷಗಳ ಬಳಿಕ ಡಬ್ಲ್ಯುಆರ್‌ಸಿಯಲ್ಲಿ ಮತ್ತೆ ಕಾಣಿಸಿಕೊಳ್ಳುತ್ತಿರುವುದು ಮೋಟಾರ್ ಸ್ಪೋರ್ಟ್ ಕ್ಷೇತ್ರದಲ್ಲಿ ಮಹತ್ವದ ಮೈಲುಗಲ್ಲಾಗಿದ್ದು, ದೇಶದ ಕ್ರೀಡಾಭಿಮಾನಿಗಳಿಗೆ ಹೆಮ್ಮೆಯ ಕ್ಷಣವಾಗಿದೆ.

2025ರ ಐಎನ್‌ಆರ್‌ಸಿ ಡಬಲ್ ಚಾಂಪಿಯನ್ ಡೀನ್ ಮಸ್ಕರೇನಸ್ ಹಾಗೂ ಕೋ-ಡ್ರೈವರ್ ಗಗನ್ ಕರುಂಬಯ್ಯ ಅವರು ಏಪ್ರಿಲ್‌ನಲ್ಲಿ ನಡೆಯಲಿರುವ ರ್‍ಯಾಲಿ ಐಲಾಸ್ ಕ್ಯಾನರಿಯಾಸ್ 2026 ಚಾಂಪಿಯನ್‌ಶಿಪ್‌ನ ಡಬ್ಲ್ಯುಆರ್‌ಸಿ3 ವರ್ಗದಲ್ಲಿ ಸ್ಪರ್ಧಿಸಲಿದ್ದಾರೆ ಎಂದು ಪ್ರಕಟಿಸಲಾಯಿತು.

ಬೆಂಗಳೂರು ಮೂಲದ ಈ ತಂಡದ ಭಾಗವಹಿಸುವಿಕೆ ಕರ್ನಾಟಕಕ್ಕೂ ಹಾಗೂ ದೇಶಕ್ಕೂ ಗೌರವ ತರುತ್ತಿದೆ. ಜಾಗತಿಕ ಮಟ್ಟದಲ್ಲಿ ಭಾರತದ ನರೇನ್ ಕುಮಾರ್ ಮತ್ತು ಗೌರವ್ ಗಿಲ್ ನಂತರ ಟಿಸಿಐ ರೇಸಿಂಗ್ ಧ್ವಜವನ್ನು ಹಾರಿಸುವ ಮೂರನೇ ಚಾಲಕರಾಗಿ ಡೀನ್ ಮಸ್ಕರೇನಸ್ ಹೊರಹೊಮ್ಮಲಿದ್ದಾರೆ.




ಈ ಚಾಂಪಿಯನ್‌ಶಿಪ್‌ಗಾಗಿ ಟಿಸಿಐ ರೇಸಿಂಗ್ ಯುರೋಪಿನ ಪ್ರಸಿದ್ಧ ರ್‍ಯಾಲಿ ಸ್ಪೆಷಲಿಸ್ಟ್ ಸಂಸ್ಥೆ ಪಿಎಚ್ ಸ್ಪೋರ್ಟ್ ಜೊತೆ ಪಾಲುದಾರಿಕೆ ಮಾಡಿಕೊಂಡಿದೆ. ಡೀನ್ ಮತ್ತು ಗಗನ್ ಅವರು ಫೋರ್ಡ್ ಫಿಯೆಸ್ಟಾ ರ್‍ಯಾಲಿ 3 ಕಾರಿನಲ್ಲಿ ಸ್ಪರ್ಧಿಸಲಿದ್ದಾರೆ.

ಈ ಕುರಿತು ಸಿದ್ವಿನ್ ಎನರ್ಜಿ ಎಂಜಿನಿಯರಿಂಗ್ ಸಂಸ್ಥೆಯ ಅಧ್ಯಕ್ಷ ಮೋಹನ್ ನಾಗರಾಜನ್ ಮಾತನಾಡಿ, "ನಾವು ಟಿಸಿಐ ರೇಸಿಂಗ್ ತಂಡವನ್ನು ಕೇವಲ ಗೆಲುವಿಗಾಗಿ ಮಾತ್ರ ಕಟ್ಟಿಲ್ಲ. ಪ್ರತಿ ಸ್ಪರ್ಧೆ, ಪ್ರತಿ ಸೀಸನ್ ನಮ್ಮ ಬೆಳವಣಿಗೆಗೆ ಕಾರಣವಾಗಿದೆ. ಡೀನ್ ಮತ್ತು ಗಗನ್ ಈಗ ಡಬ್ಲ್ಯುಆರ್‌ಸಿಗೆ ಸಿದ್ಧರಾಗಿದ್ದಾರೆ. ಭಾರತವು ವಿಶ್ವದರ್ಜೆಯ ರ್‍ಯಾಲಿ ಪ್ರತಿಭೆಗಳನ್ನು ಹೊಂದಿದೆ ಎಂಬುದನ್ನು ಜಗತ್ತಿಗೆ ತೋರಿಸುವ ಸಮಯ ಬಂದಿದೆ" ಎಂದು ಹೇಳಿದರು.

## 'ಕೋಸ್ಟಲ್ ಸ್ಟಾರ್ಟ್‌ಅಪ್ ಫೆಸ್ಟ್ 2026' ಆಯೋಜನೆ

ಬೆಂಗಳೂರು

ಮಂಗಳೂರಿನ ಫಿಜಾ ಬೈ ನೆಕ್ಸಸ್ ಮಾಲ್‌ನಲ್ಲಿ ಮಾರ್ಚ್ 28 ಮತ್ತು 29 ರಂದು 'ಕೋಸ್ಟಲ್ ಸ್ಟಾರ್ಟ್‌ಅಪ್ ಫೆಸ್ಟ್ 2026' ಆಯೋಜನೆ

ಮಂಗಳೂರು, ಮಾರ್ಚ್ 25-03-2026: ತುಳುನಾಡಿನ ಸಮೃದ್ಧ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ, ಮಂಗಳೂರಿನ ಫಿಜಾ ಬೈ ನೆಕ್ಸಸ್ ಮಾಲ್ ಇದೇ ಮಾರ್ಚ್ 28 ಮತ್ತು 29 ರಂದು ಎರಡು ದಿನಗಳ ವೈಭವದ 'ಕೋಸ್ಟಲ್ ಸ್ಟಾರ್ಟ್‌ಅಪ್ ಫೆಸ್ಟ್ 2026' ಅನ್ನು ಆಯೋಜಿಸಿದೆ.

ಈ ಮೇಳದಲ್ಲಿ ಆಯ್ಕೆಯಾದ 25-30 ಸ್ಟಾರ್ಟ್‌ಅಪ್‌ಗಳು, 10-12 ಹೂಡಿಕೆದಾರರು ಮತ್ತು ಪ್ರಮುಖ ಉದ್ಯಮ ತಜ್ಞರು ಭಾಗವಹಿಸಲಿದ್ದಾರೆ. ಸುಮಾರು 60,000ಕ್ಕೂ ಹೆಚ್ಚು ಜನರು ಭೇಟಿ ನೀಡುವ ನಿರೀಕ್ಷೆಯಿರುವ ಈ ಕಾರ್ಯಕ್ರಮವು, ಹೊಸ ಆಲೋಚನೆಗಳನ್ನು ಯಶಸ್ವಿ ಉದ್ಯಮಗಳನ್ನಾಗಿ ಪರಿವರ್ತಿಸಲು ಮತ್ತು ನೈಜ ಸಹಯೋಗಕ್ಕೆ ವೇದಿಕೆ ಕಲ್ಪಿಸಲಿದೆ.




ಮಾಲ್‌ನ ಏಟ್ರಿಯಂ ಮತ್ತು ಮೂರನೇ ಮಹಡಿಯಲ್ಲಿ ಒಟ್ಟು 30 ಮಳಿಗೆಗಳನ್ನು ಸ್ಥಾಪಿಸಲಾಗಿದ್ದು, ಸಂದರ್ಶಕರು ಅತ್ಯಾಧುನಿಕ ಉದ್ಯಮ ಮಾದರಿಗಳನ್ನು ಹತ್ತಿರದಿಂದ ನೋಡಬಹುದು.ಉದ್ಯಮಿಗಳಿಗೆ ಹೂಡಿಕೆದಾರರೊಂದಿಗೆ ನೇರವಾಗಿ ಸಂವಹನ ನಡೆಸಲು ಮತ್ತು ತಮ್ಮ ಕನಸಿನ ಯೋಜನೆಗಳಿಗೆ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಇದು ಉತ್ತಮ ಅವಕಾಶ.ಯಾವುದೇ ಅಡೆತಡೆಗಳಿಲ್ಲದೆ ನೇರ ಸಂವಹನ ಮತ್ತು ಉನ್ನತ ಮಟ್ಟದ ಕಾರ್ಯತಂತ್ರಗಳಿಗೆ ಇಲ್ಲಿ ಒತ್ತು ನೀಡಲಾಗಿದೆ. ಸಮಯ: ಬೆಳಗ್ಗೆ 10.00 ರಿಂದ ರಾತ್ರಿ 10.00 ರವರೆಗೆ

## ಐಆರ್‌ಡಿಎಐ ವಾರ್ಷಿಕ ವರದಿ ಬಿಡುಗಡೆ

ಮೈಸೂರು

ಭಾರತದ ಜೀವ ವಿಮಾ ಕ್ಷೇತ್ರವು ಕುಟುಂಬಗಳನ್ನು ರಕ್ಷಿಸುವುದು ಮತ್ತು ದೀರ್ಘಕಾಲದ ಆರ್ಥಿಕ ಯೋಜನೆಗೆ ಬೆಂಬಲ ನೀಡಲು ಪ್ರಮುಖ ಪಾತ್ರವನ್ನು ವಹಿಸಲು ಮುಂದುವರಿಸಿದೆ.

ಐಆರ್‌ಡಿಎಐ ವಾರ್ಷಿಕ ವರದಿ 2024-25 ಪ್ರಕಾರ, ಕ್ಯೂವೈ25ರಲ್ಲಿ ಜೀವ ವಿಮಾ ಕಂಪನಿಗಳು ಒಟ್ಟು ರೂ.6.30 ಲಕ್ಷ ಕೋಟಿ ಪ್ರಯೋಜನಗಳನ್ನು ತನ್ನ ಗ್ರಾಹಕರಿಗೆ ಪಾವತಿಸಿವೆ. ಈ ಸಂಖ್ಯೆ ಜೀವ ವಿಮಾ ಉದ್ಯಮವು ಭಾರತೀಯ ಕುಟುಂಬಗಳಿಗೆ ಜೀವನದ ವಿವಿಧ ಹಂತಗಳಲ್ಲಿ-ರಕ್ಷಣೆ, ನಿವೃತ್ತಿ ಮತ್ತು ಸಂಪತ್ತು ನಿರ್ಮಾಣ ಮಾಡುವ ನೀಡುವ ಬೆಂಬಲವನ್ನು ತೋರಿಸುತ್ತದೆ.

"ಭಾರತದ ಜೀವ ವಿಮಾ ಕಂಪನಿಗಳ ಕಾರ್ಯಕ್ಷಮತೆ, ನಿರಂತರತೆ ಪ್ರಮಾಣಗಳು, ಪ್ರಯೋಜನ ಪಾವತಿಗಳು ಮತ್ತು ಪರಿಹಾರ ಮಟ್ಟಗಳ ಪ್ರಮುಖ ಅಂಕಿಅಂಶಗಳಿಂದ ಜೀವ ವಿಮೆ ಕುಟುಂಬಗಳ ಆರ್ಥಿಕ ಸಂಪತ್ತಿನ ಸಂಗ್ರಹವಾಗಿ ಕೆಲಸ ಮಾಡುತ್ತದೆ, ಇದು ದ್ರವತೆ ಮತ್ತು ದೀರ್ಘಕಾಲದ ಸ್ಥಿರತೆಯನ್ನು ಒದಗಿಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಪಾವತಿಗಳಲ್ಲಿ 92% ಜೀವನ ಪ್ರಯೋಜನಗಳತ್ತ ಹೋಗಿರುವುದು, ಈ ಉದ್ಯಮವು ಕೇವಲ ರಕ್ಷಣೆಯಷ್ಟೇ ಅಲ್ಲ, ದೀರ್ಘಕಾಲದ ಆರ್ಥಿಕ ಪಾಲುದಾರವಾಗಿಯೂ ಕಾರ್ಯನಿರ್ವಹಿಸುತ್ತಿರುವುದನ್ನು ತೋರಿಸುತ್ತದೆ. ನಮ್ಮ ಅಭಿಯಾನಗಳ ಮೂಲಕ, ಕುಟುಂಬಗಳ ಆರ್ಥಿಕ ಭದ್ರತೆಯನ್ನು ಕಾಯ್ದುಕೊಳ್ಳುವಲ್ಲಿ ಜೀವ ವಿಮೆಯ ಮಹತ್ವವನ್ನು ಜನರಿಗೆ ತಿಳಿಸುತ್ತೇವೆ.

ಎಂದು ಇನ್ಶೂರೆನ್ಸ್ ಅವೇರ್‌ನೆಸ್ ಸಮಿತಿಯ ಅಧ್ಯಕ್ಷರಾದ ಕಮಲೇಶ್ ರಾವ್ ಹೇಳಿದರು.

ಒಟ್ಟು ಪಾವತಿಸಿದ ಪ್ರಯೋಜನಗಳಲ್ಲಿ ರೂ.2.33 ಲಕ್ಷ ಕೋಟಿ ಹಣವನ್ನು ವಿತ್‌ಡ್ರಾ ಮತ್ತು ಸರಂಡರ್ ರೂಪದಲ್ಲಿ ನೀಡಲಾಗಿದೆ, ಇದು ಕಳೆದ ವರ್ಷಕ್ಕಿಂತ 1.77% ಹೆಚ್ಚಾಗಿದೆ. ನಿರಂತರತೆ ಪ್ರಮಾಣಗಳು ಉತ್ತಮವಾಗಿರುವುದರಿಂದ, ಇದು ಯೋಜಿತವಾಗಿ ಪಾಲಿಸಿ ಮುಗಿಸುವಿಕೆಯನ್ನು ಸೂಚಿಸುತ್ತದೆ.

ಪಾಲಿಸಿ ಪಡೆದವರು ತಮ್ಮ ಮಕ್ಕಳ ಶಿಕ್ಷಣ, ಸ್ವಂತ ಮನೆ ಖರೀದಿ, ವಿದೇಶ ಪ್ರವಾಸ ಮುಂತಾದ ಜೀವನದ ಗುರಿಗಳನ್ನು ಸಾಧಿಸಲು ಈ ಹಣವನ್ನು ಬಳಸುತ್ತಿದ್ದಾರೆ. ಜೀವ ವಿಮೆ ಈಗಲೂ ಆರ್ಥಿಕ ರಕ್ಷಣೆಗೆ ಪ್ರಸಿದ್ಧವಾಗಿದ್ದರೂ, ಈಗ ಪಾಲಿಸಿಯ ಪ್ರಯೋಜನಗಳನ್ನು ಇತರ ಪ್ರಮುಖ ಉದ್ದೇಶಗಳಿಗೂ ಬಳಸಲಾಗುತ್ತಿದೆ. ಮಕ್ಕಳ ಯೋಜನೆಗಳು, ವರ್ಷಾಶನ ಪಾಲಿಸಿಗಳು, ಮಾರುಕಟ್ಟೆ ಆಧಾರಿತ ಲಾಭಗಳು ಇತ್ಯಾದಿಗಳನ್ನು ಒಳಗೊಂಡಿರುವ ಹೊಸ ಉತ್ಪನ್ನಗಳ ಮೂಲಕ, ಗ್ರಾಹಕರು ತಮ್ಮ ಹಣವನ್ನು ಮರುಹೂಡಿಕೆ ಮಾಡಿ ಜೀವನ ಗುರಿಗಳನ್ನು ಸಾಧಿಸಬಹುದು.

## ಮೃತ ಫಲಾನುಭವಿಗಳನ್ನು ಗೃಹಲಕ್ಷ್ಮೀ ಯೋಜನೆಯಿಂದ ಕೈಬಿಡಲು ಕ್ರಮ ವಹಿಸಿ: ಕೆ.ರಾಜು

ರಾಮನಗರ

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಪ್ರಮುಖವಾಗಿರುವ ಗೃಹಲಕ್ಷ್ಮೀ ಯೋಜನೆಯಡಿ ಜಿಲ್ಲೆಯ ಫಲಾನುಭವಿಯಾಗಿ, ತದನಂತರದಲ್ಲಿ ವಯೋಸಹಜ ಸೇರಿದಂತೆ ಇತರೆ ಕಾರಣಗಳಿಂದ ಮೃತರಾದ ಮಹಿಳೆಯರ ಹೆಸರುಗಳನ್ನು ಫಲಾನುಭವಿಗಳ ಪಟ್ಟಿಯಿಂದ ಕೈಬಿಡಲು ಕ್ರಮವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಕೆ. ರಾಜು ಅವರು ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಗೃಹಲಕ್ಷ್ಮೀ ಯೋಜನೆಯಡಿ ನೋಂದಣಿಯಾಗಿ ಮರಣ ಹೊಂದಿದ 6,624 ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಅದರಲ್ಲಿ 1,777 ಫಲಾನುಭವಿಗಳನ್ನು ಗೃಹಲಕ್ಷ್ಮೀ ಯೋಜನೆಯಿಂದ ಕೈಬಿಡಲಾಗಿದೆ. ಬಾಕಿ ಇರುವ 4,847 ಫಲಾನುಭವಿಗಳನ್ನು ಗೃಹಲಕ್ಷ್ಮೀ ಫಲಾನುಭವಿಗಳ ಪಟ್ಟಿಯಿಂದ ತೆಗೆದು ಹಾಕಲು ಶೀಘ್ರವಾಗಿ ಕ್ರಮವಹಿಸುವಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ದಿನೇಶ್ ಅವರಿಗೆ ತಿಳಿಸಿದರು.

ಚನ್ನಪಟ್ಟಣ ತಾಲ್ಲೂಕಿನಲ್ಲಿ 1,700 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 425 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 1,275 ಫಲಾನುಭವಿಗಳು ಬಾಕಿ ಉಳಿದಿದ್ದಾರೆ. ಕನಕಪುರ ತಾಲ್ಲೂಕಿನಲ್ಲಿ 1,660 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 418 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 1,242 ಫಲಾನುಭವಿಗಳು ಬಾಕಿ ಉಳಿದಿದ್ದಾರೆ. ಹಾರೋಹಳ್ಳಿ ತಾಲ್ಲೂಕಿನಲ್ಲಿ 398 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 96 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 302 ಫಲಾನುಭವಿಗಳು ಬಾಕಿ ಉಳಿದಿದ್ದಾರೆ. ಮಾಗಡಿ ತಾಲ್ಲೂಕಿನಲ್ಲಿ 1,375 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 332 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 1,043 ಫಲಾನುಭವಿಗಳು ಬಾಕಿ ಉಳಿದಿದ್ದಾರೆ. ರಾಮನಗರ ತಾಲ್ಲೂಕಿನಲ್ಲಿ 1,491 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 506 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 985 ಫಲಾನುಭವಿಗಳು ಬಾಕಿ ಉಳಿದಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

ಜಿಲ್ಲೆಯ 2,94,399 ಅರ್ಹ ಫಲಾನುಭವಿಗಳ ಪೈಕಿ 2,81,726 (95.70%) ಫಲಾನುಭವಿಗಳು ನೋಂದಣಿಯಾಗಿದ್ದು, ಉಳಿದ 12,673 (4.30%) ಫಲಾನುಭವಿಗಳ ನೋಂದಣಿಗೆ ಬಾಕಿ ಇರುತ್ತದೆ. 27 ಕಂತುಗಳಲ್ಲಿ ಅಂದರೆ 2025ರ ಡಿಸೆಂಬರ್ ಮಾಹೆಯವರೆಗೆ 2,68,612 ಫಲಾನುಭವಿಗಳಿಗೆ 1427,16,26,000 ರೂ.ಗಳನ್ನು ಪಾವತಿಸಲಾಗಿದೆ. 2026ರ ಜನವರಿ ಮಾಹೆಯ 28ನೇ ಕಂತನ್ನು ಇನ್ನೆರಡು ದಿನಗಳಲ್ಲಿ ಪಾವತಿಸಲಾಗುವುದು ಎಂದರು.

ಅನ್ನಭಾಗ್ಯ ಯೋಜನೆಯಡಿ ಜಿಲ್ಲೆಯಲ್ಲಿ 15,053 ಬಿಪಿಎಲ್ ಪಡಿತರ ಚೀಟಿಗಳ ಪೈಕಿ 12,216 ಪಡಿತರ ಚೀಟಿಗಳನ್ನು ಎಪಿಎಲ್ ಪಡಿತರ ಚೀಟಿಗಳನ್ನಾಗಿ ಪರಿವರ್ತನೆ ಮಾಡಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರಾದ ಶಿಲ್ಪ ಅವರು ಸಭೆಗೆ ಮಾಹಿತಿ ನೀಡಿದಾಗ ಪ್ರತಿಕ್ರಿಯಿಸಿದ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರು ಪಡಿತರ ಚೀಟಿಗಳನ್ನು ಪರಿವರ್ತಿಸುವ ಸಂದರ್ಭದಲ್ಲಿ ಅಧಿಕಾರಿಗಳು ಕೂಲಕುಂಷವಾಗಿ ಪರಿಶೀಲಿಸಬೇಕು ಅರ್ಹ ಫಲಾನುಭವಿಗಳು ಅನ್ನಭಾಗ್ಯ ಯೋಜನೆಯಿಂದ ಹೊರಗುಳಿಯದಂತೆ ಅಗತ್ಯ ಕ್ರಮ ವಹಿಸಬೇಕು ಎಂದು ನಿರ್ದೇಶಿಸಿದರು.

ಶಕ್ತಿ ಯೋಜನೆಯಡಿ ಜಿಲ್ಲೆಯಲ್ಲಿ ಇದುವರೆಗೂ 11,05,61,882 ಮಹಿಳಾ ಪ್ರಯಾಣಿಕರು ಪ್ರಯಾಣಿಸಿದ್ದಾರೆ ಅವರ ಪ್ರಯಾಣ ದರದ ಮೊತ್ತ 324,99,17,043 ರೂಪಾಯಿಗಳಾಗಿವೆ ಹಾಗೂ ಜಿಲ್ಲೆಯಲ್ಲಿ ಯುವನಿಧಿ ಯೋಜನೆಯಡಿ 2024ರ ಜನವರಿ ಮಾಹೆಯಿಂದ 2025ರ ಡಿಸೆಂಬರ್ ಮಾಹೆಯವರೆಗೆ ಒಟ್ಟು ಅರ್ಹ 3,799 ಡಿಪ್ಲೋಮಾ ಹಾಗೂ ಪದವೀಧರರ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ ಮೂಲಕ ಒಟ್ಟು 11,19,75,000 ರೂ.ಗಳನ್ನು ಪಾವತಿಸಲಾಗಿದೆ ಎಂದು ತಿಳಿಸಿದರು.

ಗೃಹಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ 3,33,452 ಮಂದಿ ನೋಂದಾಯಿಸಿಕೊಂಡಿದ್ದು, ಈ ಯೋಜನೆ ಪ್ರಾರಂಭವಾದಾಗಿನಿಂದ ಇದುವರೆಗೂ ಒಟ್ಟಾರೆ 378.46 ಕೋಟಿ ರೂಗಳನ್ನು ವೆಚ್ಚ ಮಾಡಲಾಗಿದೆ. ರೈತರ ಜಮೀನಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಾಗ ವಿಳಂಬ ತೋರದೆ ಬೆಸ್ಕಾಂ ಅಧಿಕಾರಿಗಳು ಉತ್ತಮ ಸೇವೆ ನೀಡಬೇಕೆಂದು ಸೂಚಿಸಿದರು.

ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಜಿಲ್ಲೆಯಲ್ಲಿ ಅವಶ್ಯವಿರುವ ಗ್ರಾಮಗಳಿಗೆ ಬಸ್ ಸೌಕರ್ಯ ಕಲ್ಪಿಸುವಂತೆ ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳಿಗೆ ಸೂಚಿಸಿದ ಅವರು ಗ್ಯಾರಂಟಿ ಯೋಜನೆಗಳನ್ನು ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನ ಮಾಡಲು ಜಿಲ್ಲೆಯ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಹಾಗೂ ಇಲಾಖೆಗಳು ಶ್ರಮಿಸಬೇಕು, ಯೋಜನೆಗೆ ಅರ್ಹರಿರುವ ಯಾವುದೇ ಫಲಾನುಭವಿಯು ಗ್ಯಾರಂಟಿ ಯೋಜನೆಯಿಂದ ಹೊರಗುಳಿಯಬಾರದು ಹಾಗೂ ಈ ಯೋಜನೆಯ ಯಶಸ್ಸಿಗೆ ಎಲ್ಲಾ ಅಧಿಕಾರಿಗಳು ಸಹಕರಿಸಬೇಕು ಎಂದವರು ಹೇಳಿದರು.

## ಪಾಲಿಸಿಬಜಾರ್‌ನ ಆಸಿಯಾನ್ ರಶ್: 39 ಲಕ್ಷ ರೂ. ಮೌಲ್ಯದ ಉಡುಗೊರೆ

ಬೆಂಗಳೂರು

ಭಾರತದ ಅತಿದೊಡ್ಡ ಆನ್ಲೈನ್ ವಿಮಾ ಪ್ಲಾಟ್‌ಫಾರ್ಮ್‌ಗಳಲ್ಲಿ ಒಂದಾದ ಪಾಲಿಸಿಬಜಾರ್, ಇಂದು ತನ್ನ ಆಸಿಯಾನ್ ರಶ್ ಕಾರ್ಯಕ್ರಮದ ಅಡಿಯಲ್ಲಿ ತನ್ನ ಉನ್ನತ ಕಾರ್ಯಕ್ಷಮತೆಯ ಸಲಹೆಗಾರರಿಗೆ 39 ಲಕ್ಷ ಮೌಲ್ಯದ ಉಡುಗೊರೆಗಳನ್ನು ನೀಡಿತು. ಇದು ಉದ್ಯೋಗಿಗಳ ಪ್ರೇರಣೆ ಮತ್ತು ಅದರ ಉದ್ಯೋಗಿ ಮೊದಲ ವಿಧಾನಕ್ಕೆ ತನ್ನ ಬದ್ಧತೆಯನ್ನು ಬಲಪಡಿಸುತ್ತದೆ.

ಆರೋಗ್ಯ, ಅವಧಿ, ಉಳಿತಾಯ ವ್ಯವಹಾರದಲ್ಲಿ ಒಟ್ಟು 89 ಉನ್ನತ ಪ್ರತಿಭಾ ಸಲಹೆಗಾರರನ್ನು ಗುರುತಿಸುವ ಮೂಲಕ, ಉನ್ನತ-ಕಾರ್ಯಕ್ಷಮತೆಯ ಪರಿಸರ ವ್ಯವಸ್ಥೆಯನ್ನು ಪಾಲಿಸಿಬಜಾರ್ ಬೆಳೆಸುತ್ತಿದೆ. ಅಗ್ರ ಸ್ಥಾನ ಪಡೆದ ಸಲಹೆಗಾರರು ಮಲೇಷ್ಯಾಕ್ಕೆ ಪ್ರವಾಸ ಮಾಡಬಹುದು, ನಂತರದಲ್ಲಿ ಬೈಕುಗಳು, ಐಫೋನ್‌ಗಳು, ಆಪಲ್ ವಾಚ್‌ಗಳು, ಸ್ಮಾರ್ಟ್ ಟಿವಿಗಳು ಮತ್ತು ಅಮೆಜಾನ್ ವೋಚರ್‌ಗಳು ಸಿಗುತ್ತವೆ.

ಈ ಉಪಕ್ರಮಗಳು 'ಜೆಎಜಿ' (ಜೀತೋ ಅಪ್ನಾ ಘರ್) ವಾರ್ಷಿಕ ಕಾರ್ಯಕ್ರಮದಡಿ ಬರುತ್ತವೆ. ಉನ್ನತ ಸಾಧನೆ ಮಾಡಿದವರಿಗೆ ಮನೆ, ವಾಹನಗಳು ಮತ್ತು ನಗದು ಪ್ರೋತ್ಸಾಹಕಗಳಂತಹ ಜೀವನವನ್ನು ಬದಲಾಯಿಸುವ ಬಹುಮಾನಗಳನ್ನು ಕಂಪನಿ ನೀಡುತ್ತದೆ. ಇತ್ತೀಚಿನ ಬೆಳವಣಿಗೆಯು ಪಾಲಿಸಿಬಜಾರ್‌ನ ಬಹುಮಾನಗಳು ಮತ್ತು ಗುರುತಿಸುವಿಕೆ (ಆರ್ &ಆರ್) ಚೌಕಟ್ಟಿನಲ್ಲಿ ಕಾರ್ಯತಂತ್ರದ ವಿಕಸನವಾಗಿದೆ. ಸಾಂಪ್ರದಾಯಿಕ ನಗದು ಪ್ರೋತ್ಸಾಹಕಗಳಿಂದ ಹೆಚ್ಚಿನ ಮೌಲ್ಯದ ಪ್ರತಿಫಲಗಳು ಮತ್ತು ಅಂತರರಾಷ್ಟ್ರೀಯ ಪ್ರಯಾಣದ ಅನುಭವಗಳನ್ನು ನೀಡಲು ಆದ್ಯತೆ ನೀಡುತ್ತಿದೆ.

"ಉನ್ನತ ಪ್ರದರ್ಶಕರಲ್ಲಿ ಒಬ್ಬರಾಗಿ ಗುರುತಿಸಲ್ಪಟ್ಟಿರುವುದು ಮತ್ತು ಮಲೇಷ್ಯಾಕ್ಕೆ ಪ್ರವಾಸವನ್ನು ಪಡೆಯುವುದು ನಂಬಲಾಗದ ಗೌರವವಾಗಿದೆ. ಈ ಸಾಧನೆಯು ಗ್ರಾಹಕರಿಗೆ ಅವರ ವಿಮಾ ಅಗತ್ಯಗಳನ್ನು ನ್ಯಾವಿಗೇಟ್ ಮಾಡುವಾಗ ನಾನು ನೀಡುವ ಅನುಭವವನ್ನು ಹೆಚ್ಚಿಸಲು ನನ್ನನ್ನು ಪ್ರೇರೇಪಿಸುತ್ತದೆ "ಎಂದು ಕಾರ್ಯಕ್ರಮದ ವಿಜೇತರಲ್ಲಿ ಒಬ್ಬರಾದ ಗೌರವ್ ಅರೋರಾ ಹೇಳಿದರು.

## ರಸ್ತೆ, ರಾಜಕಾಲುವೆ ಹೂಳೆತ್ತಲು ಬಿಬಿಎಂಪಿ ಪಶ್ಚಿಮ ವಲಯ ಆಯುಕ್ತರ ಕಟ್ಟುನಿಟ್ಟಿನ ಸೂಚನೆ

ಬೆಂಗಳೂರು

ಮುಂಬರುವ ಮಳೆಗಾಲದ ಹಿನ್ನೆಲೆಯಲ್ಲಿ ರಸ್ತೆ, ಚರಂಡಿ ಹಾಗೂ ಪಾದಚಾರಿ ಮಾರ್ಗಗಳ ಸಮಗ್ರ ಪರಿಶೀಲನೆ ನಡೆಸಿ ಯಾವುದೇ ತೊಂದರೆಗಳು ಉಂಟಾಗದಂತೆ ಮುಂಚಿತವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತರಾದ ಡಾ. ರಾಜೇಂದ್ರ ಕೆ.ವಿ ರವರು ತಿಳಿಸಿದರು.

ಮುಂಬರುವ ಮಳೆಗಾಲದ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು, ರಸ್ತೆ ಸುವ್ಯವಸ್ಥೆ, ರಾಜಕಾಲುವೆ ಹಾಗೂ ಚರಂಡಿಗಳ ನಿರ್ವಹಣೆ ಮತ್ತು ಉಂಖಐ ಹಾಗೂ ಉಂಖಐ ಉಫಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗಳ ಕುರಿತು ಕಾಮಗಾರಿ ವಿಭಾಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ಅವರು ಸೂಚಿಸಿದರು.

ಮಳೆ ನೀರು ನಿಲ್ಲದಂತೆ ಕ್ರಮ ಕೈಗೊಳ್ಳಿ:

ಮಳೆಗಾಲದ ಸಂದರ್ಭದಲ್ಲಿ ಯಾವುದೇ ಅನಾಹುತಗಳು ಸಂಭವಿಸದಂತೆ ಮುಂಚಿತವಾಗಿ ಅಗತ್ಯ ಕ್ರಮಗಳನ್ನು ಕೈಗೊಂಡು, ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಳೆ ನೀರು ನಿಲ್ಲದೆ ಸರಾಗವಾಗಿ ಹರಿದುಹೋಗುವಂತೆ ಸೂಕ್ತ ವ್ಯವಸ್ಥೆ ಮಾಡಬೇಕು. ಯಾವುದೇ ಪ್ರದೇಶದಲ್ಲಿ ಪ್ರವಾಹ ಉಂಟಾಗದಂತೆ ವಿಶೇಷ ಗಮನ ಹರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ರಾಜಕಾಲುವೆ ಮತ್ತು ಚರಂಡಿಗಳ ನಿರ್ವಹಣೆ:

ರಾಜಕಾಲುವೆ ಹಾಗೂ ಚರಂಡಿಗಳಲ್ಲಿ ನೀರಿನ ಹರಿವಿಗೆ ಅಡ್ಡಿಯಾಗುವ ಹೂಳು ಮತ್ತು ತ್ಯಾಜ್ಯಗಳನ್ನು ತೆರವುಗೊಳಿಸಿ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶಿಸಿದರು.

ಪಾದಚಾರಿ ಮಾರ್ಗಗಳ ಪರಿಶೀಲನೆ:

ಪಾದಚಾರಿ ಮಾರ್ಗಗಳ ಸ್ಥಿತಿಯನ್ನು ಪರಿಶೀಲಿಸಿ ಅಗತ್ಯವಿರುವ ಸ್ಥಳಗಳಲ್ಲಿ ಸ್ಟೋನ್ ಡೆಸ್ಕ್ ಅಳವಡಿಸಿ ಸಾರ್ವಜನಿಕರಿಗೆ ಸುರಕ್ಷಿತ ಹಾಗೂ ಸುಗಮ ಸಂಚಾರಕ್ಕೆ ಅನುಕೂಲ ವಾಗುವಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ವಾರ್ಡ್ ಮಟ್ಟದಲ್ಲಿ ಪರಿಶೀಲನೆ:

ಮಳೆಗಾಲ ಮುಂಜಾಗ್ರತಾ ಕ್ರಮಗಳ ಅಂಗವಾಗಿ ಸಹಾಯಕ ಅಭಿಯಂತರರು ವಾರ್ಡ್ ಮಟ್ಟದಲ್ಲಿ ಕ್ಷೇತ್ರಕ್ಕೆ ತೆರಳಿ ಪರಿಶೀಲನೆ ನಡೆಸಿ ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಳ್ಳಲು ಸೂಚಿಸಿದರು.

ರಸ್ತೆ ಅಗಲೀಕರಣಕ್ಕೆ ಕ್ರಮ:

ಅಗತ್ಯವಿರುವ ಸ್ಥಳಗಳನ್ನು ಗುರುತಿಸಿ ಸಾರ್ವಜನಿಕರ ಹಿತದೃಷ್ಟಿಯಿಂದ ರಸ್ತೆ ಅಗಲೀಕರಣ ಕಾರ್ಯಗಳನ್ನು ಕೈಗೊಳ್ಳಬೇಕು. ಈ ಕಾರ್ಯಗಳನ್ನು ಸಂಬಂಧಿತ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸುವಂತೆ ಸೂಚನೆ ನೀಡಿದರು.

GAIL ಹಾಗೂ GAIL Gas ಪೈಪ್‌ಲೈನ್ ಕಾಮಗಾರಿಗಳು:

GAIL ಹಾಗೂ GAIL Gas ಸಂಸ್ಥೆಗಳ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗಳನ್ನು ಷರತ್ತುಬದ್ಧವಾಗಿ ಹಾಗೂ ನಿಯಮಾನುಸಾರವಾಗಿ ಕೈಗೊಳ್ಳುವಂತೆ ಸೂಚಿಸಿ, ರಸ್ತೆ ಕಟಿಂಗ್‌ಗೆ ಸಂಬಂಧಿಸಿದ ವಿಚಾರಗಳನ್ನು ಸಂಬಂಧಿತ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಬಾಕಿ ಇರುವ ಗೇಲ್ ಗ್ಯಾಸ್ ಗೆ ಸಂಬಂಧಿತ ಪ್ರಕರಣಗಳನ್ನು ತ್ವರಿತವಾಗಿ ನಿವಾರಣೆ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಮುಖ್ಯ ಅಭಿಯಂತರರಾದ ಸ್ವಯಂಪ್ರಭಾ ಹಾಗೂ ವಿಶ್ವನಾಥ್, ಅಧೀಕ್ಷಕ ಅಭಿಯಂತರರು, ವಿವಿಧ ವಿಭಾಗಗಳ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

## ಇಂದು ವಿದ್ಯುತ್ ವ್ಯತ್ಯಯ

ತುಮಕೂರು

ಬೆಸ್ಕಾಂ ಶಿರಾ ನಗರ ಉಪವಿಭಾಗ ವ್ಯಾಪ್ತಿಯಲ್ಲಿ ದುರಸ್ತಿ ಕಾಮಗಾರಿ ಕೈಗೊಂಡಿರುವುದರಿಂದ ಮಾರ್ಚ್ 26ರಂದು ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ರಂಗನಾಥನಗರ, ಬನ್ನಿನಗರ, ಭವಾನಿನಗರ, ಸೊಪ್ಪಿನಹಟ್ಟಿ, ಲಾಡ್‌ಪುರ, ರಬ್ ನಗರ, ಕೋಟೆ, ಕೋಟೆ ಪಂಪ್ ಹೌಸ್ ಹತ್ತಿರ, ಚಿಕ್ಕೆರೆ ಹಿಂಭಾಗ ಹಾಗೂ ಶಿರಾ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

# ಇಂದಿನಿಂದ ಕೋದಂಡರಾಮಸ್ವಾಮಿ ದೇಗುಲದ 44ನೇ ರಾಮೋತ್ಸವ ವೈಭವ

ಕೋಲಾರ

ನಗರದ ಪಿಸಿ ಬಡಾವಣೆಯಲ್ಲಿನ ಅಂಚೆ ಕಚೇರಿ ಎದುರಿನಲ್ಲಿರುವ ಕೋದಂಡರಾಮಸ್ವಾಮಿ ದೇವಾಲಯದ 44ನೇ ವರ್ಷದ ರಾಮೋತ್ಸವದ ಅಂಗವಾಗಿ ಇದೇ 25 ರಿಂದ 31 ರವರೆಗೂ ವಿಶೇಷ ಕಾರ್ಯಕ್ರಮಗಳು ನಡೆಯಲಿದ್ದು, ಮಂಗಳವಾರದಂದು ನೂತನ ಉತ್ಸವ ಮೂರ್ತಿಗಳ ಗ್ರಾಮ ಪ್ರದಕ್ಷಿಣೆ ನಡೆಸಿ ದೇವಾಲಯಕ್ಕೆ ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಪುನರ್ ಜೀರ್ಣೋದ್ಧಾರ ಮತ್ತು ನೂತನ ನವಗ್ರಗಳು, ನೂತನ ಧ್ವಜಸ್ತಂಭ, ನೂತನ ಸೂರ್ಯಸ್ಥಂಭ, ಗರುಡವಾಹನ ಹಾಗೂ ಕೋದಂಡರಾಮಸ್ವಾಮಿಯ 21 ಅಡಿಗಳಭವ್ಯ ಮೂರ್ತಿಯ ಸಂಪ್ರೋಕ್ಷಣಾ ಮಹಾಕುಂಭಾಭಿಷೇಕ ನಡೆದು ವರ್ಷವಾದ ಹಿನ್ನಲೆಯಲ್ಲಿ ಈ ಬಾರಿ ರಾಮೋತ್ಸವವು ಮತ್ತಷ್ಟು ಅದ್ದೂರಿಯಾಗಿ ನಡೆಯಲಿದೆ.



ಇದೇ 25ರಂದು ಗಣಪತಿ ಪ್ರಾರ್ಥನೆ, ಮೂಲದೇವರ ಪ್ರಾರ್ಥನೆ, ಕಳಸಸ್ಥಾಪನೆ, ಸ್ವಸ್ತಿವಾಚನ, ಅಗ್ನಿ ಪ್ರತಿಷ್ಟೆ, ಗಣಪತಿ, ನವಗ್ರಹ, ದಿಕ್ಪಾಲರ, ಸುಬ್ರಹ್ಮಣ್ಯ, ಸತ್ಯನಾರಾಯಣ, ರಾಮತಾರಕನಾಮ ಹೋಮಗಳು ನಡೆಯಲಿವೆ.

ಜತೆಗೆ ಕೋದಂಡರಾಮಸ್ವಾಮಿ ಹೋಮ, ಕಳಾಹೋಮ, ಪೂರ್ಣಾವತಿ ಮತ್ತು ಪೂರ್ಣ ಕುಂಭಾಭಿಷೇಕ, ಹಂಸವಾಹನೋತ್ಸವ, ಧ್ವಜಾರೋಹಣ ನಡೆಯಲಿದೆ.

ಇದೇ 26ರಂದು ಸೀತಾರಾಮ ಕಲ್ಯಾಣೋತ್ಸವ ನಡೆಯಲಿದ್ದು, ಸಂಜೆ 6–30ಕ್ಕೆ ಕೋದಂಡರಾಮಸ್ವಾಮಿಯ ಉತ್ಸವ ನಡೆಯಲಿದೆ. ಇದೇ 27ರಂದು ಶ್ರೀರಾಮನವಮಿ ಅಂಗವಾಗಿ ಸ್ವಾಮಿಗೆ ವಿಶೇಷ ಪೂಜೆ ನಡೆಯಲಿದ್ದುದ, ಗರುಡವಾಹನೋತ್ಸವ, ಮುದ್ರ ನೃತ್ಯ ಕಲಾನಿಕೇತನ ಮಕ್ಕಳಿಂದ ಭರತನಾಟ್ಯ ಕಾರ್ಯಕ್ರಮ ನಡೆಯಲಿದೆ.

28ರಂದು ಕೋದಂಡರಾಮಸ್ವಾಮಿ ಪಟ್ಟಾಭಿಷೇಕ ಮಹೋತ್ಸವ. ಭಜನೆ ಕಾರ್ಯಕ್ರಮ ಆಯೋಜಿಸಲಾಗಿದೆ. 29ರಂದು ಶೇಷಶಯನ ಉತ್ಸವ ಹಾಗೂ ಸ್ವಾಮಿಗೆ ವಿಶೇಷ ಪೂಜೆ, ಅಭಿಷೇಕ ನಡೆಯಲಿದೆ.

30ರಂದು ವಸಂತೋತ್ಸವ ನಡೆಯಲಿದ್ದು, ಅಂದು ಸಂಜೆ ಜಯನಾಟ್ಯ ಕಲಾ ಅಕಾಡೆಮಿ ಮಕ್ಕಳಿಂದ ಭರತ ನಾಟ್ಯ ಮೂಡಿ ಬರಲಿದೆ, ಜತೆಗೆ ಸಂಜೆ ಸ್ವಾಮಿಯ ಸಿಂಹವಾಹನೋತ್ಸವ ನಡೆಯಲಿದೆ.

31ರಂದು ನಡೆಯುವ ಕೋದಂಡರಾಮಸ್ವಾಮಿಯ ಪಲ್ಲಕ್ಕಿ ಉತ್ಸವ ಮತ್ತು ಶೋಭಾಯಾತ್ರೆಯಲ್ಲಿ ಹೆಚ್ಚಿನ ಭಕ್ತರು ಪಾಲ್ಗೊಳ್ಳಲು ಕೋರಲಾಗಿದೆ.

ಅನೇಕ ಗಣ್ಯರು ಚಾಲನೆ ನೀಡುವರು.

ಇಡೀ ಉತ್ಸವ, ಪೂಜೆಯ ನೇತೃತ್ವವನ್ನು ಪ್ರಧಾನ ಆಗಮಿಕರಾದ ಶಿವಶ್ರೀ ವಿದ್ವಾನ್, ಪ್ರಧಾನ ಅರ್ಚಕರಾದ ಡಾ. ಕೆ.ಎಸ್. ಮಂಜುನಾಥ ದೀಕ್ಷಿತರು, ಅರ್ಚಕರಾದ ಮೃತ್ಯುಂಜಯಶಂಕರ ದೀಕ್ಷಿತರು (ಬುಜ್ಜಿ) ಪೂಜೆ ನೇತೃತ್ವ ವಹಿಸಲಿದ್ದು, ಈ ಭಾಗದ ನೂರಾರು ಮಂದಿ ಭಕ್ತರು ಪೂಜೆಯಲ್ಲಿ ಪಾಲ್ಗೊಳ್ಳುವರು.

ದೇವಾಲಯವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಿದ್ದು, ಕೋದಂಡರಾಮಸ್ವಾಮಿ ದೇವಾಲಯ ಸೇವಾ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನಕಾರ್ಯದರ್ಶಿಗಳು, ಖಜಾಂಚಿ ಸೇರಿದಂತೆ ಎಲ್ಲಾ ಪದಾಧಿಕಾರಿಗಳು ನೇತೃತ್ವ ವಹಿಸುವರು.

# ಪೊಲೀಸ್ ಇಲಾಖೆ ಶಾಸಕರ ಕೈಗೊಂಬೆ: ಹುಲಿಕಟ್ಟೆ



ಕುಣಿಗಲ್

"ಇಲ್ಲಿನ ಕ್ಷೇತ್ರದಲ್ಲಿ ಪೊಲೀಸ್ ಇಲಾಖೆಯು ಕಾಂಗ್ರೆಸ್ ಶಾಸಕರ ತಾಳಕ್ಕೆ ತಕ್ಕಂತೆ ಕುಣಿಯುವುದನ್ನು ಬಿಟ್ಟು ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಲಿ. ಸಂತೆಮಾವತ್ತೂರು ವಿಎಸ್‌ಎಸ್‌ಎನ್ ಚುನಾವಣೆಯಲ್ಲಿ ವೋಟ್ ಚೋರಿ ಮಾಡಿದ ಭ್ರಷ್ಟ ಅಧಿಕಾರಿಯನ್ನು ರಕ್ಷಿಸಿ, ಅದನ್ನು ಪ್ರಶ್ನಿಸಿದ ಅಮಾಯಕರ ಮೇಲೆ ಮೊಕದ್ದಮೆ ದಾಖಲಿಸಿರುವುದು ಇಲಾಖೆಗೆ ಶೋಭೆ ತರುವುದಿಲ್ಲ" ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಸಂಚಾಲಕ ಆನಂದ್ ಪಟೇಲ್ ಹುಲಿಕಟ್ಟೆ ವಾಗ್ದಾಳಿ ನಡೆಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾಸಕರು ರಾಜಕೀಯವಾಗಿ ಪೊಲೀಸ್ ಇಲಾಖೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತಕ್ಷಣ ಮಧ್ಯಪ್ರವೇಶಿಸಿ ಪಾರದರ್ಶಕ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

**ಕ್ಷೇತ್ರವನ್ನು ಕನಕಪುರ ಮಾಡಲು ಹೊರಟಿದ್ದಾರೆ:** "ಕುಣಿಗಲ್ ತಾಲೂಕಿನಲ್ಲಿ ಈ ಹಿಂದೆ ಹುಚ್ಚಮಾಸ್ತಿ ಗೌಡರು, ವೈ.ಕೆ. ರಾಮಯ್ಯ, ಎಸ್.ಪಿ. ಮುದ್ದಹನುಮೇಗೌಡರಂತಹ ಮುತ್ಸದ್ದಿ ನಾಯಕರಿದ್ದರು. ಅವರು ಸದನದಲ್ಲಿ ಮಾತನಾಡುತ್ತಿದ್ದರೆ ಎಲ್ಲರೂ ನಿಶಬ್ದವಾಗಿ ಆಲಿಸುತ್ತಿದ್ದರು. ಆದರೆ ಇಂದಿನ ಶಾಸಕರಿಗೆ ಸ್ಪೀಕರ್ ಅವರೇ 'ಎಬಿಸಿಡಿ ಗೊತ್ತಿಲ್ಲ' ಎಂದು ಗದರಿಸುವಂತಾಗಿದೆ. ಪಿಂಗಾಣಿ ಪಾತ್ರೆ, ಕುಕ್ಕರ್ ಹಂಚಿ ರಾಜಕೀಯ ಆರಂಭಿಸಿದ ಶಾಸಕರು ಈಗ ಕುಣಿಗಲ್ ಕ್ಷೇತ್ರವನ್ನು ಕನಕಪುರ ಮಾಡಲು ಹೊರಟಿದ್ದಾರೆ" ಎಂದು ಟೀಕಿಸಿದರು.

**ಚುನಾವಣಾ ವ್ಯಭಿಚಾರ ನಿಲ್ಲಲಿ:** ಚಿಂತಕ ಹಾಗೂ ಹೋರಾಟಗಾರ ಜಿ.ಕೆ. ನಾಗಣ್ಣ ಮಾತನಾಡಿ, "ವಿಎಸ್‌ಎಸ್‌ಎನ್ ಚುನಾವಣೆಯಲ್ಲಿ ಅಧಿಕಾರಿಗಳೇ ವೋಟ್ ಚೋರಿ ಮಾಡಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ಹಾಕಲು ಶಾಮೀಲಾಗಿರುವುದು ಇಡೀ ರಾಜ್ಯದಲ್ಲಿ ಚರ್ಚೆಯಾಗುತ್ತಿದೆ. ಬ್ಯಾಲೆಟ್ ಪೇಪರ್ ಹಗರಣದ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಮೌನ ವಹಿಸಿರುವುದು ಸರಿಯಲ್ಲ. ಅಕ್ರಮ ಎಸಗಿದ ಅಧಿಕಾರಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಎದುರಿಸಬೇಕಾಗುತ್ತದೆ" ಎಂದು ಎಚ್ಚರಿಸಿದರು.

# ನೇಕಾರರು ಸಂಘಟಿತರಾದಾಗ ಮಾತ್ರ ಸರ್ವತೋಮುಖ ಪ್ರಗತಿ ಸಾಧ್ಯ: ವೆಂಕಟೇಶ್

ದೊಡ್ಡಬಳ್ಳಾಪುರ

"ನೇಕಾರ ಸಮುದಾಯವು ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕವಾಗಿ ಸದೃಢಗೊಳ್ಳಬೇಕಾದರೆ ಸಂಘಟನೆ ಅತ್ಯಗತ್ಯ. ಸಮುದಾಯದ ಪ್ರತಿಯೊಬ್ಬರೂ ಒಂದಾಗಿ ಸಾಗಿದಾಗ ಮಾತ್ರ ಎಲ್ಲಾ ಹಂತಗಳಲ್ಲೂ ಅಭಿವೃದ್ಧಿ ಹೊಂದಲು ಸಾಧ್ಯ," ಎಂದು ಟಿಎಂಸಿ ಬ್ಯಾಂಕ್ ಉಪಾಧ್ಯಕ್ಷ ಪಿ.ಸಿ. ವೆಂಕಟೇಶ್ ತಿಳಿಸಿದರು.

ಇಲ್ಲಿನ ಶಾಂತಿನಗರ–ದರ್ಗಾಜೋಗಿಹಳ್ಳಿಯ ಶ್ರೀ ದೇವರ ದಾಸಿಮಯ್ಯ ಮಿತ್ರ ಮಂಡಲಿ ನೇಕಾರರ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಆದ್ಯ ವಚನಕಾರ ದೇವರ ದಾಸಿಮಯ್ಯ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು.

**ಸಮಾನತೆಯ ಸಂದೇಶ ಸಾರಿದ ದಾಸಿಮಯ್ಯ:** ಸಾವಿರ ವರ್ಷಗಳ ಹಿಂದೆಯೇ ಸಾಮಾಜಿಕ ಅಸಮಾನತೆಯ ವಿರುದ್ಧ ಧ್ವನಿ ಎತ್ತಿದ ದಾಸಿಮಯ್ಯನವರು ಸಮಾನತೆಯ ಹರಿಕಾರರು. ಅವರ ವಚನಗಳು ಕೇವಲ ಸಾಹಿತ್ಯವಲ್ಲ, ಅವು ಸಮಾಜದ ಜಾಗೃತಿಯ ಸಂಕೇತ. ದೇವಾಂಗ ಸಮುದಾಯದ ಅನನ್ಯತೆಯನ್ನು ಎತ್ತಿ ಹಿಡಿದ ಅವರ ತತ್ವಗಳನ್ನು ನಾವು ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ಇಂತಹ ಜಯಂತಿ ಆಚರಣೆಗಳಿಗೆ ನಿಜವಾದ ಅರ್ಥ ಸಿಗುತ್ತದೆ ಎಂದು ವೆಂಕಟೇಶ್ ಅಭಿಪ್ರಾಯಪಟ್ಟರು.

**ವಚನ ಸಾಹಿತ್ಯದ ಆದ್ಯ ಪ್ರವರ್ತಕ:** ವಿಷಯ ಮಂಡನೆ ಮಾಡಿದ ಪ್ರೊ. ಕೆ.ಆರ್. ರವಿಕಿರಣ್, "ವಿಶ್ವ ಸಾಹಿತ್ಯಕ್ಕೆ ಕನ್ನಡದ ದೊಡ್ಡ ಕೊಡುಗೆಯಾದ ವಚನ ಸಾಹಿತ್ಯದ ಮೊದಲಿಗರು ದಾಸಿಮಯ್ಯನವರು. ಲೌಕಿಕ ಮತ್ತು ಪಾರಮಾರ್ಥಿಕ ವಿಚಾರಗಳನ್ನು ಜನಭಾಷೆಯಲ್ಲಿ



ಜನರಿಗೆ ತಲುಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಸ್ವತಃ ಬಸವಣ್ಣನವರೇ ತಮ್ಮ ವಚನಗಳಲ್ಲಿ ದಾಸಿಮಯ್ಯನವರ ಮಾರ್ಗದರ್ಶನವನ್ನು ಉಲ್ಲೇಖಿಸಿದ್ದಾರೆ" ಎಂದು ಅವರ ಮಹತ್ವವನ್ನು ವಿವರಿಸಿದರು.

**ನೇಕಾರ ಭವನಕ್ಕೆ ಸಹಕಾರದ ಭರವಸೆ:** ನಗರಸಭೆ ಸದಸ್ಯ ಎಚ್.ಎಸ್. ಶಿವಶಂಕರ್ ಮಾತನಾಡಿ, ನೇಕಾರ ಸಮುದಾಯಕ್ಕೆ ಸರ್ಕಾರದಿಂದ ಸಿಗುವ ಸವಲತ್ತುಗಳ ಬಗ್ಗೆ ಅರಿವು ಮೂಡಿಸುವ ಅಗತ್ಯವಿದೆ. ನೇಕಾರ ಭವನ ನಿರ್ಮಾಣದಂತಹ ಯೋಜನೆಗಳಿಗೆ ನಗರಸಭೆಯಿಂದ ಪೂರ್ಣ ಸಹಕಾರ ನೀಡಲಾಗುವುದು ಎಂದರು. ಇದೇ ವೇಳೆ ದೇವಾಂಗ ಮಂಡಲಿ ಕಾರ್ಯದರ್ಶಿ ಪ್ರೊ. ಎಂ.ಜಿ. ಅಮರನಾಥ್ ಅವರು ದಾಸಿಮಯ್ಯನವರ ಕುರಿತು ಹೆಚ್ಚಿನ ಸಂಶೋಧನೆಗಳು ನಡೆಯಬೇಕೆಂದು ಆಶಿಸಿದರು.

**ಗೌರವ ಸಮರ್ಪಣೆ:** ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎ. ರಾಮಮೂರ್ತಿ ವಹಿಸಿದ್ದರು. ಇದೇ ಸಂದರ್ಭದಲ್ಲಿ ಹಿರಿಯ ನೇಕಾರ ಬಿ.ಜಿ. ಪುಟ್ಟರಾಜು ಅವರಿಗೆ 'ವಾರ್ಷಿಕ ಪುರಸ್ಕಾರ' ನೀಡಿ ಆತ್ಮೀಯವಾಗಿ ಗೌರವಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಯತ್ ಅಧ್ಯಕ್ಷೆ ಶಶಿಕಲಾ ನಾಗರಾಜ್, ನಗರಸಭೆ ಮಾಜಿ ಅಧ್ಯಕ್ಷೆ ಸುಧಾರಾಣಿ, ಸದಸ್ಯರಾದ ಲಕ್ಷ್ಮೀಪತಿ, ವತ್ಸಲ, ನವೀನ್ ಸೇರಿದಂತೆ ದೇವಾಂಗ ಸಮುದಾಯದ ಮುಖಂಡರು ಹಾಗೂ ನೂರಾರು ನೇಕಾರರು ಭಾಗವಹಿಸಿದ್ದರು.

# ಹಿರಿಯ ನಾಗರಿಕರ ರಕ್ಷಣೆಗೆ '1090' ಕವಚ

ವಿಜಯಪುರ

"ಹಿರಿಯ ನಾಗರಿಕರನ್ನು ಗೌರವಿಸುವುದು ಸಮಾಜದ ಕರ್ತವ್ಯ. ಅವರ ಮೇಲೆ ನಡೆಯುವ ದೌರ್ಜನ್ಯ ಮತ್ತು ಶೋಷಣೆ ಕಾನೂನು ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದ್ದು, ಸಂಕಷ್ಟದಲ್ಲಿರುವ ಹಿರಿಯರು ತಕ್ಷಣ 1090 ಸಹಾಯವಾಣಿಯನ್ನು ಸಂಪರ್ಕಿಸಬೇಕು" ಎಂದು ಆಪ್ತ ಸಮಾಲೋಚಕ ಅರುಣ್ ತಿಳಿಸಿದರು.

ಪಟ್ಟಣದ ಗುರಪ್ಪನಮಠ ಪಿ.ಎಂ.ಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಹಮ್ಮಿಕೊಂಡಿದ್ದ ಹಿರಿಯ ನಾಗರಿಕರ ಹಕ್ಕುಗಳ ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

**ಸಹಾಯವಾಣಿಯಿಂದ ಸಿಗುವ ಸೌಲಭ್ಯಗಳು:** ಹಿರಿಯ ನಾಗರಿಕರ ಸುರಕ್ಷಿತ ಜೀವನಕ್ಕಾಗಿ ಸಹಾಯವಾಣಿ ಕೇಂದ್ರವು ಹಲವಾರು ಉಚಿತ ಸೇವೆಗಳನ್ನು ನೀಡುತ್ತಿದೆ.

ಕಾನೂನು ಸಲಹೆ ಮತ್ತು ಪೊಲೀಸರ ಮಧ್ಯಸ್ಥಿಕೆ. ಪಿಂಚಣಿ, ಗುರುತಿನ ಚೀಟಿ, ಆರೋಗ್ಯ ಕಾರ್ಡ್ ಮತ್ತು ಆಧಾರ್ ಕಾರ್ಡ್ ಪಡೆಯಲು ನೆರವು. ಪಾಲನೆ, ಪೋಷಣೆ ಮತ್ತು ಆರೈಕೆಯ ಜವಾಬ್ದಾರಿ ಹಂಚಿಕೆ. ಅಗತ್ಯವಿದ್ದಲ್ಲಿ ವೃದ್ಧಾಶ್ರಮಗಳಿಗೆ ಶಿಫಾರಸ್ಸು ಮಾಡುವುದು.

**ನಿರ್ಲಕ್ಷ್ಯ ತೋರುವುದು ಅಪರಾಧ:** ಹಿರಿಯರೊಂದಿಗೆ ಕೆಟ್ಟದಾಗಿ ವರ್ತಿಸುವುದು, ಅವರ ಆಸ್ತಿ–ಪಾಸ್ತಿ ಮತ್ತು ಒಡವೆಗಳಿಗೆ ಭದ್ರತೆ ನೀಡದೆ ಇರುವುದು ಅಥವಾ ಅವರನ್ನು ಪೋಷಿಸದೆ ಕೈಬಿಡುವುದು ಗಂಭೀರ ಅಪರಾಧವಾಗುತ್ತದೆ. ಹಿರಿಯರು ಇಂತಹ ಸಂದರ್ಭಗಳಲ್ಲಿ ಮೌನಕ್ಕೆ ಶರಣಾಗದೆ ಸಹಾಯವಾಣಿಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅರುಣ್ ಜಾಗೃತಿ ಮೂಡಿಸಿದರು.

**ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯ:** ಕಾರ್ಯಕ್ರಮದಲ್ಲಿ ಮಾತನಾಡಿದ ಶಾಲೆಯ ಮುಖ್ಯಶಿಕ್ಷಕಿ ಎನ್. ಸುಜಾತಮ್ಮ, "ಹಿರಿಯ ನಾಗರಿಕರ ಹಕ್ಕುಗಳನ್ನು ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ. ಸರ್ಕಾರದ ಸೌಲತ್ತುಗಳು ಅವರಿಗೆ ತಲುಪುವಂತೆ ನಾವೆಲ್ಲರೂ ನೆರವು ನೀಡಬೇಕು" ಎಂದರು.

ಈ ಸಂದರ್ಭದಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಮಂಜುನಾಥ್, ಶಿಕ್ಷಕರಾದ ಮಂಜುಳಾ, ಕುಮಾರಿ, ಸೂರ್ಯಪ್ರಭಾ, ಶ್ರೀನಿವಾಸ್ ಸೇರಿದಂತೆ ಶಾಲಾ ಸಿಬ್ಬಂದಿ ಹಾಜರಿದ್ದರು.




# ತರಬೇತಿಗೆ ಅರ್ಜಿ ಆಹ್ವಾನ

ತುಮಕೂರು

ರುಡ್‌ಸೆಟ್ ಸಂಸ್ಥೆ ವತಿಯಿಂದ ಮೇ 2 ರಿಂದ ಎಲೆಕ್ಟ್ರಿಕ್ ಮೋಟಾರ್ ರೀವೈಂಡಿಂಗ್ ಹಾಗೂ ದುರಸ್ತಿ ಕುರಿತು ಒಂದು ತಿಂಗಳ ಉಚಿತ ತರಬೇತಿ ನೀಡಲು ಉದ್ದೇಶಿಸಿದ್ದು, ತರಬೇತಿ ಪಡೆಯಲಿಚ್ಛಿಸುವ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು 18 ರಿಂದ 50 ವರ್ಷ ವಯೋಮಾನದವರಾಗಿದ್ದು, ಕನಿಷ್ಠ 8ನೇ ತರಗತಿ ವಿದ್ಯಾಭ್ಯಾಸ ಹೊಂದಿರಬೇಕು. ಬಿಪಿಎಲ್ ಕಾರ್ಡ್ ಹೊಂದಿರಬೇಕು. ಗ್ರಾಮೀಣ ಭಾಗದ ಬಿಪಿಎಲ್ ಕಾರ್ಡ್ ಹೊಂದಿರುವ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ಆಸಕ್ತರು ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಥವಾ ಮೊಬೈಲ್ ಸಂಖ್ಯೆ: 9380162042, 9481506564, 9481778047, 9113880324ನ್ನು ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆ ಬೆಂಗಳೂರು ಶಾಖೆಯ ನಿರ್ದೇಶಕ ರವಿಕುಮಾರ ತಿಳಿಸಿದ್ದಾರೆ.

# ಬಸವ ಕಲ್ಯಾಣ ಮಠದ ಸುತ್ತ, ಕುಡುಕರ ಹಾವಳಿ, ಪೊಲೀಸ್ ಬೀಟ್ ಹೆಚ್ಚಿಸಲು ಒತ್ತಾಯ

ವಿಜಯಪುರ (ಬೆಂಗಳೂರು ಗ್ರಾಮಾಂತರ)

ಪಟ್ಟಣದ ಹೊರವಲಯದ ಚಂದೇನಹಳ್ಳಿ ಗೇಟ್ ನಲ್ಲಿರುವ ಬಸವ ಕಲ್ಯಾಣಮಠದ ಸುತ್ತಲೂ, ಮದ್ಯಪಾನ ಮಾಡುವವರ ಸಂಖ್ಯೆ ಜಾಸ್ತಿಯಾಗಿದ್ದು, ಪೊಲೀಸರು, ಬೀಟ್ ವ್ಯವಸ್ಥೆಯನ್ನು ಮಾಡಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಬಸವ ಕಲ್ಯಾಣ ಮಠದ ಮುಂದೆ, ಬಸವೇಶ್ವರರ ದೇವಾಲಯವಿದೆ, ಪಕ್ಕದಲ್ಲಿ ಪದವಿ ಕಾಲೇಜಿದೆ. ಆದರೂ, ಸಂಜೆಯಾಗುತ್ತಿದ್ದಂತೆ ಕುಡುಕರು, ಗುಂಪು, ಗುಂಪಾಗಿ ಬಂದು ರಸ್ತೆಯಲ್ಲೆ ಕುಳಿತು ಕುಡಿಯುತ್ತಿರುತ್ತಾರೆ. ರಾತ್ರಿಯ ವೇಳೆ ಬಸವಕಲ್ಯಾಣ ಮಠದ ಕಡೆಗೆ ಹೋಗುವುದಕ್ಕೂ ಭಯವಾಗುತ್ತದೆ ಎಂದು ಮಠದ ಭಕ್ತರು ಆತಂಕ ವ್ಯಕ್ತಪಡಿಸಿದರು.

ಬಸವವೇಶ್ವರ ದೇವಾಲಯದ ಮುಂಭಾಗದಲ್ಲಿ ಕುಳಿತು, ಮದ್ಯಪಾನ ಮಾಡಿ, ಬಾಟಲಿಗಳನ್ನು ರಸ್ತೆಯಲ್ಲೆ ಒಡೆದು ಹಾಕಿರುತ್ತಾರೆ. ಮಾಂಸಾಹಾರವನ್ನು ತಂದು, ಇಲ್ಲೆ ತಿಂದು, ಮೂಳೆಗಳನ್ನು ಮಠದ ಸಮೀಪದಲ್ಲಿ ಎಸೆದು



ಹೋಗುತ್ತಾರೆ. ಇದರಿಂದ ಮೂಳೆಗಳ ತಿನ್ನುವುದಕ್ಕೆ ಬರುವ ನಾಯಿಗಳ ಕಾಟವೂ ಜಾಸ್ತಿಯಾಗಿದೆ. ಮದ್ಯಪಾನ ಮಾಡುವವರನ್ನು ಮಾತನಾಡಿಸುವುದಕ್ಕೂ ಭಯವಾಗುತ್ತದೆ. ಕುಡಿದು ಜೋರಾಗಿ ಕೂಗುತ್ತಾರೆ. ಕೆಟ್ಟ ಕೆಟ್ಟದಾಗಿ ಮಾತನಾಡಿಕೊಳ್ಳುತ್ತಾರೆ. ಸಮೀಪದ ಮನೆಗಳಲ್ಲಿ ಇರುವುದಕ್ಕೆ ಕಷ್ಟವಾಗುತ್ತಿದೆ ಎಂದು ಸ್ಥಳೀಯರು

> ಮಠ, ಮಂದಿರಗಳ ಬಗ್ಗೆ ಗೌರವ ಭಾವನೆಯಿಲ್ಲದವರು, ನೇರವಾಗಿ ಬಂದು ಮಠದ ಮುಂದೆ ಕುಳಿತು ಮದ್ಯಪಾನ ಮಾಡಿ, ಬಾಟಲಿಗಳು ಇಲ್ಲೆ ಬಿಸಾಡಿ ಹೋಗ್ತಾರೆ. ಅವರಿಗೆ ದೇವರು ಒಳ್ಳೆಯ ಬುದ್ಧಿಕೊಡಲಿ. ಪೊಲೀಸರು, ಇಂತಹವರ ಬಗ್ಗೆ ನಿಗಾವಹಿಸಬೇಕಿದೆ.
> - ಮಹದೇವಸ್ವಾಮೀಜಿ ಬಸವಕಲ್ಯಾಣ ಮಠದ ಅಧ್ಯಕ್ಷರು.

ಹೇಳುತ್ತಾರೆ. ರಾತ್ರಿಯ ವೇಳೆ ಇಲ್ಲಿ, ಪೊಲೀಸ್ ಬೀಟ್ ವ್ಯವಸ್ಥೆ ಮಾಡಬೇಕು. ಮಠದ ಸುತ್ತಮುತ್ತಲಿನಲ್ಲಿ ಕುಳಿತುಕೊಂಡು ಕುಡಿಯುವವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

# ಒಳಮೀಸಲಾತಿ ತಾರತಮ್ಯದ ವಿರುದ್ಧ ಹೋರಾಟಕ್ಕೆ ಬೆಂಬಲ



ಮಹದೇವಪುರ

ಒಳಮೀಸಲಾತಿ ವಿಷಯದಲ್ಲಿ ನ್ಯಾ.ನಾಗಮೋಹನ್ ದಾಸ್ ಆಯೋಗ ನೀಡಿರುವ ವರದಿ ಅವೈಜ್ಞಾನಿಕ ವಾಗಿದ್ದು, ಯಾವುದೇ ಕಾರಣಕ್ಕೂ ಸರ್ಕಾರ ಅದನ್ನು ಜಾರಿಗೊಳಿಸಬಾರದು ಎಂದು ಪ್ರಜಾ ವಿಮೋಚನಾ ಸಮಿತಿ ಸಾಮಾಜಿಕ ನ್ಯಾಯ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಆದೂರು ಕೆ ದೇವರಾಜ್ ಪ್ರಬುದ್ಧ ರವರು ತಿಳಿಸಿದರು.

ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊಲಯ ಅಂದರೆ ಹೊಲದ ಒಡೆಯ ಆದರೂ ಈ ದೇಶದಲ್ಲಿ ನಾವು ಸಾಕಷ್ಟು ತುಳಿತಕ್ಕೆ ಒಳಗಾಗಿದ್ದೇವೆ, ಒಳಮೀಸಲಾತಿ ರೋಸ್ಟರ್ ಪದ್ಧತಿ ತಾರತಮ್ಯದಿಂದ ಕೂಡಿದ್ದು, ಹೊಲಯರು ಮತ್ತು ಮಾದಿಗ ಸಮುದಾಯ ಎಂದಿಗೂ ಅಣ್ಣ ತಮ್ಮಂದಿರಂತೆ ಇದ್ದು, ಸಮಾನ ಹಕ್ಕುಗಳನ್ನು ಹಂಚಿಕೆ ಮಾಡಲಿ ನಮಗೆ ಯಾವುದೇ ಅಭ್ಯಂತರಗಳಿಲ್ಲ, ಆದರೆ ಈ ವರದಿಯಲ್ಲಿ ಹೊಲೆಯ ಸಮುದಾಯದ ಪಂಗಡ ಜಾತಿಗಳನ್ನು ಮಾದಿಗ ಸಮುದಾಯಕ್ಕೆ ಸೇರಿಸಿದ್ದು ತಾರತಮ್ಯಕ್ಕೆ ಕಾರಣವಾಗಿದೆ. ಬಲಗೈ ಸಮುದಾಯಕ್ಕೆ ಯಾವುದೇ ಮೀಸಲಾತಿ ಸೌಲಭ್ಯ ದೊರೆಯದಂತೆ ವರದಿ ತಯಾರಾಗಿದೆ. ವರದಿ ತಿರಸ್ಕರಿಸದಿದ್ದಲ್ಲಿ ಮುಂದೆ ಆಗುವ ಎಲ್ಲಾ ಅನಾಹುತಗಳಿಗೆ ರಾಜ್ಯ ಸರ್ಕಾರವೇ ಜವಾಬ್ದಾರಿ ಆಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ಅವೈಜ್ಞಾನಿಕ ವರದಿಯನ್ನು ತಿರಸ್ಕರಿಸುವಂತೆ ಸರ್ಕಾರವನ್ನು ಒತ್ತಾಯಿಸಿ ಮಾ.25ರಂದು ಬುಧವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ಲ್ಲಿ ಬೃಹತ್ ಪ್ರತಿ ಭಟನೆ ಹಮ್ಮಿಕೊಂಡಿದ್ದು ಈ ಹೋರಾಟಕ್ಕೆ ರಾಜ್ಯಾಧ್ಯಕ್ಷರಾದ ಯಡವನಹಳ್ಳಿ ಕೃಷ್ಣಪ್ಪ ನವರ ಮಾರ್ಗದರ್ಶನದಲ್ಲಿ, ಎಲ್ಲಾ ತಾಲ್ಲೂಕಿನ ಪದಾಧಿಕಾರಿಗಳು ಸೇರಿದಂತೆ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ತಿಳಿಸಿದರು.

ಸುದ್ದಿ ಗೋಷ್ಠಿಯಲ್ಲಿ ಬೆಂ.ಉತ್ತರ ತಾಲೂಕು ಕಸಬಾ ಹೋಬಳಿಯ ಗೌರವಾಧ್ಯಕ್ಷ ಹೆಬ್ಬಾಳ ಮುನಿರಾಜ್, ಎಚ್.ಪಿ. ಶಾಮಪ್ಪ, ಎಚ್.ಟಿ.ಶಾಮಪ್ಪ, ಹಿರಂಡಹಳ್ಳಿ ಕಾವೇರಪ್ಪ, ಮುನಿರಾಜ್, ವೆಂಕಟೇಶ್, ದೊಡ್ಡಬನಹಳ್ಳಿ ಮುನಿರಾಜ್, ಚಂದ್ರಪ್ಪ, ಬಾಬು ಸಾಬು, ಎಚ್. ಆರ್.ರಮೇಶ್, ಮಹಿಳಾ ಅಧ್ಯಕ್ಷೆ ಮಮತಾ ಜಿ.ಬೇಬಿಮುಜಶಿಂ, ಉಮಾ ಇತರರಿದ್ದರು.

# ಕುರಿ–ಕೋಳಿ ಮಾಂಸಕ್ಕೆ ಫುಲ್ ಡಿಮ್ಯಾಂಡ್, ಬೆಲೆ ಏರಿಕೆ ಮರೆತ ಮಾಂಸಪ್ರಿಯರು!

ಬಂಗಾರಪೇಟೆ

ಯುಗಾದಿ ಹಬ್ಬದ ಮರುದಿನ ಆಚರಿಸಲಾಗುವ 'ವರ್ಷದ ತೊಡಕು' (ಹೊಸತೊಡಕು) ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಮಾಂಸಾಹಾರದ ಸಂಭ್ರಮ ಮನೆಮಾಡಿದೆ. ಮುಂಜಾನೆಯಿಂದಲೇ ಮಾಂಸಪ್ರಿಯರು ಕುರಿ ಮತ್ತು ಕೋಳಿ ಮಾಂಸ ಖರೀದಿಗೆ ಮುಗಿಬಿದ್ದಿದ್ದು, ಮಾರುಕಟ್ಟೆಯಲ್ಲಿ ಭಾರೀ ಚಟುವಟಿಕೆ ಕಂಡುಬಂದಿದೆ.

**ಗಗನಕ್ಕೇರಿದ ಮಾಂಸದ ದರ:** ಹಬ್ಬದ ಬೇಡಿಕೆಯ ಲಾಭ ಪಡೆದ ವ್ಯಾಪಾರಿಗಳು ಮಾಂಸದ ದರವನ್ನು ಗಣನೀಯವಾಗಿ ಏರಿಕೆ ಮಾಡಿದ್ದಾರೆ. ಸಾಮಾನ್ಯ ದಿನಗಳಿಗಿಂತ ಪ್ರತಿ ಕೆಜಿಗೆ 100 ರೂ. ಅಧಿಕ ದರ ವಿಧಿಸಲಾಗುತ್ತಿದೆ.

**ಕುರಿ ಮಾಂಸ:** ಪ್ರತಿ ಕೆಜಿಗೆ ರೂ.700 ರಿಂದ ರೂ. 800 ರವರೆಗೆ ಮಾರಾಟವಾಗುತ್ತಿದೆ.

**ಕೋಳಿ ಮಾಂಸ:** ಕೆಜಿಗೆ ರೂ. 200 ರಿಂದ ರೂ. 300 ರವರೆಗೆ ಏರಿಕೆಯಾಗಿದೆ.

ದರ ಏರಿಕೆಯ ಬಿಸಿ ಇದ್ದರೂ ಸಹ, ಹಬ್ಬದ ಸಂಭ್ರಮಕ್ಕೆ ಯಾವುದೂ ಅಡ್ಡಿಯಾಗದೆ ಗ್ರಾಹಕರು ಹೆಚ್ಚಿನ ಪ್ರಮಾಣದಲ್ಲಿ ಮಾಂಸ ಖರೀದಿಸುತ್ತಿರುವುದು ವಿಶೇಷವಾಗಿತ್ತು.

**ಮಧ್ಯರಾತ್ರಿಯಿಂದಲೇ ಕ್ಯೂ:** ಪಟ್ಟಣದ ಕಾರಹಳ್ಳಿ ಮುಖ್ಯರಸ್ತೆ ಸೇರಿದಂತೆ ಪ್ರಮುಖ ಮಾಂಸ ಮಾರಾಟ ಕೇಂದ್ರಗಳ ಮುಂದೆ ಗ್ರಾಹಕರ ಉದ್ದನೆಯ ಸಾಲು ಕಂಡುಬಂದಿತು. ಕೆಲವು ಕಡೆಗಳಲ್ಲಿ ಗ್ರಾಹಕರು ಮಧ್ಯರಾತ್ರಿಯಿಂದಲೇ ಸಾಲಿನಲ್ಲಿ ನಿಂತು ಮಾಂಸ ಖರೀದಿ ಮಾಡುತ್ತಿದ್ದ ದೃಶ್ಯಗಳು ಕಂಡುಬಂದವು. ಅಂಗಡಿಗಳ ಮುಂದೆ ಗ್ರಾಹಕರು ನಿಲ್ಲಿಸಿದ್ದ ಬೈಕ್ ಹಾಗೂ ವಾಹನಗಳಿಂದಾಗಿ ಕೆಲಕಾಲ ಸಂಚಾರ ದಟ್ಟಣೆಯೂ ಉಂಟಾಗಿತ್ತು.

**ಜನರಿಲ್ಲದೆ ಬಿಕೋ ಎಂದ ರಸ್ತೆಗಳು:** ಹೊಸತೊಡಕಿನ ಹಿನ್ನೆಲೆಯಲ್ಲಿ ಹೆಚ್ಚಿನವರು ಮಾಂಸ ಖರೀದಿಯಲ್ಲಿ ಬ್ಯುಸಿಯಾಗಿದ್ದರಿಂದ ಪಟ್ಟಣದ ಪ್ರಮುಖ ರಸ್ತೆಗಳು ಜನರಿಲ್ಲದೆ ಬಿಕೋ ಎನ್ನುತ್ತಿದ್ದವು. ಜನರು ಮನೆಗಳಲ್ಲಿ ವಿಶೇಷ ಮಾಂಸಾಹಾರಿ ಅಡುಗೆ ತಯಾರಿಯಲ್ಲಿ ಮಗ್ನರಾದ ಕಾರಣ ಹೊರಾಂಗಣ ಚಟುವಟಿಕೆಗಳು ಕುಂಠಿತಗೊಂಡಿದ್ದವು. ಮಾರುಕಟ್ಟೆ ಪ್ರದೇಶ ಹೊರತುಪಡಿಸಿ ಉಳಿದ ಭಾಗಗಳಲ್ಲಿ ವಾಹನ ಸಂಚಾರ ವಿರಳವಾಗಿತ್ತು.

ಒಟ್ಟಾರೆಯಾಗಿ, ಯುಗಾದಿ ಹೊಸ ವರ್ಷದ ಆರಂಭವನ್ನು ಬಂಗಾರಪೇಟೆಯ ಜನತೆ ಮಾಂಸದೂಟದ ಸವಿಯೊಂದಿಗೆ ಅದ್ದೂರಿಯಾಗಿ ಬರಮಾಡಿಕೊಂಡಿದ್ದಾರೆ.



# 'ಜನರ ಸಮಸ್ಯೆಗಳಿಗೆ ಶೀಘ್ರ ಸ್ಪಂದಿಸಿ'

ದೇವನಹಳ್ಳಿ

"ಗ್ರಾಮೀಣ ಭಾಗದ ಜನರಿಗೆ ಪ್ರಾಮಾಣಿಕ ಹಾಗೂ ಜವಾಬ್ದಾರಿಯುತ ಸೇವೆ ಸಲ್ಲಿಸುವ ಮೂಲಕ ಗ್ರಾಮ ಪಂಚಾಯತ್‌ಗಳ ಅಭಿವೃದ್ಧಿಗೆ ಅಧಿಕಾರಿಗಳು ಹೆಚ್ಚಿನ ಒತ್ತು ನೀಡಬೇಕು" ಎಂದು ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶಿವಕುಮಾರ್ ತಿಳಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವತಿಯಿಂದ ಆಡಳಿತಾಧಿಕಾರಿಗಳು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗಾಗಿ (ಪಿಡಿಒ) ಆಯೋಜಿಸಿದ್ದ 'ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವಿಷಯಗಳ ಒಂದು ದಿನದ ತರಬೇತಿ ಕಾರ್ಯಾಗಾರ'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

**ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ:** ಕಾರ್ಯಾಗಾರದಲ್ಲಿ ಉಪನ್ಯಾಸ ನೀಡಿದ ಇಲಾಖೆಯ ಸಂಪನ್ಮೂಲ ವ್ಯಕ್ತಿಗಳಾದ ಪಿ. ಶಿವಶಂಕರ್ ಮತ್ತು ಕೆಂಪೇಗೌಡ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ–1993ರ ಮಹತ್ವವನ್ನು ವಿವರಿಸಿದರು. "73ನೇ ಸಾಂವಿಧಾನಿಕ ತಿದ್ದುಪಡಿಯು ಪಂಚಾಯತ್‌ಗಳಿಗೆ ಹೆಚ್ಚಿನ ಅಧಿಕಾರ ಮತ್ತು ಆರ್ಥಿಕ ಸ್ವಾಯತ್ತತೆಯನ್ನು ನೀಡಿದೆ. ಜನರಿಂದ ಆಯ್ಕೆಯಾದ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಜನರ ಅಪೇಕ್ಷೆಗೆ ಅನುಗುಣವಾಗಿ ಕೆಲಸ ಮಾಡಬೇಕು" ಎಂದರು.

**ಅಧಿಕಾರಿಗಳಿಗೆ ಪ್ರಮುಖ ಸೂಚನೆಗಳು:**

**ಅನುದಾನ ಸದ್ಬಳಕೆ:** ಸರ್ಕಾರದಿಂದ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆಯಾಗುವ ಅನುದಾನವನ್ನು ವೈಜ್ಞಾನಿಕವಾಗಿ ಮತ್ತು ಪಾರದರ್ಶಕವಾಗಿ ಬಳಸಬೇಕು.

**ಸಭೆಗಳ ಕಡ್ಡಾಯ ನಿರ್ವಹಣೆ:** ಆಡಳಿತಾಧಿಕಾರಿಗಳು ಸಾಮಾನ್ಯ ಸಭೆ, ಮಕ್ಕಳ ಸಭೆ ಹಾಗೂ ವಿಶೇಷ ಸಭೆಗಳನ್ನು ಕಡ್ಡಾಯವಾಗಿ ನಡೆಸಿ ಅಭಿವೃದ್ಧಿಗೆ ವೇಗ ನೀಡಬೇಕು.

**ಮೂಲಭೂತ ಸೌಕರ್ಯ:** ಗ್ರಾಮ ವ್ಯಾಪ್ತಿಯಲ್ಲಿ ಶುದ್ಧ ಕುಡಿಯುವ ನೀರು, ಸ್ವ–ಉದ್ಯೋಗ ಸೃಷ್ಟಿ ಹಾಗೂ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು.

**ತ್ವರಿತ ಸ್ಪಂದನೆ:** ಸಮಸ್ಯೆ ಹೊತ್ತು ಬರುವ ಜನಸಾಮಾನ್ಯರ ಅಹವಾಲುಗಳನ್ನು ತ್ರೈಮಾಸಿಕ ಕೆಡಿಪಿ ಸಭೆಗಳಲ್ಲಿ ಚರ್ಚಿಸಿ ಶೀಘ್ರ ಪರಿಹಾರ ಒದಗಿಸಬೇಕು. ಕಾರ್ಯಾಗಾರದಲ್ಲಿ ಜಿ.ಪಂ ಯೋಜನಾ ನಿರ್ದೇಶಕ ವಿಠಲ್ ಕಾವ್ಳೆ, ಮುಖ್ಯ ಯೋಜನಾಧಿಕಾರಿ ರಾಮಕೃಷ್ಣಯ್ಯ, ಮುಖ್ಯ ಲೆಕ್ಕಾಧಿಕಾರಿ ಮಂಜುನಾಥ್ ಸೇರಿದಂತೆ ವಿವಿಧ ತಾಲೂಕುಗಳ ಇಒಗಳು, ಆಡಳಿತಾಧಿಕಾರಿಗಳು ಮತ್ತು ಪಿಡಿಒಗಳು ಉಪಸ್ಥಿತರಿದ್ದರು.

# ದಾಸಿಮಯ್ಯನವರ ಲೋಕದೃಷ್ಟಿ ಇಂದಿನ ಸಮಾಜಕ್ಕೆ ಆದರ್ಶ: ಡಿಸಿ ಅನುರಾಧ

ದೇವನಹಳ್ಳಿ

"ಜಗತ್ತಿನ ಪ್ರತಿಯೊಂದು ಅಣುವಿನಲ್ಲೂ ಶಿವನನ್ನು ಕಂಡ ದೇವರ ದಾಸಿಮಯ್ಯನವರ ಚಿಂತನೆಗಳು ಮತ್ತು ಅವರ ವಚನ ಸಾಹಿತ್ಯ ಇಂದಿಗೂ ಸಮಾಜಕ್ಕೆ ದಾರಿದೀಪವಾಗಿವೆ" ಎಂದು ಜಿಲ್ಲಾಧಿಕಾರಿ ಡಾ. ಕೆ.ಎನ್. ಅನುರಾಧ ತಿಳಿಸಿದರು.

ಜಿಲ್ಲಾಡಳಿತ, ಜಿ.ಪಂ. ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಜಿಲ್ಲಾಡಳಿತ ಭವನದ




ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ 'ದೇವರ ದಾಸಿಮಯ್ಯ ಜಯಂತಿ' ಕಾರ್ಯಕ್ರಮದಲ್ಲಿ ದಾಸಿಮಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

**ಅಪೂರ್ವ ಭಕ್ತಿಯ ಸಂಕೇತ:** ವೃತ್ತಿಯಲ್ಲಿ ನೇಕಾರರಾಗಿದ್ದ ದಾಸಿಮಯ್ಯನವರು ತಮ್ಮ ಕಾಯಕದಲ್ಲೇ ಕೈಲಾಸವನ್ನು ಕಂಡವರು. ಶಿವನಿಗೆ ತಾವೇ ನೇಯ್ದ ಬಟ್ಟೆಯನ್ನು ಅರ್ಪಿಸಿ ಅಪೂರ್ವ ಭಕ್ತಿಯನ್ನು ಮೆರೆದ ಇತಿಹಾಸ ಪುರಾಣಗಳಲ್ಲಿ ಉಲ್ಲೇಖವಿದೆ. 'ರಾಮನಾಥ' ಎಂಬ ಅಂಕಿತನಾಮದೊಂದಿಗೆ ಅವರು ರಚಿಸಿದ ವಚನಗಳು ಲೋಕದ ಸತ್ಯವನ್ನು ಎತ್ತಿಹಿಡಿಯುತ್ತವೆ ಎಂದು ಜಿಲ್ಲಾಧಿಕಾರಿಗಳು ಸ್ಮರಿಸಿದರು.

ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ರಮೇಶ್, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಶ್ರೀಕಾಂತ್, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಮೋಹನ್, ಮುಜರಾಯಿ ತಹಶೀಲ್ದಾರ್ ಹೇಮಾವತಿ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

3S ಭಾರತ ಸಾರಥಿ
26/03/2026
ಬೆಂಗಳೂರು । ಬೆಂ.ಗ್ರಾಮಾಂತರ । ತುಮಕೂರು । ಮೈಸೂರು । ಮಂಡ್ಯ । ರಾಮನಗರ । ಕೋಲಾರ । ಚಿಕ್ಕಬಳ್ಳಾಪುರ । ಚಿತ್ರದುರ್ಗ । ದಾವಣಗೆರೆ । ಶಿವಮೊಗ್ಗ । ಮಂಗಳೂರು । ಉಡುಪಿ । ಹುಬ್ಬಳ್ಳಿ । ಮಡಿಕೇರಿ । ಚಿಕ್ಕಮಗಳೂರು । ಹಾಸನ । ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಪಂಚಾಯಿತಿ ಮುಂದೆ ಚರಂಡಿ ನೀರಿಟ್ಟು ಗ್ರಾಮಸ್ಥರ ಪ್ರತಿಭಟನೆ

ದೊಡ್ಡಬಳ್ಳಾಪುರ

"ಗ್ರಾಮ ಪಂಚಾಯಿತಿ ಕಚೇರಿಯ ಕೂಗಳತೆ ದೂರದಲ್ಲೇ ನರಕ ಸದೃಶ ಜೀವನ ನಡೆಸುತ್ತಿದ್ದರೂ ಅಧಿಕಾರಿಗಳಿಗೆ ಕಣ್ಣಿಲ್ಲವೇ?" ಎಂದು ಪ್ರಶ್ನಿಸಿ ಹಾದ್ರಿಪುರ ಗ್ರಾಮದ ಕಾಲೋನಿ ನಿವಾಸಿಗಳು ಚರಂಡಿಯ ಕೊಳಕು ನೀರನ್ನು ಬಕೆಟ್‌ಗಳಲ್ಲಿ ತುಂಬಿಕೊಂಡು ಬಂದು ಪಂಚಾಯಿತಿ ಮುಂದೆ ಇಟ್ಟು ವಿಭಿನ್ನವಾಗಿ ಪ್ರತಿಭಟಿಸಿದರು.

ಹಾದ್ರಿಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದಲಿತ ಕಾಲೋನಿಯಲ್ಲಿ ಚರಂಡಿಗಳು ಹೂಳು ತುಂಬಿ ಗಬ್ಬೆದ್ದು ನಾರುತ್ತಿವೆ. ವರ್ಷಗಳೇ ಕಳೆದರೂ ಸ್ವಚ್ಛತೆ ಮಾಡದ ಕಾರಣ ಆಕ್ರೋಶಗೊಂಡ ಗ್ರಾಮಸ್ಥರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಜನಪ್ರತಿನಿಧಿಗಳ ವಿರುದ್ಧ ಧಿಕ್ಕಾರ ಕೂಗಿ ತಮ್ಮ ಅಸಮಾಧಾನ ಹೊರಹಾಕಿದರು.

<u>ಹಬ್ಬದೂಟದ ಬದಲು ಚರಂಡಿ ವಾಸನೆ!</u>

"ಇತ್ತೀಚೆಗಷ್ಟೇ ಕಳೆದ ಯುಗಾದಿ ಹಬ್ಬದ ದಿನ ಮನೆಯಲ್ಲಿ ಒಬ್ಬಟ್ಟಿನ ಸವಿಯ ಬದಲು ಚರಂಡಿಯ ದುರ್ನಾತವೇ ಹೆಚ್ಚಾಗಿತ್ತು. ಮನೆಗೆ ನೆಂಟರಿಷ್ಟರು ಬರಲು ಅಸಹ್ಯ ಪಡುತ್ತಿದ್ದಾರೆ. ಬೇಸಿಗೆ ಆರಂಭವಾಗಿರುವುದರಿಂದ ಚರಂಡಿಯ ಕೊಳಕಿನಿಂದ ಹಾವು, ಚೇಳುಗಳು ಮನೆಗೆ ನುಗ್ಗುತ್ತಿವೆ. ಪುಟ್ಟ ಮಕ್ಕಳ ಆರೋಗ್ಯದ ಬಗ್ಗೆ ನಮಗೆ ತೀವ್ರ ಆತಂಕವಿದೆ" ಎಂದು ಗ್ರಾಮದ ಮುಖಂಡ ಚೆನ್ನಲಕ್ಷಯ್ಯ ಅಳಲು



ತೋಡಿಕೊಂಡರು.

<u>ಸೊಳ್ಳೆಗಳ ಕಾಟ – ರೋಗದ ಭೀತಿ:</u>

ಕಾಲೋನಿಯಲ್ಲಿ ಸುಮಾರು 75 ಕುಟುಂಬಗಳು ವಾಸವಿದ್ದು, ಚರಂಡಿ ನೀರು ಸರಾಗವಾಗಿ ಹರಿಯದೆ ಮಡುಗಟ್ಟಿ ನಿಂತಿದೆ. ಇದರಿಂದಾಗಿ ಇಡೀ ಪ್ರದೇಶದಲ್ಲಿ ಸೊಳ್ಳೆಗಳ ಹಾವಳಿ ಮಿತಿಮೀರಿದೆ. "ಸಂಜೆಯಾದರೆ ಸಾಕು ಮನೆ ಬಾಗಿಲು ಹಾಕಿ ಕುಳಿತುಕೊಳ್ಳಬೇಕಾದ ಪರಿಸ್ಥಿತಿ ಇದೆ. ಡೆಂಗಿ ಸೇರಿದಂತೆ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ. ತೆರಿಗೆ ಪಾವತಿಸಿದರೂ ನಮಗೆ ಕನಿಷ್ಠ ಮೂಲಸೌಕರ್ಯ ಸಿಗುತ್ತಿಲ್ಲ" ಎಂದು ನಿವಾಸಿಗಳಾದ ಚೆನ್ನರಾಯಪ್ಪ ಮತ್ತು ನಾಗರತ್ನ ದೂರಿದರು.

<u>ಮನೆಗಳಿಗೆ ನುಗ್ಗುವ ಮಲಿನ ನೀರು:</u>

ಪ್ರತಿಭಟನಾಕಾರರಾದ ಹನುಮಂತರಾಜು ಮಾತನಾಡಿ, "ರಸ್ತೆಗಿಂತ ಮನೆಗಳು ತಗ್ಗಿನಲ್ಲಿವೆ. ಚರಂಡಿ ವ್ಯವಸ್ಥೆ ಸರಿಯಿಲ್ಲದ ಕಾರಣ ಮಳೆ ಬಂದಾಗ ಮಲಿನ ನೀರೆಲ್ಲಾ ಮನೆಗಳ ಒಳಗೆ ನುಗ್ಗುತ್ತದೆ. ಶೌಚಾಲಯದ ನೀರು ಕೂಡ ಸರಿಯಾಗಿ ಹರಿಯದೆ ಅಶುಚಿತ್ವ ತಾಂಡವವಾಡುತ್ತಿದೆ. ಅಧಿಕಾರಿಗಳಿಗೆ ಮನವಿ ನೀಡಿ ಸಾಕಾಗಿದೆ, ಇನ್ನು ಮುಂದೆ ಉಗ್ರ ಹೋರಾಟ ಮಾಡಲಾಗುವುದು" ಎಂದು ಎಚ್ಚರಿಸಿದರು.

ಈ ಪ್ರತಿಭಟನೆಯಲ್ಲಿ ಹಾದ್ರಿಪುರ ಕಾಲೋನಿಯ ನೂರಾರು ಗ್ರಾಮಸ್ಥರು ಹಾಗೂ ಪ್ರಗತಿಪರ ಹೋರಾಟಗಾರರು ಭಾಗವಹಿಸಿದ್ದರು.

> ಕಸ ಎತ್ತಿದ್ದೇವೆ ಎಂದು ಗ್ರಾಮ ಪಂಚಾಯಿತಿಯಲ್ಲಿ ಮೂರು ತಿಂಗಳ ಹಿಂದೆಯೇ ಬಿಲ್ ಮಾಡಿಸಿಕೊಂಡಿದ್ದಾರೆ. ಆದರೆ, ಕಸ ಮಾತ್ರ ಇಲ್ಲೇ ಇದೆ. ಅಧಿಕಾರಿಗಳು ಬಿಲ್ ಮಾಡಿಸಿಕೊಳ್ಳಲು ಮುತುವರ್ಜಿ ವಹಿಸುತ್ತಾರೆ.. ಸಮಸ್ಯೆಯನ್ನು ಕೇಳೋದೆ ಇಲ್ಲ. ಕೂಡಲೇ ಕಸವನ್ನು ತೆರವುಗೊಳಿಸಬೇಕು. ಒಂದು ವೇಳೆ ಹೀಗೆ ಬೇಜವ್ದಾರಿ ಮುಂದುವರಿಸಿದರೆ ಮುಂದಿನ ದಿನಗಳಲ್ಲಿ ಪಂಚಾಯಿತಿ ಮುತ್ತಿಗೆ ಹಾಕಿ ಹೋರಾಟ ಮಾಡುತ್ತೇವೆ.
>
> - ನವೀನ್, ಯುವ ಮುಖಂಡ, ಹಾದ್ರಿಪುರ ಗ್ರಾಮ.

# ಯುಗಾದಿ ಪ್ರಯುಕ್ತ ದಿನದರ್ಶಿಕೆ ಬಿಡುಗಡೆ



ಮಾಗಡಿ

ಹಿಂದೂಗಳ ಹೊಸ ವರ್ಷವಾದ ಯುಗಾದಿ ಹಬ್ಬದ ಪ್ರಯುಕ್ತ "ಈ ನಮ್ಮ ಕನ್ನಡ ನಾಡು" ದಿನಪತ್ರಿಕೆಯ 2026ನೇ ಸಾಲಿನ ಆಕರ್ಷಕ ಕ್ಯಾಲೆಂಡರ್ ಅನ್ನು ಪಟ್ಟಣದಲ್ಲಿ ಅದ್ದೂರಿಯಾಗಿ ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ದೊಡ್ಡಬಾಣಗೆರೆ ಮಾರಣ್ಣ, "ಪತ್ರಿಕಾ ರಂಗವು ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿದ್ದು, ಸಂವಿಧಾನದ ಆಶಯಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಾಮಾಜಿಕ ಸಮಾನತೆ ಮತ್ತು ಸಬಲೀಕರಣಕ್ಕಾಗಿ ಪತ್ರಿಕೆಗಳು ಶ್ರಮಿಸುತ್ತವೆ. ಪತ್ರಿಕಾ ಧರ್ಮ ಎಂಬುದು ಎರಡು ಅಲಗಿನ ಕತ್ತಿಯಿದ್ದಂತೆ; ಅದು ಸರಿ–ತಪ್ಪುಗಳನ್ನು ಎತ್ತಿ ತೋರಿಸುವ ದೇಶದ ಬೆಂಗಾವಲು ನಾಯಿಯಂತೆ ಕೆಲಸ ಮಾಡುತ್ತದೆ," ಎಂದು ಹಿತನುಡಿಗಳನ್ನು ಹೇಳಿದರು.

ಸಾಂಸ್ಕೃತಿಕ ಮಾಹಿತಿ ಒಳಗೊಂಡ ದಿನದರ್ಶಿಕೆ: ಜಿ.ಟಿವಿ ವೆಂಕಟೇಶ್ ಮಾತನಾಡಿ, "ಹೊಸ ಕ್ಯಾಲೆಂಡರ್‌ನಲ್ಲಿ 2026ನೇ ಸಾಲಿನ ಪ್ರಮುಖ ಹಬ್ಬಗಳು, ಸಾರ್ವಜನಿಕ ರಜೆಗಳು ಹಾಗೂ ಸಾಂಸ್ಕೃತಿಕ ಮಾಹಿತಿಗಳನ್ನು ವಿವರವಾಗಿ ನೀಡಲಾಗಿದೆ. ಕನ್ನಡ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಇದನ್ನು ವಿನ್ಯಾಸಗೊಳಿಸಲಾಗಿದ್ದು, ಸಾರ್ವಜನಿಕರು ಪತ್ರಿಕೆಯನ್ನು ಪ್ರೋತ್ಸಾಹಿಸಬೇಕು," ಎಂದು ತಿಳಿಸಿದರು.

13 ವರ್ಷಗಳ ನಿರಂತರ ಸೇವೆ: ಮಾಗಡಿ ಕಾರ್ಯನಿರತ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಚ್.ಆರ್. ಮಾದೇಶ್ ಮಾತನಾಡಿ, "ಯುಗಾದಿಯ ಶುಭ ದಿನದಂದು ನಮ್ಮ ಸಂಘದ ಸದಸ್ಯರಾದ ವರದಿಗಾರ ನಾಗರಾಜು ಎಂ.ಪಿ. ಅವರು ಕಳೆದ 13 ವರ್ಷಗಳಿಂದ ನಿರಂತರವಾಗಿ ಪತ್ರಿಕೆ ಮತ್ತು ದಿನದರ್ಶಿಕೆಯನ್ನು ಹೊರತರುತ್ತಿರುವುದು ಶ್ಲಾಘನೀಯ," ಎಂದು ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಟಿ.ಎಂ. ಶ್ರೀನಿವಾಸ್, ಯುಗಾದಿ ಹೊಸ ಆರಂಭದ ಸಂಕೇತವಾಗಿದ್ದು, ಪತ್ರಿಕೆಯು ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗೆ ಸದಾ ಬದ್ಧವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕಟ್ಟೆಚ್ಚರ ರಘು, ರಂಗನಾಡು ದೇವರಾಜು, ವಕೀಲ ಶಿವಪ್ಪ, ಅಮೃತಗಳಿಗೆ ಕುಮಾರ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ಕುಣಿಗಲ್ ಆಸ್ಪತ್ರೆ ನವೀಕರಣಕ್ಕೆ 2 ಕೋಟಿ ರೂ.: ಶಾಸಕ



ಕುಣಿಗಲ್

"ತಾಲೂಕಿನ ಬಡವರಿಗೆ ಮತ್ತು ದುರ್ಬಲ ವರ್ಗದವರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಕಟ್ಟಡವನ್ನು 2 ಕೋಟಿ ರೂಪಾಯಿ ವೆಚ್ಚದಲ್ಲಿ ಸಮಗ್ರವಾಗಿ ದುರಸ್ತಿ ಹಾಗೂ ನವೀಕರಣಗೊಳಿಸಲಾಗುತ್ತಿದೆ" ಎಂದು ಶಾಸಕ ಡಾ. ಹೆಚ್.ಡಿ. ರಂಗನಾಥ್ ತಿಳಿಸಿದರು.

ಆಸ್ಪತ್ರೆ ಆವರಣದಲ್ಲಿ ನವೀಕರಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, "ಈ ಅನುದಾನದಲ್ಲಿ ಆಸ್ಪತ್ರೆಯ ಮೇಲ್ಚಾವಣಿ (ಟೆರೇಸ್) ಚುರುಕಿ ಕಾರ್ಯ, ಹಾಳಾಗಿರುವ ಟೈಲ್ಸ್‌ಗಳ ಬದಲಾವಣೆ, ಶೌಚಾಲಯಗಳ ದುರಸ್ತಿ ಹಾಗೂ ಇಡೀ ಆಸ್ಪತ್ರೆಗೆ ಬಣ್ಣ ಬಳಿಯುವ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ" ಎಂದರು.

<u>70 ಕೋಟಿ ವೆಚ್ಚದ ತಾಯಿ–ಮಗು ಆಸ್ಪತ್ರೆ:</u> ಇನ್ಫೋಸಿಸ್ ಪ್ರತಿಷ್ಠಾನದ ವತಿಯಿಂದ ಸುಮಾರು 70 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಭವ್ಯ 'ತಾಯಿ ಮತ್ತು ಮಗು' ಆಸ್ಪತ್ರೆಯ ಕಟ್ಟಡ ಪೂರ್ಣಗೊಂಡಿದೆ. "ಈ ಆಸ್ಪತ್ರೆಗೆ ಅಗತ್ಯವಿರುವ ಆಧುನಿಕ ಯಂತ್ರೋಪಕರಣ ಹಾಗೂ ಸಿಬ್ಬಂದಿಯನ್ನು ಒದಗಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಲಾಗಿದೆ. ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿ ಕ್ರಮ ವಹಿಸುವುದಾಗಿ ಅವರು ಭರವಸೆ ನೀಡಿದ್ದಾರೆ. ಈ ಆಸ್ಪತ್ರೆಯನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ನಂತರ ಅವರ ಹಸ್ತದಿಂದಲೇ ಉದ್ಘಾಟಿಸಬೇಕೆಂಬ ಹಂಬಲ ನನ್ನದಾಗಿದೆ" ಎಂದು ಶಾಸಕರು ಇದೇ ಸಂದರ್ಭದಲ್ಲಿ ಆಶಯ ವ್ಯಕ್ತಪಡಿಸಿದರು.

<u>ಮೆಡಿಕಲ್ ಕಾಲೇಜು ಸ್ಥಾಪನೆಯ ಗುರಿ:</u> "ಕುಣಿಗಲ್ ಕ್ಷೇತ್ರದಲ್ಲಿ ಸರ್ಕಾರಿ ಅಥವಾ ಖಾಸಗಿ ಮೆಡಿಕಲ್ ಕಾಲೇಜು ಆರಂಭಿಸುವುದು ನನ್ನ ತಂದೆಯವರ ದೊಡ್ಡ ಕನಸಾಗಿತ್ತು. ಈ ಬಗ್ಗೆ ಈಗಾಗಲೇ ಸರ್ಕಾರದ ಮಟ್ಟದಲ್ಲಿ ಮಾತುಕತೆ ನಡೆಸಲಾಗಿದೆ. ಮೆಡಿಕಲ್ ಕಾಲೇಜು ಆರಂಭವಾದರೆ ತಾಲೂಕಿನ ಜನತೆಗೆ ಉಚಿತವಾಗಿ ಸಿಟಿ ಸ್ಕ್ಯಾನ್, ಎಂಆರ್‌ಐ ಸ್ಕ್ಯಾನ್ ಹಾಗೂ ಪ್ರಮುಖ ಸರ್ಜರಿಗಳನ್ನು ಸ್ಥಳೀಯವಾಗಿಯೇ ಒದಗಿಸಲು ಸಾಧ್ಯವಾಗುತ್ತದೆ" ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಸತೀಶ್ ಬಾಬು, ಮಕ್ಕಳ ತಜ್ಞ ಡಾ. ರಾಘವೇಂದ್ರ, ಕೆಪಿಸಿಸಿ ಸದಸ್ಯ ಬೇಗೂರು ನಾರಾಯಣ, ರೈತ ಪರ್ವ ಜಿಲ್ಲಾಧ್ಯಕ್ಷ ಮುನಿಯಪ್ಪ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ಶೃಂಗೇರಿ ಪೀಠದ ವಿರುದ್ಧ ಅವಹೇಳನ: ಮಧುಗಿರಿಯಲ್ಲಿ ವಿಪ್ರ ಸಂಘಟನೆಗಳ ಖಂಡನೆ

ಮಧುಗಿರಿ

ಶೃಂಗೇರಿ ಶಾರದಾ ಪೀಠದ ಜಗದ್ಗುರುಗಳ ವಿರುದ್ಧ ಅವಹೇಳನಕಾರಿ ಮತ್ತು ಮಾನಹಾನಿ ಹೇಳಿಕೆ ನೀಡಿರುವ ಗೋವಿಂದಾನಂದ ಸರಸ್ವತಿ ಎಂಬುವವರ ವಿರುದ್ಧ ಮಧುಗಿರಿ ಪಟ್ಟಣದ ವಿವಿಧ ವಿಪ್ರ ಸಂಘಟನೆಗಳು ತೀವ್ರ ಖಂಡನೆ ವ್ಯಕ್ತಪಡಿಸಿವೆ. ಈ ಕೂಡಲೇ ಅವರು ಕ್ಷಮೆ ಕೇಳದಿದ್ದರೆ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಲಾಗಿದೆ.

ಪಟ್ಟಣದಲ್ಲಿ ತಾಲೂಕು ಬ್ರಾಹ್ಮಣ ಸಭಾ, ವಿಪ್ರ ಸೇವಾ ಟ್ರಸ್ಟ್, ಶಂಕರ ಸೇವಾ ಸಮಿತಿ, ಶ್ರೀ ಶಾರದಾ ಮಹಿಳಾ ಸಂಘ ಹಾಗೂ ಲಕ್ಷ್ಮೀನರಸಿಂಹ ಸ್ವಾಮಿ ಸೇವಾ ಟ್ರಸ್ಟ್ ಜಂಟಿಯಾಗಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಹಾಗೂ ವಕೀಲ ದತ್ತಾತ್ರೇಯ ಅವರು ಈ ವಿಷಯ ತಿಳಿಸಿದರು.

<u>ವಿವಾದದ ಹಿನ್ನೆಲೆ:</u>

ತಿರುಪತಿಯಲ್ಲಿ ಸ್ಥಳೀಯ ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಗೋವಿಂದಾನಂದ ಸರಸ್ವತಿಯವರು, ಶೃಂಗೇರಿ ಪೀಠಾಧಿಪತಿಗಳು ನಿಜವಾದ ಸ್ವಾಮೀಜಿಗಳಲ್ಲ ಎಂದು ವಿವಾದಾತ್ಮಕವಾಗಿ ಮಾತನಾಡಿದ್ದರು. ಅಲ್ಲದೆ, ಶ್ರೀ ವಿಧುಶೇಖರ ಭಾರತಿ ಸ್ವಾಮೀಜಿಗಳು ಶಂಕರಾಚಾರ್ಯರೆಂದು ಸುಳ್ಳು ಹೇಳಿಕೊಂಡು



ಓಡಾಡುತ್ತಿದ್ದಾರೆ ಎಂಬ ಬೇಜವಾಬ್ದಾರಿಯುತ ಹೇಳಿಕೆ ನೀಡಿದ್ದಾರೆ. ಇದನ್ನು ಮಧುಗಿರಿಯ ವಿಪ್ರ ಸಮುದಾಯವು ಒಕ್ಕೊರಲಿನಿಂದ ಖಂಡಿಸಿದೆ.

<u>ಹಿಂದೂ ಸಮಾಜ ಒಡೆಯುವ ತಂತ್ರ:</u>

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹಿರಿಯ ವಕೀಲ ಶ್ಯಾಮನಾಥ್, "ದಕ್ಷಿಣ ಮತ್ತು ಉತ್ತರ ಭಾರತದ ಮಠಗಳ ನಡುವೆ ಭೇದಭಾವ ಸೃಷ್ಟಿಸಿ ಹಿಂದೂ ಧರ್ಮವನ್ನು ಒಡೆಯುವ ಕೆಲಸ ನಡೆಯುತ್ತಿದೆ. ಹತಾಶೆಯಿಂದ ನೀಡಿರುವ ಇಂತಹ ಹೇಳಿಕೆಗಳು ಸಹಿಸಲಸಾಧ್ಯ. ಶೃಂಗೇರಿ ಮಠಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದ್ದು, ಪೀಠದ ಗೌರವಕ್ಕೆ ಧಕ್ಕೆ ತರುವವರ ವಿರುದ್ಧ ಕಾನೂನು ಹೋರಾಟಕ್ಕೂ ಸಿದ್ಧ" ಎಂದರು.

ಸುದ್ದಿಗೋಷ್ಠಿಯಲ್ಲಿ ಬ್ರಾಹ್ಮಣ ಸಭಾ ಕಾರ್ಯದರ್ಶಿ ರವೀಶ್, ಜಂಟಿ ಕಾರ್ಯದರ್ಶಿ ಬಿ.ಪಿ. ನಾರಾಯಣ, ಖಜಾಂಚಿ ಶ್ರೀನಿವಾಸಮೂರ್ತಿ, ಪುರಸಭೆ ಮಾಜಿ ಸದಸ್ಯ ಕೆ. ನಾರಾಯಣ್, ಆಡಿಟರ್ ಲಕ್ಷ್ಮೀಪ್ರಸಾದ್ ಹಾಗೂ ಶಾರದಾ ಸಂಘದ ಶಕುಂತಲಾ ಗುಂಡೂರಾವ್ ಉಪಸ್ಥಿತರಿದ್ದರು.

> "ಇತಿಹಾಸದಲ್ಲಿ ಹಿಂದೂಗಳನ್ನು ಒಡೆದು ಆಳುವ ನೀತಿಯನ್ನು ದುಷ್ಟರು ಅನುಸರಿಸಿದ್ದರು. ಈಗ ಮತ್ತೆ ಅದೇ ತಂತ್ರವನ್ನು ಮಠಗಳ ವಿಷಯದಲ್ಲಿ ಪ್ರಯೋಗಿಸಲಾಗುತ್ತಿದೆ. ಪೀಠಾಧಿಪತಿ ಹಾಗೂ ಉತ್ತರಾಧಿಕಾರಿಗಳ ನಡುವಿನ ವ್ಯತ್ಯಾಸ ತಿಳಿಯದ ಗೋವಿಂದಾನಂದರು ರಾಜಕೀಯ ಪಿತೂರಿಯ ಭಾಗವಾಗಿ ಇಂತಹ ಹೇಳಿಕೆ ನೀಡಿದ್ದಾರೆ. ಇದು ಸನಾತನ ಧರ್ಮದ ಮೇಲಿನ ದಾಳಿಯಾಗಿದೆ."
>
> - ದತ್ತಾತ್ರೇಯ, ಅಧ್ಯಕ್ಷರು, ತಾಲೂಕು ಬ್ರಾಹ್ಮಣ ಸಭಾ.

# ಮಣ್ಣಿನ ಕಲೆಗೆ ಜ್ಞಾನಗಂಗಾ ಕಾಲೇಜಿನಲ್ಲಿ ಜಾನಪದ ನಮನ



ವಿಜಯಪುರ

"ಜಾನಪದ ಕಲೆಗಳು ನಮ್ಮ ದೇಶದ ಮಣ್ಣಿನ ಸೊಗಡು ಮತ್ತು ಸಂಸ್ಕೃತಿಯ ಪ್ರತಿಬಿಂಬಗಳಾಗಿವೆ. ಇವುಗಳನ್ನು ಉಳಿಸಿ ಮುಂದಿನ ಪೀಳಿಗೆಗೆ ಪರಿಚಯಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ" ಎಂದು ಶ್ರೀ ಸಾಯಿ ಜ್ಞಾನಗಂಗಾ ಪದವಿ ಕಾಲೇಜಿನ ಪ್ರಾಂಶುಪಾಲ ಪ್ರದೀಪ್ ಕುಮಾರ್ ಹೇಳಿದರು.

ಪಟ್ಟಣದ ಹೊರವಲಯದ ಚಂದೇನಹಳ್ಳಿ ಗೇಟ್‌ನಲ್ಲಿರುವ ಕಾಲೇಜು ಆವರಣದಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪಾಪನಹಳ್ಳಿಯ ಪರಿವರ್ತನಾ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಿದ್ದ ಜಾನಪದ ಉತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

<u>ಬೆವರಿನ ಸಂಸ್ಕೃತಿಯೇ ಜಾನಪದ:</u> ಪರಿವರ್ತನಾ ಟ್ರಸ್ಟ್‌ನ ಕಾರ್ಯದರ್ಶಿ ಪಿ.ಎಂ. ಮೂರ್ತಿ ಮಾತನಾಡಿ, "ಜಾನಪದ ಎಂಬುದು ಬೆವರಿನ ಸಂಸ್ಕೃತಿ. ನಮ್ಮ ಪೂರ್ವಜರು ದುಡಿಯುತ್ತಲೇ ತಮ್ಮ ಅನುಭವಗಳನ್ನು ಗೀಗೀ ಪದ, ತತ್ವಪದಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಹಳ್ಳಿ ಬದುಕಿನ ಈ ಅದ್ಭುತ ಕಲೆಗಳಲ್ಲಿ ಸಮಾಜದ ಅಂತಃಕರಣ ಅಡಗಿದೆ. ಯುವಪೀಳಿಗೆಗೆ ಈ ದೇಸೀಯ ಸೊಗಡನ್ನು ಪಸರಿಸುವುದು ನಮ್ಮ ಮುಖ್ಯ ಉದ್ದೇಶ" ಎಂದರು.

<u>ಕಲಾವಿದರ ಜಾನಪದ ಕಂಪು:</u> ಉತ್ಸವದ ಅಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕಲಾವಿದರು ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದರು.

<u>ವೀರಗಾಸೆ:</u> ಕಲಾವಿದ ಗಂಗಾಧರ್ ಮತ್ತು ತಂಡದವರಿಂದ ಅಬ್ಬರದ ವೀರಗಾಸೆ ಕುಣಿತ.

<u>ತಮಟೆ ವಾದನ:</u> ವೆಂಕಟೇಶ್ ಮತ್ತು ತಂಡದಿಂದ ತಮಟೆಯ ಲಯಬದ್ಧ ಸದ್ದು.

<u>ಗಾಯನ:</u> ದೂರದರ್ಶನ ಕಲಾವಿದ ಮುನಿರಾಜು ಎಂ.ಎಂ.ಆರ್, ರಾಮಕೃಷ್ಣಪ್ಪ ಹಾಗೂ ನಾಗರಾಜ್ ಅವರಿಂದ ಜಾನಪದ ಮತ್ತು ಭಕ್ತಿಗೀತೆಗಳ ಗಾಯನ ನಡೆಯಿತು. ಸುಗಮ ಸಂಗೀತ ಕಾರ್ಯಕ್ರಮವೂ ಜನಮನ ಸೆಳೆಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಜಾನಪದ ಕಲಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ಯುವಕರ ಗುಂಪುಗಳ ನಡುವೆ ಮಾರಾಮಾರಿ; ಹಲ್ಲೆಕೋರರ ಬಂಧನಕ್ಕೆ ಗ್ರಾಮಸ್ಥರ ಪಟ್ಟು

ದೊಡ್ಡಬಳ್ಳಾಪುರ

ತಾಲೂಕಿನ ರಾಜಘಟ್ಟ ಪಂಚಾಯಿತಿ ವ್ಯಾಪ್ತಿಯ ಕಂಚಿಗನಾಳ ಗ್ರಾಮದಲ್ಲಿ ಯುಗಾದಿ ಹಬ್ಬದ ಸಂದರ್ಭದಲ್ಲಿ ಎರಡು ಯುವಕರ ಗುಂಪುಗಳ ನಡುವೆ ಭೀಕರ ಘರ್ಷಣೆ ನಡೆದಿದ್ದು, ದೊಣ್ಣೆಗಳಿಂದ ಪರಸ್ಪರ ಹಲ್ಲೆ ಮಾಡಿಕೊಂಡಿರುವ ಘಟನೆ ಶುಕ್ರವಾರ ಸಂಜೆ ಜರುಗಿದೆ.

ಮೂಲಗಳ ಪ್ರಕಾರ, ಕುಡಿದ ನಶೆಯಲ್ಲಿದ್ದ ಕೆಲವು ಯುವಕರು ಗ್ರಾಮದ ರಸ್ತೆಯಲ್ಲಿ ಅಪಾಯಕಾರಿಯಾಗಿ 'ವ್ಹೀಲಿಂಗ್' ಮಾಡುತ್ತಿದ್ದರು. ಇದನ್ನು ಗಮನಿಸಿದ ಕಂಚಿಗನಾಳ ಗ್ರಾಮದ ನಿವಾಸಿಗಳು ಪ್ರಶ್ನಿಸಿ ಬುದ್ಧಿವಾದ ಹೇಳಲು ಮುಂದಾಗಿದ್ದಾರೆ. ಈ ವೇಳೆ ಆಕ್ರೋಶಗೊಂಡ ಯುವಕರ ಗುಂಪು ದೊಣ್ಣೆಗಳನ್ನು ಹಿಡಿದು ಗ್ರಾಮಸ್ಥರ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

ಮತ್ತೊಂದು ಮಾಹಿತಿಯ ಪ್ರಕಾರ, ಹೊಸತೊಡಕಿನ ದಿನ ಇಸ್ಪೀಟ್ ಆಟವಾಡುವ ವಿಚಾರದಲ್ಲಿ ಎರಡು



ಗುಂಪುಗಳ ನಡುವೆ ಮಾತಿನ ಚಕಮಕಿ ನಡೆದು, ಅದು ವಿಕೋಪಕ್ಕೆ ತಿರುಗಿ ನಡುರಸ್ತೆಯಲ್ಲೇ ಹೊಡೆದಾಟಕ್ಕೆ ಕಾರಣವಾಗಿದೆ ಎನ್ನಲಾಗಿದೆ. ಕಂಚಿಗನಾಳ ಗ್ರಾಮದ ಯುವಕರ ಮೇಲೆ ಬೀಡಿಗೆರೆ ಹಾಗೂ ರಾಜಘಟ್ಟ ಗ್ರಾಮದ ಯುವಕರು ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಘಟನೆಗೆ ಸಂಬಂಧಿಸಿದಂತೆ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಹಬ್ಬದ ಶಾಂತಿಗೆ ಭಂಗ ತಂದಿರುವ ಹಾಗೂ ಸಾರ್ವಜನಿಕರ ಮೇಲೆ ಹಲ್ಲೆ ನಡೆಸಿರುವ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕಂಚಿಗನಾಳ ಗ್ರಾಮಸ್ಥರು ಆಗ್ರಹಿಸಿದ್ದಾರೆ.

# 'ಪೂರ್ವಜರ ಪರಂಪರೆ ಉಳಿಸುವುದು ನಮ್ಮೆಲ್ಲರ ಹೊಣೆ'



ಮಧುಗಿರಿ

"ಜಾನಪದ ಸಂಸ್ಕೃತಿಯು ನಮ್ಮ ಅಸ್ಮಿತೆಯ ಗುರುತಾಗಿದ್ದು, ಪೂರ್ವಜರು ನಮಗೆ ಬಿಟ್ಟುಕೊಟ್ಟಿರುವ ಈ ಅಮೂಲ್ಯ ಪರಂಪರೆಯನ್ನು ಮುಂದಿನ ಪೀಳಿಗೆಗೆ ದಾಟಿಸುವ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕನ ಮೇಲಿದೆ" ಎಂದು ವಚನ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ರುದ್ರಮೂರ್ತಿ ಎಲೆರಾಮಪುರ ಅಭಿಪ್ರಾಯಪಟ್ಟರು.

ತಾಲೂಕಿನ ಪುರವರ ಹೋಬಳಿಯ ಅರಳಾಪುರ ಗ್ರಾಮದ ಶ್ರೀ ಚಾಮುಂಡಿ ಸಾಂಸ್ಕೃತಿಕ ಮಂದಿರದಲ್ಲಿ, ಶ್ರೀ ಚಾಮುಂಡೇಶ್ವರಿ ಗ್ರಾಮೀಣ ಜನಪದ ಯುವ ಕಲಾ ವೃಂದ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ 20ನೇ ವರ್ಷದ ಗಡಿನಾಡ ಜಾನಪದ ಸಾಂಸ್ಕೃತಿಕ ಉತ್ಸವವನ್ನು ಅರೇವಾದ್ಯ (ಉರುಮೆ) ಬಾರಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

<u>ಸಂಸ್ಕೃತಿಯ ಮೂಲ ಸ್ತಂಭ ಜಾನಪದ:</u> "ಜಾನಪದ ಕಲೆಗಳು ಕೇವಲ ಮನರಂಜನೆಯಲ್ಲ, ಅವು ನಮ್ಮ ನಾಡಿನ ಇತಿಹಾಸ, ಜೀವನಶೈಲಿ ಮತ್ತು ಮೌಲ್ಯಗಳನ್ನೊಳಗೊಂಡ ಸಂಸ್ಕೃತಿಯ ಮೂಲ ಸ್ತಂಭಗಳು. ಆಧುನಿಕತೆಯ ಅಬ್ಬರದಲ್ಲಿ ಈ ಪರಂಪರೆ ಮರೆಯಾಗದಂತೆ ನೋಡಿಕೊಳ್ಳಲು ಯುವಪೀಳಿಗೆ ಹೆಚ್ಚಿನ ಆಸಕ್ತಿ ತೋರಬೇಕು. ಇಂತಹ ಉತ್ಸವಗಳು ಗ್ರಾಮೀಣ ಕಲಾವಿದರಿಗೆ ಸೂಕ್ತ ವೇದಿಕೆ ಕಲ್ಪಿಸಿಕೊಡುತ್ತವೆ" ಎಂದು ರುದ್ರಮೂರ್ತಿ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಎಚ್.ಎಸ್. ರಾಮಸ್ವಾಮಿ, ಎ.ಸಿ. ಮಹದೇವಪ್ಪ, ವಿ.ಡಿ. ಹನುಮಂತ ರಾಯಪ್ಪ, ಸಿದ್ದರಾಜು, ರುಕ್ಮಿಣಿ, ಮನೋಹರ ಮುರುಳಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# 30 ಕಲ್ಯಾಣಿಗಳ ನೈರ್ಮಲ್ಯೀಕರಣಕ್ಕೆ ಶಪಥ: ಸಿಇಓ

ಚಿಕ್ಕಬಳ್ಳಾಪುರ

"ಜಿಲ್ಲೆಯ ಪುರಾತನ ಜಲಮೂಲಗಳನ್ನು ಸಂರಕ್ಷಿಸಿ, ಪರಿಸರ ಸ್ನೇಹಿ ನಾಡಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಕಲ್ಯಾಣಿಗಳ ಸ್ವಚ್ಛತಾ ಆಂದೋಲನವನ್ನು ಹಮ್ಮಿಕೊಳ್ಳಲಾಗಿದೆ" ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ನವೀನ್ ಭಟ್ ತಿಳಿಸಿದರು.

ತಾಲ್ಲೂಕಿನ ಮಂಚನಬೆಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಐತಿಹಾಸಿಕ ಕೊಂಡಪ್ಪ ಕಲ್ಯಾಣಿ ಯಲ್ಲಿ ಹಮ್ಮಿಕೊಳ್ಳಲಾಗಿದ್ದ ಬೃಹತ್ ಸ್ವಚ್ಛತಾ ಅಭಿಯಾನಕ್ಕೆ ಖುದ್ದಾಗಿ ಚಾಲನೆ ನೀಡಿ ಅವರು ಮಾತನಾಡಿದರು.

<u>ಕಲ್ಯಾಣಿಗಳಿಗೆ ಮರುಜೀವ:</u> ತಾಲ್ಲೂಕಿನಾದ್ಯಂತ ಒಟ್ಟು 30 ಪ್ರಮುಖ ಕಲ್ಯಾಣಿಗಳನ್ನು ಗುರುತಿಸಲಾಗಿದ್ದು, ಹಂತ–ಹಂತವಾಗಿ ಅವುಗಳನ್ನು ಸ್ವಚ್ಛಗೊಳಿಸಲಾಗುವುದು. "ಕೊಂಡಪ್ಪ ಕಲ್ಯಾಣಿಯು ಸುದೀರ್ಘ ಇತಿಹಾಸ ಹೊಂದಿದ್ದರೂ, ಮಣ್ಣು ಮತ್ತು ಕಸಕಡ್ಡಿಗಳಿಂದ ತುಂಬಿ ನೀರು ಶೇಖರಣೆಯಾಗುತ್ತಿರಲಿಲ್ಲ. ಇಂದಿನ ಅಭಿಯಾನದಲ್ಲಿ ನೂರಕ್ಕೂ ಹೆಚ್ಚು ಜನರು ಶ್ರಮದಾನ ಮಾಡುವ ಮೂಲಕ ಜಲಮೂಲಕ್ಕೆ ಮರುಜೀವ ನೀಡುತ್ತಿದ್ದಾರೆ" ಎಂದು ಸಿಇಓ ವಿವರಿಸಿದರು.

<u>ಮಳೆಗಾಲಕ್ಕೂ ಮುನ್ನ ಸಿದ್ಧತೆ:</u> "ಸಾಮಾನ್ಯವಾಗಿ ಜೂನ್ ತಿಂಗಳಿನಿಂದ ಮಳೆಗಾಲ ಆರಂಭವಾಗುತ್ತದೆ. ಆದರೆ ಜಿಲ್ಲೆಯಲ್ಲಿ ಈಗಲೇ ಮಳೆ ಸುರಿಯುತ್ತಿರುವುದರಿಂದ, ಎಲ್ಲಾ ಜಲಮೂಲಗಳನ್ನು




ಸಿದ್ಧಪಡಿಸಿ ನೀರು ಇಂಗುವಂತೆ ಮಾಡುವುದು ನಮ್ಮ ಆದ್ಯತೆಯಾಗಿದೆ. ಸಾರ್ವಜನಿಕರು ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ತ್ಯಜಿಸಿ, ಪ್ಲಾಸ್ಟಿಕ್ ಮುಕ್ತ ಗ್ರಾಮ ಮತ್ತು ಜಿಲ್ಲೆಯನ್ನಾಗಿ ಮಾಡಲು ಸಹಕರಿಸಬೇಕು" ಎಂದು ಮನವಿ ಮಾಡಿದರು.

<u>ಸಾರ್ವಜನಿಕರಿಗೆ ಕಿವಿಮಾತು:</u> ಯಾರೂ ಸಹ ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯಬಾರದು. ಪಂಚಾಯಿತಿ ವತಿಯಿಂದ ಬರುವ ಸ್ವಚ್ಛತಾ ವಾಹನಗಳಿಗೇ ಕಸ ನೀಡಬೇಕು. ಸ್ವಚ್ಛತೆಗೆ ಮೊದಲ ಆದ್ಯತೆ ನೀಡುವ ಮೂಲಕ ಜಿಲ್ಲೆಯ ಆರೋಗ್ಯ ಕಾಪಾಡಬೇಕು ಎಂದು ಅವರು ಈ ಸಂದರ್ಭದಲ್ಲಿ ತಿಳಿಸಿದರು.

ಅಭಿಯಾನದಲ್ಲಿ ಜಿಲ್ಲಾ ಪಂಚಾಯತ್ ಸಹಾಯಕ ನಿರ್ದೇಶಕ ಮುನಿರಾಜು, ತಾ.ಪಂ. ಇಒ ಮಂಜುನಾಥ್ ಜಿ.ಆರ್, ಮಂಚನಬೆಲೆ ಗ್ರಾ.ಪಂ. ಮಾಜಿ ಅಧ್ಯಕ್ಷ ಶ್ರೀಧರ್, ಪಿಡಿಒ ರಾಮಕೃಷ್ಣ ಸೇರಿದಂತೆ ತಾಲ್ಲೂಕಿನ ಎಲ್ಲಾ ಪಂಚಾಯಿತಿಗಳ ಅಭಿವೃದ್ಧಿ ಅಧಿಕಾರಿಗಳು, ನರೇಗಾ ಸಿಬ್ಬಂದಿ, ಕರವಸೂಲಿಗಾರರು ಹಾಗೂ ಸ್ವಚ್ಛತಾ ಕಾರ್ಮಿಕರು ಪಾಲ್ಗೊಂಡಿದ್ದರು.

# ಅದಾಲತ್‌ಗೆ ಬನ್ನಿ: ತಹಸೀಲ್ದಾರ್



ಬಂಗಾರಪೇಟೆ

"ಸರ್ಕಾರದ ವಿವಿಧ ಪಿಂಚಣಿ ಸೌಲಭ್ಯಗಳು ಪ್ರತಿಯೊಬ್ಬ ಅರ್ಹ ಫಲಾನುಭವಿಗೂ ತಲುಪಬೇಕು ಎಂಬ ಉದ್ದೇಶದಿಂದ ಹೋಬಳಿ ಮಟ್ಟದಲ್ಲಿ 'ಪಿಂಚಣಿ ಅದಾಲತ್' ಹಮ್ಮಿಕೊಳ್ಳಲಾಗುತ್ತಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು" ಎಂದು ಗ್ರೇಡ್–2 ತಹಸೀಲ್ದಾರ್ ಗಾಯತ್ರಿ ತಿಳಿಸಿದರು.

ತಾಲೂಕಿನ ಬೂದಿಕೋಟೆ ಗ್ರಾಮದ ನಾಡಕಚೇರಿ ಆವರಣದಲ್ಲಿ ಆಯೋಜಿಸಲಾಗಿದ್ದ ಪಿಂಚಣಿ ಅದಾಲತ್ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕರಿಸಿ ಅವರು ಮಾತನಾಡಿದರು.

ಫಲಾನುಭವಿಗಳು ಸಣ್ಣಪುಟ್ಟ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸುವ ಉದ್ದೇಶದಿಂದ ಈ ಕಾರ್ಯಕ್ರಮ ರೂಪಿಸಲಾಗಿದೆ. ವೃದ್ಧಾಪ್ಯ ವೇತನ, ವಿಧವಾ ವೇತನ ಹಾಗೂ ಅಂಗವಿಕಲ ವೇತನ ಸೇರಿದಂತೆ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಅರ್ಹರು ಸೂಕ್ತ ದಾಖಲೆಗಳನ್ನು ನೀಡಿ ಪ್ರತಿ ತಿಂಗಳು ನೇರವಾಗಿ ತಮ್ಮ ಖಾತೆಗೆ ಪಿಂಚಣಿ ಮೊತ್ತವನ್ನು ಪಡೆದುಕೊಳ್ಳಬಹುದು ಎಂದು ಅವರು ವಿವರಿಸಿದರು.

65 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಪ್ರತಿ ತಿಂಗಳು 1,200 ರೂಪಾಯಿ ಪಿಂಚಣಿ ಸೌಲಭ್ಯ ದೊರೆಯಲಿದೆ. ಅದಾಲತ್‌ನಲ್ಲಿ ಸ್ಥಳದಲ್ಲೇ ಅರ್ಜಿಗಳನ್ನು ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು. ಈ ವೇಳೆ ರಾಜಸ್ವ ನಿರೀಕ್ಷಕ ಪವನ್ ಕುಮಾರ್, ಗ್ರಾಮ ಆಡಳಿತ ಅಧಿಕಾರಿಗಳಾದ ಸುರೇಶ್, ವಿನೋದ್, ಶರಣಪ್ಪ ಹಾಗೂ ಅಂಜಲಿ ಉಪಸ್ಥಿತರಿದ್ದರು.

# ಭಗತ್ ಸಿಂಗ್, ಸುಖದೇವ್, ರಾಜಗುರು ಸ್ಮರಣೆ; ಮೊಳಗಿದ ದೇಶಭಕ್ತಿ ಘೋಷಣೆ

ಕೋಲಾರ

"ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣೆ ಮಾಡಿದ ಶಹೀದರ ತ್ಯಾಗವನ್ನು ಯುವಜನರು ಸದಾ ಸ್ಮರಿಸಬೇಕು ಮತ್ತು ಅವರ ದೇಶಭಕ್ತಿಯ ಮಾರ್ಗದಲ್ಲಿ ನಡೆಯಬೇಕು" ಎಂದು ಇಟಿಸಿಎಂ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ಹರೀಶ್ ಕುಮಾರ್ ಎ.ಆರ್. ತಿಳಿಸಿದರು.

ನವ ಸಮಾಜ ಮತ್ತು ಪರಿಸರ ಅಭಿವೃದ್ಧಿ ಸಂಸ್ಥೆ, ಇಟಿಸಿಎಂ ನರ್ಸಿಂಗ್ ಕಾಲೇಜು ಹಾಗೂ ಕೇಂದ್ರ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದ 'ಮೈ



ಭಾರತ್' ಕೇಂದ್ರದ ಸಹಯೋಗದಲ್ಲಿ ಸೋಮವಾರ ನಗರದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಶಹೀದ್ ದಿವಸ್' ಅಂಗವಾಗಿ ದೇಶಭಕ್ತಿ ಜಾಗೃತಿ ರ್‍ಯಾಲಿಗೆ ಚಾಲನೆ ನೀಡಿ ಅವರು ಮಾತನಾಡಿದರು.

<u>ಕ್ರಾಂತಿಕಾರಿಗಳ ಸ್ಮರಣೆ:</u> ಭಾರತದ ಸ್ವಾತಂತ್ರ್ಯ ಸಂಗ್ರಾಮದ ಅವಿಸ್ಮರಣೀಯ ನಾಯಕರಾದ ಭಗತ್ ಸಿಂಗ್, ಸುಖದೇವ್ ಮತ್ತು ರಾಜಗುರು ಅವರ ಬಲಿದಾನವನ್ನು ಸ್ಮರಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ರ್‍ಯಾಲಿಯುದ್ದಕ್ಕೂ ವಿದ್ಯಾರ್ಥಿಗಳು ದೇಶಭಕ್ತಿ ಘೋಷಣೆಗಳನ್ನು ಕೂಗುತ್ತಾ, ಶಹೀದರ ಆದರ್ಶಗಳನ್ನು ಅಳವಡಿಸಿಕೊಳ್ಳುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್. ಸಂಯೋಜಕ ಶೇಷಾದ್ರಿ, ನವ ಸಮಾಜ ಸಂಸ್ಥೆಯ ಅಧ್ಯಕ್ಷ ಶಾಮ್ಸ್ ಎಂ. ಬಿ, ಕಾರ್ಯದರ್ಶಿ ಮುಸ್ತಫಾ, ಸದಸ್ಯೆ ಅಶ್ವಿನಿ, ವೈ.ಐ.ಡಿ.ಎಸ್ ಪ್ರಾಜೆಕ್ಟ್ ಕೋಆರ್ಡಿನೇಟರ್ ಆನಂದ ಮಹಾರಾಜ್, ಗೌಸ್ ಖಾನ್ ಬಿ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಮತ್ತು ಯುವಜನರು ಭಾಗವಹಿಸಿದ್ದರು.

# ವಚನ ಸಾಹಿತ್ಯದ ಪಿತಾಮಹ ದೇವರ ದಾಸಿಮಯ್ಯ ಜಯಂತಿ ಅದ್ದೂರಿ ಆಚರಣೆ

ಕೊರಟಗೆರೆ

"11ನೇ ಶತಮಾನದಲ್ಲಿಯೇ ಸಾಮಾಜಿಕ, ಧಾರ್ಮಿಕ ಹಾಗೂ ವೈಚಾರಿಕ ಕ್ರಾಂತಿಗೆ ನಾಂದಿ ಹಾಡಿದ ಶ್ರೀ ದೇವರ ದಾಸಿಮಯ್ಯನವರು ವಚನ ಸಾಹಿತ್ಯದ ಆದ್ಯ ಪ್ರವರ್ತಕ ಹಾಗೂ ಮೂಲಪುರುಷರಾಗಿದ್ದಾರೆ" ಎಂದು ತಹಶೀಲ್ದಾರ್ ಮಂಜುನಾಥ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತ, ತಾಲೂಕು ದೇವಾಂಗ ಸಂಘ ಹಾಗೂ ತೋಗಟವೀರ ಸಂಘದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ 'ದೇವರ ದಾಸಿಮಯ್ಯ ಜಯಂತಿ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



**ವಚನ ಸಾಹಿತ್ಯದ ಶ್ರೀಮಂತಿಕೆಗೆ ದಾಸಿಮಯ್ಯ ಕಾರಣ:**

ನೇಯ್ಗೆ ವೃತ್ತಿಯನ್ನು ಕಾಯಕವಾಗಿಸಿಕೊಂಡಿದ್ದ ದಾಸಿಮಯ್ಯನವರು ತಮ್ಮ ವಚನಗಳಲ್ಲಿ ಭಕ್ತಿ, ಜ್ಞಾನ, ಸರಳತೆ ಮತ್ತು ವೈರಾಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು. 12ನೇ ಶತಮಾನದ ವಚನ ಚಳವಳಿಗಿಂತ ಮುನ್ನವೇ ಸಾಮಾನ್ಯ ಜನರಿಗೂ ಅರ್ಥವಾಗುವಂತಹ ಸರಳ ವಚನಗಳನ್ನು ರಚಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಕನ್ನಡ ಸಾಹಿತ್ಯ ಲೋಕವು ವಚನ ಸಾಹಿತ್ಯದಿಂದ ಶ್ರೀಮಂತಗೊಳ್ಳಲು ದಾಸಿಮಯ್ಯನವರೇ ಪ್ರಮುಖ ಕಾರಣಕರ್ತರು ಎಂದು ತಹಶೀಲ್ದಾರ್ ಬಣ್ಣಿಸಿದರು.

**ಅಸಮಾನತೆ ಹೋಗಲಾಡಿಸಲು ಶ್ರಮಿಸಿದ ಮಹಾನ್ ಚೇತನ:**

"ದಾಸಿಮಯ್ಯನವರು ರಚಿಸಿದ ಸುಮಾರು 176 ವಚನಗಳು ಲಭ್ಯವಿದ್ದು, ಇವು ಸಮಾಜದ ಅಸಮಾನತೆಯನ್ನು ಹೋಗಲಾಡಿಸಲು ದಾರಿದೀಪವಾಗಿವೆ. ಅವರ ವಚನಗಳ ಸಾರವನ್ನು ಯುವಜನತೆಗೆ ಮತ್ತು ಮಕ್ಕಳಿಗೆ ತಿಳಿಸುವ ಮೂಲಕ ಅವರನ್ನು ಸುಸಂಸ್ಕೃತರನ್ನಾಗಿ ಮಾಡುವುದು ಇಂದಿನ ಅಗತ್ಯವಾಗಿದೆ" ಎಂದು ಅವರು ಅಭಿಪ್ರಾಯಪಟ್ಟರು.

**ತತ್ವಾದರ್ಶಗಳ ಅಳವಡಿಕೆಗೆ ಕರೆ:**

ದೇವಾಂಗ ಸಮುದಾಯದ ಮುಖಂಡ ಹಾಗೂ ಅರ್ಚಕ ಕೆ.ಎಸ್. ಮಾರುತಿ ಮಾತನಾಡಿ, "ದಾಸಿಮಯ್ಯನವರು ಜಾತಿ, ಲಿಂಗ, ಧರ್ಮದ ಭೇದವಿಲ್ಲದೆ ಎಲ್ಲರೂ ಸಮಾನವಾಗಿ ಬದುಕಬೇಕೆಂಬ ಸಂದೇಶ ನೀಡಿದರು. ಅವರ ರಾಮನಾಥ ಅಂಕಿತನಾಮದ ವಚನಗಳು ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಶಕ್ತಿ ಹೊಂದಿವೆ" ಎಂದರು. ನಿವೃತ್ತ ಶಿಕ್ಷಕ ರಾಮಯ್ಯ ಮಾತನಾಡಿ, ದಾಸಿಮಯ್ಯನವರನ್ನು ಒಂದು ಜಾತಿಗೆ ಸೀಮಿತಗೊಳಿಸದೆ ಅವರ ಮಾನವೀಯ ಮೌಲ್ಯಗಳನ್ನು ಸಮಾಜಕ್ಕೆ ತಲುಪಿಸಬೇಕು ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಕಂದಾಯ ಇಲಾಖೆಯ ಚುನಾವಣಾ ಅಧಿಕಾರಿ ಮಂಜುನಾಥ್, ಕೃಷಿ ಸಹಾಯಕ ನಿರ್ದೇಶಕ ರುದ್ರಪ್ಪ, ಮುಖ್ಯಾಧಿಕಾರಿಗಳು ಹಾಗೂ ದೇವಾಂಗ ಸಮುದಾಯದ ಮುಖಂಡರಾದ ನರಸಿಂಹ, ಮೋಹನ್‌ಕುಮಾರ್, ರಂಗರಾಜು, ಹನುಮಂತ ರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಡ್ರಗ್ ಪೆಡ್ಲರ್‌ಗಳ ಮೇಲೆ 'ಗೂಂಡಾ ಕಾಯ್ದೆ' ಅಸ್ತ್ರ: ಡಿಸಿ ರವಿ

ಕೋಲಾರ

ಜಿಲ್ಲೆಯಲ್ಲಿ ಮಾದಕದ್ರವ್ಯಗಳ ಹಾವಳಿಯನ್ನು ಸಂಪೂರ್ಣವಾಗಿ ನಿಯಂತ್ರಿಸಲು ಮತ್ತು ಯುವಜನತೆಯನ್ನು ಈ ವ್ಯಸನದಿಂದ ರಕ್ಷಿಸಲು ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಎಂ. ಆರ್. ರವಿ ತಿಳಿಸಿದರು.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯ ಕೇಸ್ವಾನ್ ಸಭಾಂಗಣದಲ್ಲಿ ನಡೆದ ಮಾದಕದ್ರವ್ಯ ಬಳಕೆ ತಡೆ ಮತ್ತು ನಿಯಂತ್ರಣ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಸಕ್ರಿಯವಾಗಿರುವ ಡ್ರಗ್ ಪೆಡ್ಲರ್‌ಗಳನ್ನು ಗುರುತಿಸಿ, ಅವರ ವಿರುದ್ಧ ಕಠಿಣವಾದ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಲು ಪೊಲೀಸ್ ಅಧಿಕಾರಿಗಳಿಗೆ



ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ಒಡಿಶಾ ಮತ್ತು ಆಂಧ್ರ ಪ್ರದೇಶದ ಕಡೆಯಿಂದ ಬರುವ ರೈಲುಗಳಲ್ಲಿ ಮಾದಕವಸ್ತುಗಳ ಸಾಗಾಣಿಕೆ ನಡೆಯುತ್ತಿರುವ ಬಗ್ಗೆ ಸಂಶಯವಿರುವುದರಿಂದ, ರೈಲ್ವೆ ಪೊಲೀಸ್ ಮತ್ತು ಡಿ.ಆರ್.ಎಂ ಅವರಿಗೆ ಪತ್ರ ಬರೆದು ತಪಾಸಣೆಯನ್ನು ತೀವ್ರಗೊಳಿಸಲು ತೀರ್ಮಾನಿಸಲಾಯಿತು.

ತನಿಖೆಯ ಪ್ರಕಾರ, ಶೇ.50ಕ್ಕಿಂತ ಹೆಚ್ಚು ಮಾದಕವಸ್ತು ಬಳಕೆದಾರರು ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಾಗಿದ್ದಾರೆ. ಆದ್ದರಿಂದ ಕೈಗಾರಿಕಾ ಪ್ರದೇಶಗಳಲ್ಲಿ ಮತ್ತು ಲೇಬರ್ ಕಾಲೋನಿಗಳಲ್ಲಿ ಜಾಗೃತಿ ಮೂಡಿಸಲು ಕಾರ್ಮಿಕ ಇಲಾಖೆಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಯಿತು.

ವಿದ್ಯಾರ್ಥಿಗಳು ದಾರಿ ತಪ್ಪದಂತೆ ತಡೆಯಲು ಪ್ರತಿಯೊಂದು ಶಾಲಾ–ಕಾಲೇಜುಗಳಲ್ಲಿ ಸ್ಥಾಪಿಸಲಾಗಿರುವ 'ಮಾದಕದ್ರವ್ಯ ವಿರೋಧಿ ಕೋಶ'ಗಳನ್ನು ಮತ್ತಷ್ಟು ಬಲಪಡಿಸಬೇಕು ಮತ್ತು ಶಾಲಾ ಆವರಣದ ಸುತ್ತಮುತ್ತ ಅನುಮಾನಾಸ್ಪದ ಚಟುವಟಿಕೆಗಳ ಮೇಲೆ ನಿಗಾ ಇಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಸಗಿ ಪುನರ್ವಸತಿ ಕೇಂದ್ರಗಳು ನಿಯಮಾನುಸಾರ ನೋಂದಣಿಯಾಗಿವೆಯೇ ಮತ್ತು ಅಲ್ಲಿನ ಚಟುವಟಿಕೆಗಳು ಸರಿಯಾಗಿವೆಯೇ ಎಂಬ ಬಗ್ಗೆ ಜಂಟಿ ತಪಾಸಣೆ ನಡೆಸಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸೂಚಿಸಲಾಯಿತು.

ಗಾಂಜಾ ಬೆಳೆಯುವ ಭೂಮಾಲೀಕರಿಗೆ ಎಚ್ಚರಿಕೆ ನೀಡಿದ ಜಿಲ್ಲಾಧಿಕಾರಿಗಳು, ಅಂತಹ ಜಮೀನುಗಳ ಆರ್.ಟಿ.ಸಿ ರದ್ದುಪಡಿಸಲು ಮತ್ತು ಅವರ ಮೇಲೆ ಎನ್.ಡಿ.ಪಿ.ಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲು ಸೂಚಿಸಿದರು. ಜಿಲ್ಲೆಯನ್ನು ಮಾದಕ ವಸ್ತು ಹಾಗೂ ವ್ಯಸನಮುಕ್ತವನ್ನಾಗಿ ಮಾಡಲು ಎಲ್ಲರೂ ಕಾರ್ಯಪ್ರವೃತ್ತರಾಗಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೋಲಾರ ಪೊಲೀಸ್ ವರಿಷ್ಠಾಧಿಕಾರಿಗಳಾದ ಕನ್ನಿಕಾ ಸಿಕ್ರಿವಾಲ್, ಕೆಜಿಎಫ್ ಪೊಲೀಸ್ ವರಿಷ್ಠಾಧಿಕಾರಿ ಶಿವಾಂಷು ರಜಪೂತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಶ್ರೀನಿವಾಸ್, ಶಾಲಾ ಶಿಕ್ಷಣ ಉಪನಿರ್ದೇಶಕರಾದ ಆಸ್ಮಾ, ಅಬಕಾರಿ ಇಲಾಖೆ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಯ ಮುಖ್ಯಸ್ಥರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಬಸ್ ಪುನರಾರಂಭಕ್ಕೆ ಮನವಿ



ಕೋಲಾರ

ಕೋಲಾರ– ಬಂಗಾರಪೇಟೆ– ಕಾಮಸಮುದ್ರ– ಬತ್ತಲಹಳ್ಳಿ ಮಾರ್ಗವಾಗಿ ಸ್ಥಗಿತಗೊಳಿಸಿರುವ ಬಸ್ ಸಂಚಾರವನ್ನು ಪುನರಾರಂಭಿಸುವಂತೆ ಹಲವು ಗ್ರಾಮಸ್ಥರ ಸಹಿ ಹೊಂದಿರುವ ಮನವಿ ಪತ್ರವನ್ನು ನಿವೃತ್ತ ಎ.ಎಸ್.ಐ. ಅಕ್ಬರ್, ನಿವೃತ್ತ ಎ.ಎಸ್.ಐ. ಗೌರಿಪೇಟೆ ಕೆ.ಎನ್. ರವೀಂದ್ರನಾಥ್, ಶಿಕ್ಷಕಿ ಕವಿತಾ ಮನವಿಯನ್ನು ರಾಜ್ಯ ಸಾರಿಗೆ ಸಚಿವರಾದ ರಾಮಲಿಂಗಾರೆಡ್ಡಿಯವರಿಗೆ ಕೋಲಾರ ಜಿಲ್ಲಾಧಿಕಾರಿಗಳ ಮೂಲಕ ಸಲ್ಲಿಸಿದರು. ಜಿಲ್ಲಾಧಿಕಾರಿಗಳ ಕಚೇರಿಯ ತಹಶೀಲ್ದಾರ್ ಎಸ್. ಹರಿಪ್ರಸಾದ್ ಮನವಿಯನ್ನು ಸ್ವೀಕರಿಸಿದರು.

ಕೋಲಾರ ಜಿಲ್ಲಾ ಕೇಂದ್ರದಿಂದ ಬಂಗಾರಪೇಟೆ, ಕಾಮಸಮುದ್ರ ಮಾರ್ಗವಾಗಿ ಬತ್ತಲಹಳ್ಳಿಗೆ ಸಂಚರಿಸುತ್ತಿದ್ದ ಮಾರ್ಗ ಸಂಖ್ಯೆ 153ರ ಕೆ.ಎಸ್.ಆರ್.ಟಿ.ಸಿ ಬಸ್ ಸೇವೆಯನ್ನು ಇತ್ತೀಚೆಗೆ ಸ್ಥಗಿತಗೊಳಿಸಿದ್ದು, ಹತ್ತಾರು ಹಳ್ಳಿಗಳ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಈ ಬಸ್ ಸಂಪರ್ಕವು ಕೇವಲ ಸಾರಿಗೆ ವ್ಯವಸ್ಥೆಯಾಗಿರದೆ, ಈ ಭಾಗದ ಜನರ ಜೀವನದ ಅವಿಭಾಜ್ಯ ಅಂಗವಾಗಿತ್ತು. ಬಸ್ ಸಂಚಾರ ಸ್ಥಗಿತಗೊಂಡಿರುವುದರಿಂದ ಈ ಕೆಳಗಿನ ಸಮಸ್ಯೆಗಳು ಎದುರಾಗಿವೆ. ಶಾಲಾ–ಕಾಲೇಜುಗಳಿಗೆ ತೆರಳುವ ನೂರಾರು ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ತಲುಪಲು ಸಾಧ್ಯವಾಗುತ್ತಿಲ್ಲ. ಜಿಲ್ಲಾ ಕೇಂದ್ರದ ಆಸ್ಪತ್ರೆಗೆ ಬರುವ ರೋಗಿಗಳಿಗೆ ಮತ್ತು ವೃದ್ಧರಿಗೆ ಈ ಬಸ್ ಸಂಚಾರ ದೊಡ್ಡ ಆಸರೆಯಾಗಿತ್ತು. ಜಿಲ್ಲಾಡಳಿತ ಕಚೇರಿಗೆ ಕೆಲಸದ ನಿಮಿತ್ತ ಬರುವ ಸಾರ್ವಜನಿಕರು ಮತ್ತು ವ್ಯಾಪಾರಸ್ಥರು ಖಾಸಗಿ ವಾಹನಗಳಿಗೆ ಹೆಚ್ಚಿನ ಹಣ ವ್ಯಯಿಸುವಂತಾಗಿದೆ ಎಂದಿದ್ದಾರೆ. ಬತ್ತಲಹಳ್ಳಿ, ಕುಂದರಸನಹಳ್ಳಿ, ತೊಪ್ಪನಹಳ್ಳಿ, ದೊಡ್ಡಕಳವಂಚಿ, ಚಿನ್ನಕಾಮನಹಳ್ಳಿ, ಮಿಟ್ಟಹಳ್ಳಿ, ಚಿಕ್ಕಬೊಮ್ಮನಹಳ್ಳಿ, ದೊಡ್ಡಬೊಮ್ಮನಹಳ್ಳಿ, ನೆರ್ನಟ್ಟು, ಕಾಮಸಮುದ್ರ, ಕೇತಗಾನಹಳ್ಳಿ, ಮುದುಗುಳಿ, ಮಾಕಾರನಹಳ್ಳಿ, ಪುತ್ರಸೋಮನಹಳ್ಳಿ, ಪರ್ವನಹಳ್ಳಿ ಹಾಗೂ ವರದಾಪೂರ ಗ್ರಾಮಗಳ ಗ್ರಾಮಸ್ಥರು ಈ ಮನವಿಯಲ್ಲಿ ಸಹಿ ಮಾಡುವ ಮೂಲಕ ಧ್ವನಿಗೂಡಿಸಿದ್ದಾರೆ. ಸದರಿ ಬಸ್ ಸಂಚಾರದ ಪುನರಾರಂಭಕ್ಕೆ ಕೋರಿ ಜ. 19ರಂದು ಮೊದಲ ಬಾರಿ ಮನವಿ ಸಲ್ಲಿಸಲಾಗಿತ್ತು. ಆದರೆ ಅಧಿಕಾರಿಗಳಿಂದ ಯಾವುದೇ ಸಕಾರಾತ್ಮಕ ಸ್ಪಂದನೆ ದೊರೆಯದ ಕಾರಣ, ಜನವರಿ 28ರಂದು ಗ್ರಾಮಸ್ಥರು ಮತ್ತೊಮ್ಮೆ ಸಂಘಟಿತರಾಗಿ ಕೋಲಾರ ಘಟಕದ ಸಹಾಯಕ ಸಂಚಾರ ಅಧಿಕಾರಿಗಳಾದ ಮುನಿಲಕ್ಷ್ಮಮ್ಮ ಅವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಅದರೂ ಬಸ್ ಸಂಚಾರ ಪ್ರಾರಂಭವಾಗಿರುವುದಿಲ್ಲ ಎಂದು ಮನವಿಯಲ್ಲಿ ತಿಳಿಸಿದ್ದಾರೆ. "ಯಾವುದೇ ಮುನ್ಸೂಚನೆ ನೀಡದೆ ಲಾಭ–ನಷ್ಟದ ಲೆಕ್ಕಾಚಾರದಲ್ಲಿ ಅಥವಾ ತಾಂತ್ರಿಕ ಕಾರಣ ನೀಡಿ ಬಸ್ ನಿಲ್ಲಿಸಿರುವುದು ಸರಿಯಲ್ಲ. ಗ್ರಾಮೀಣ ಭಾಗದ ಜನರಿಗೆ ಸಾರಿಗೆ ಸೌಲಭ್ಯ ನೀಡುವುದು ಸರ್ಕಾರದ ಕರ್ತವ್ಯ. ಕೂಡಲೇ ಅಧಿಕಾರಿಗಳಿಗೆ ಸೂಚನೆ ನೀಡಿ ಮಾರ್ಗ 153ನ್ನು ಪುನರಾರಂಭಿಸಬೇಕು ಈ ಮೂಲಕ ಸಾರಿಗೆ ಸಚಿವರಲ್ಲಿ ಮನವಿ ಮಾಡಿದ್ದಾರೆ.

# 'ರೂ. 35.27 ಲಕ್ಷ ಉಳಿತಾಯದ ಬಜೆಟ್'



ಕೋಲಾರ

ಸ್ವಾತಂತ್ರ್ಯ ಬಂದಾಗಿನಿಂದ ಕೋಲಾರ ವಿಧಾನಸಭಾ ಕ್ಷೇತ್ರದಲ್ಲಿ ಯಾರು ಮಾಡಿರದ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದು ಇದಕ್ಕೆ ಪಕ್ಷಾತೀತವಾಗಿ ಬೆಂಬಲ ಕೊಟ್ಟಾಗ ಮತ್ತಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡುವುದಾಗಿ ಶಾಸಕ ಕೊತ್ತೂರು ಮಂಜುನಾಥ್ ಮನವಿ ಮಾಡಿದರು.

ಮಂಗಳವಾರ ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ಅಧ್ಯಕ್ಷೆ ಡಿ. ಅನುಷ ರವರ ಅಧ್ಯಕ್ಷತೆಯಲ್ಲಿ 2026–27 ನೇ ಸಾಲಿನ ಬಜೆಟ್ ಮಂಡನೆ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ರಾಜಕೀಯ ಚುನಾವಣೆಗೆ ಸೀಮೀತವಾಗಿರಬೇಕು ಜನಪ್ರತಿನಿಧಿಗಳು ಒಗ್ಗಟ್ಟಿನಿಂದ ಅಭಿವೃದ್ಧಿ ಕೆಲಸಗಳನ್ನು ಮಾಡಿಸಿಕೊಳ್ಳುವ ಮೂಲಕ ಜನಸಾಮಾನ್ಯರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂದು ಕಿವಿ ಮಾತು ಹೇಳಿದರು.

ಈ ಭಾಗದಲ್ಲಿನ ಸರ್ಕಾರಿ ಜಾಗವನ್ನು ಉಳಿಸಿಕೊಳ್ಳುವ ಕೆಲಸ ಮಾಡಿದರೆ ಮುಂದೆ ಸರ್ಕಾರಿ ಕಛೇರಿಗಳ ಕಟ್ಟಡಗಳನ್ನು ಕಟ್ಟಲು ಸಾಧ್ಯವಾಗುತ್ತದೆ ಹೊಸ ಬಸ್ ನಿಲ್ದಾಣ, ಹೊಸ ಕಛೇರಿ ಕಟ್ಟಡ, ಮುನಿಸಿಪಲ್ ಮಾರುಕಟ್ಟೆ, ನಗರ ಅರಣ್ಯೀಕರಣ ಉದ್ಯಾನವನ, ಕೆರೆಗಳು, ಹೊಸ ರಂಗಮಂದಿರ, ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳನ್ನು ನಡೆಸಲು ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಿ ಅನುಮೋದನೆ ನೀಡಲಾಗಿದೆ ಇದನ್ನು ಜಾರಿ ಮಾಡಲು ಎಲ್ಲರೂ ಗಮನಿಸಿದರೆ ಅಭಿವೃದ್ಧಿ ಕೆಲಸಗಳನ್ನು ನಡೆಸಲು ಸಹಕಾರಿಯಾಗುತ್ತದೆ ಎಂದರು.

ಈಗಾಗಲೇ ಕೋಲಾರ ನಗರದ ಹೊರಗೆ ರಿಂಗ್ ರಸ್ತೆ ನಿರ್ಮಾಣಕ್ಕೆ ಡಿಪಿಆರ್ ನಿರ್ಮಾಣಕ್ಕೆ ಅನುಮೋದನೆ ಸಿಕ್ಕಿ ಅನುದಾನ ಬಿಡುಗಡೆಯಾಗಿದೆ, ಕೋಲಾರ– ದೇವನಹಳ್ಳಿ, ವೇಮಗಲ್–ಮಾಲೂರು ರಸ್ತೆ ಕಾಮಗಾರಿ ಆರು ತಿಂಗಳಲ್ಲಿ ಪ್ರಾರಂಭವಾಗುತ್ತದೆ ಇದಕ್ಕಾಗಿ 150 ಇಂಜಿನಿಯರ್‌ಗಳು ಸರ್ವೆ ಕಾರ್ಯದಲ್ಲಿ ತೊಡಗಿದ್ದಾರೆ ಎಂದ ಅವರು ವೇಮಗಲ್ ಭಾಗದಲ್ಲಿ ಕೈಗಾರಿಕೆಗಳು ಹೆಚ್ಚಾಗಿರುವ ಕಾರಣ ಜನಸಂಖ್ಯೆಯು ಹೆಚ್ಚಳವಾಗುತ್ತಿದೆ ಇದಕ್ಕೆ ತಕ್ಕಂತೆ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು ಕೈಗಾರಿಕೆಗಳಿಂದ ಕಡ್ಡಾಯವಾಗಿ ತೆರಿಗೆ ಪಾವತಿಸಿಕೊಳ್ಳಲು ಕ್ರಮ ವಹಿಸಬೇಕು ಎಂದರು.

ವೇಮಗಲ್ ಪಟ್ಟಣದಲ್ಲಿ ಬ್ಯಾನರ್ ಅಳವಡಿಸಲು ಕಡ್ಡಾಯವಾಗಿ ಅನುಮತಿ ಪಡೆಯಬೇಕು ಇದರಿಂದಾಗಿ ಆದಾಯವು ಸಿಗುತ್ತದೆ ಪಟ್ಟಣ ಪಂಚಾಯತಿಗೆ ವಿಶೇಷ ಅನುದಾನ ಪಡೆಯಲು ಪಕ್ಷಾತೀತವಾಗಿ ಉಸ್ತುವಾರಿ ಸಚಿವ ಬೈರತಿ ಸುರೇಶ್ ಅವರನ್ನು ಕರೆಸಿ ಇಲ್ಲಿನ ವಾಸ್ತವಾಂಶವನ್ನು ಮನವರಿಕೆ ಮಾಡಿಕೊಡಲಾಗುವುದು ಕುರುಗಲ್ ಬಳಿ ಇರುವ 19 ನಿವೇಶನಗಳಲ್ಲಿ ಮಳಿಗೆಗಳನ್ನು ನಿರ್ಮಿಸಿ ಆದಾಯವನ್ನು ಹೆಚ್ಚಿಸಿಕೊಳ್ಳಬೇಕು ಈಗ ಬಂದಿರುವ 27 ಕೋಟಿ ಅನುದಾನವನ್ನು ಬಳಸಿಕೊಂಡು ಅಭಿವೃದ್ಧಿಗೆ ಒತ್ತು ನೀಡುವಂತೆ ಸದಸ್ಯರಿಗೆ ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ವೇಮಗಲ್–ಕುರುಗಲ್ ಪಟ್ಟಣ ಪಂಚಾಯತಿ ಅಧ್ಯಕ್ಷೆ ಡಿ.ಅನುಷ ಮಾತನಾಡಿ ಅಭಿವೃದ್ಧಿಗಾಗಿ 2026–27 ನೇ ಸಾಲಿನ ಆಯವ್ಯಯದಲ್ಲಿ ಆಧ್ಯತೆ ನೀಡಲಾಗಿದ್ದು ಸುಮಾರು 35.27.942 ಲಕ್ಷದ ಉಳಿತಾಯದ ಬಜೆಟ್ ಮಂಡಿಸಲಾಗಿದೆ ಎಂದು ಸಭೆ ಮಾಹಿತಿ ನೀಡಿ ಸರ್ವಾನುಮತದಿಂದ ಸದಸ್ಯರಿಂದ ಅನುಮೋದನೆ ಪಡೆಯಲಾಯಿತು.

ಸಭೆಯಲ್ಲಿ ಸದಸ್ಯರು ಬಜೆಟ್ ಸಂಬಂಧಿಸಿದಂತೆ ಸಲಹೆ ಸೂಚನೆಗಳನ್ನು ನೀಡಿದರು. ಉಪಾಧ್ಯಕ್ಷ ಸಿ.ಎಸ್ ವೆಂಕಟೇಶ್, ಮುಖ್ಯಾಧಿಕಾರಿ ವೆಂಕಟೇಶ್ ಸೇರಿದಂತೆ ಸದಸ್ಯರು ಇದ್ದರು.

# ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ 'ಅರಿವು' ಆಸರೆ

ಕೋಲಾರ

"ಬಡ ಪ್ರತಿಭಾವಂತ ವಿದ್ಯಾರ್ಥಿಗಳು ಆರ್ಥಿಕ ಸಂಕಷ್ಟದಿಂದ ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವ ಉದ್ದೇಶದಿಂದ ಸರ್ಕಾರ ಜಾರಿಗೆ ತಂದಿರುವ 'ಅರಿವು' ಶೈಕ್ಷಣಿಕ ಸಾಲ ಯೋಜನೆಯನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು" ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಪ್ರವೀಣ್ ಪಿ. ಬಾಗೇವಾಡಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ಅಭಿವೃದ್ಧಿ ನಿಗಮಗಳ 'ಅರಿವು' ಯೋಜನೆಯಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಆಯ್ಕೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

**ವೃತ್ತಿಪರ ಕೋರ್ಸ್‌ಗಳಿಗೆ ಲಕ್ಷಾಂತರ ರೂ. ಸಾಲ:** ಸಿಇಟಿ ಅಥವಾ ಮೆರಿಟ್ ಆಧಾರದ ಮೇಲೆ ಎಂ.ಬಿ.ಬಿ.ಎಸ್, ಬಿ.ಇ, ಬಿ.ಡಿ.ಎಸ್, ಬಿ.ಎಸ್ಸಿ ನರ್ಸಿಂಗ್, ಎಂ.ಟೆಕ್, ಎಂ.ಡಿ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಈ ಯೋಜನೆಯಡಿ ವಾರ್ಷಿಕ ಗರಿಷ್ಠ 1 ಲಕ್ಷ ರೂ. ನಂತೆ ಕೋರ್ಸ್ ಅವಧಿಗೆ ಒಟ್ಟು 4 ರಿಂದ 5 ಲಕ್ಷ ರೂ. ಗಳವರೆಗೆ ಸಾಲ ನೀಡಲಾಗುತ್ತದೆ. ವಿಶೇಷವೆಂದರೆ,





ಈ ಸಾಲಕ್ಕೆ ಕೇವಲ ಶೇ. 2ರಷ್ಟು ಅತ್ಯಲ್ಪ ಬಡ್ಡಿ ದರ ವಿಧಿಸಲಾಗುತ್ತದೆ.

**ಸಾಲ ಮರುಪಾವತಿ ಶಿಸ್ತು ಮುಖ್ಯ:** ಆಯ್ಕೆಯಾದ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ ಸಿಇಓ ಅವರು, "ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಸಮಾಜಕ್ಕೆ ಮಾದರಿ ವ್ಯಕ್ತಿಗಳಾಗಬೇಕು. ನಿಗಮದಿಂದ ಪಡೆದ ಸಾಲವನ್ನು ನಿಗದಿತ ಸಮಯಕ್ಕೆ ಮರುಪಾವತಿಸಿದರೆ, ಆ ಹಣವು ಮುಂದಿನ ದಿನಗಳಲ್ಲಿ ಇತರ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗುತ್ತದೆ" ಎಂದರು.

**ಹೆಚ್ಚಿನ ಅರ್ಜಿ ಸಲ್ಲಿಕೆಗೆ ಅವಕಾಶ:** ಕೆಲವು ನಿಗಮಗಳಲ್ಲಿ ನಿಗದಿತ ಗುರಿಗಿಂತ ಕಡಿಮೆ ಅರ್ಜಿಗಳು ಸಲ್ಲಿಕೆಯಾಗಿವೆ. ಅರ್ಜಿ ಸಲ್ಲಿಸಲು ಇನ್ನೂ ಕಾಲಾವಕಾಶವಿರುವುದರಿಂದ ಅರ್ಹ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಈ ಬಗ್ಗೆ ವ್ಯಾಪಕ ಪ್ರಚಾರ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಆಯ್ಕೆ ಸಮಿತಿ ಸದಸ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ವ್ಯವಸ್ಥಾಪಕಿ ಸುಜಾತ ಚಾಂದ ಕವಟೆ, ಲೀಡ್ ಬ್ಯಾಂಕ್ ವ್ಯವಸ್ಥಾಪಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ನಾರಾಯಣಸ್ವಾಮಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಗೀತಾ, ಬೆಸ್ಕಾಂ ಜಿ.ಎಂ ದೇವಿರೆಡ್ಡಿ, ನಿಗಮದ ಅಭಿವೃದ್ಧಿ ಅಧಿಕಾರಿ ಲಕ್ಷ್ಮಯ್ಯ ವಿ. ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ಲಿಂಗ ಸಾಮರಸ್ಯದಿಂದ ಮಾತ್ರ ಪ್ರಗತಿಶೀಲ ಸಮಾಜ ನಿರ್ಮಾಣ ಸಾಧ್ಯ: ಸಿಇಓ

ಕೋಲಾರ



ಮಹಿಳೆಯರಿಗೆ ಸರ್ಕಾರ ವಿವಿಧ ಯೋಜನೆಗಳಡಿ ಪ್ರೋತ್ಸಾಹ ನೀಡಿ ಆರ್ಥಿಕವಾಗಿ ಸಬಲರನ್ನಾಗಿ ಮಾಡಲಾಗುತ್ತಿದೆ. ಸಮಾಜದಲ್ಲಿ ಲಿಂಗ ಸಾಮರಸ್ಯ ಬಹುಮುಖ್ಯ ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಪ್ರವೀಣ್ ಪಿ. ಬಾಗೇವಾಡಿ ತಿಳಿಸಿದರು.

ಮಂಗಳವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಮಕ್ಕಳ ಘಟಕ, ಕೋಲಾರ ಹಾಗೂ ಅಮ್ರಿತ ವಿಶ್ವ ವಿದ್ಯಾಪೀಠಂ, ಕೇರಳ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ "ಲಿಂಗ ಸಾಮರಸ್ಯ (ಲಿಂಗಾಧಾರಿತ ದೌರ್ಜನ್ಯ ತಡೆಗಟ್ಟುವ)" ಯೋಜನೆಯ ಅನುಷ್ಠಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದಲ್ಲಿ ಈ ಹಿಂದೆ ಪುರುಷ ಪ್ರಧಾನ ಸಮಾಜ ಆಗಿತ್ತು. ಆದರೆ ಇಂದಿನ ದಿನಗಳಲ್ಲಿ ಆ ರೀತಿ ಕಂಡು ಬರುವುದಿಲ್ಲ. ಸ್ವಾತಂತ್ರ್ಯ ಬಂದು 70 ವರ್ಷಗಳ ನಂತರ ಮಹಿಳೆಯರು ವಿದ್ಯಾವಂತರಾಗಿ ವಿವಿಧ ಇಲಾಖೆಗಳಲ್ಲಿ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಯೋಚಿಸುವುದಾದರೆ ಲಿಂಗ ಸಾಮರಸ್ಯ ಸಮಾಜದಲ್ಲಿ ಕಂಡು ಬರುತ್ತಿದೆ ಎಂದರು.

ಲಿಂಗ ಸಾಮರಸ್ಯ ಸಮಾಜವನ್ನು ನಿರ್ಮಿಸಲು ಕೇರಳದ ಅಮ್ರಿತ ವಿಶ್ವವಿದ್ಯಾ ಪೀಠಂ ಹಾಗೂ ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ ಲಿಂಗಾಧಾರಿತ ದೌರ್ಜನ್ಯ ತಡೆಗಟ್ಟುವ ಕಾರ್ಯಕ್ರಮವನ್ನು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ 10 ಗ್ರಾಮಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಹಳ್ಳಿಗಳಲ್ಲಿನ ಕುಟುಂಬಗಳ ಪರಿವರ್ತನೆಯಾದರೆ ಶಾಂತಿ, ಸಮತೋಲನ, ಪ್ರಗತಿಶೀಲ ಹಾಗೂ ಲಿಂಗ ಸಾಮರಸ್ಯ ಸಮಾಜ ನಿರ್ಮಾಣವಾಗುವುದು ಎಂದು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ನಟೇಶ್.ಆರ್ ಅವರು ಮಾತನಾಡಿ ನಮ್ಮ ದೇಶದ ಸಂವಿಧಾನವು ಆರ್ಟಿಕಲ್ 14 ರಂತೆ ಸಮಾನತೆ ಮತ್ತು 21ರಂತೆ ಜೀವಿಸುವ ಹಕ್ಕನ್ನು ನೀಡಿರುತ್ತದೆ. 2004 ಡಿಸೆಂಬರ್ 20 ರ ಮುಂಚೆ ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಗಳಲ್ಲಿ ಸಮಾನ ಹಕ್ಕು ಇರಲಿಲ್ಲ. ಮಾನ್ಯ ಸರ್ವೋಚ್ಚ ನ್ಯಾಯಾಲಯವು 2005 ರಲ್ಲಿ ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಗಳಲ್ಲಿ ಗಂಡು ಮಕ್ಕಳಂತೆ ಸಮಾನ ಪಾಲು ಪಡೆಯುವುದು ಎಂದು ತೀರ್ಪು ನೀಡಿದೆ ಎಂದರು.

ಸಮಾಜದಲ್ಲಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಹೆಣ್ಣುಮಕ್ಕಳನ್ನು ನೋಡುವ ದೃಷ್ಟಿಕೋನ ಬದಲಾಗಿದೆ. ಮಹಿಳೆಯರು ವಿದ್ಯಾಭ್ಯಾಸ ಮಾಡಿ ಆರ್ಥಿಕವಾಗಿ ಸಬಲರಾಗಿ ಸಮಾಜದಲ್ಲಿ ಮುಖ್ಯವಾಹಿನಿಗೆ ಬರಲು ಪ್ರಯತ್ನಿಸುತ್ತಿರುವುದು ಆಶಾದಾಯಕ ಬೆಳವಣಿಗೆ. ಈ ಬೆಳವಣಿಗೆ ಲಿಂಗ ಸಾಮರಸ್ಯ ಸಮಾಜ ನಿರ್ಮಾಣಗೊಳ್ಳಲು ಸಹಕಾರಿಯಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ನಾರಾಯಣಸ್ವಾಮಿ. ಎನ್, ಜಿಲ್ಲಾ ನಿರೂಪಣಾಧಿಕಾರಿ ನಾಗರತ್ನ.ವಿ, ಸಿಡಿಪಿಓ ಮುನಿರಾಜಪ್ಪ ಬಿ.ಎಂ, ಬೆಂಗಳೂರಿನ ಅಮ್ರಿತಾ ಚಾರಿಟಬಲ್ ಆಸ್ಪತ್ರೆಯ ನಿರ್ದೇಶಕ ಬ್ರಹ್ಮಚರ್ಯ ನಿಷ್ಕಮಾಮ್ರಿತಾ ಚೈತನ್ಯ, ಕೇರಳದ ಅಮ್ರಿತ ವಿಶ್ವ ವಿದ್ಯಾಪೀಠಂನ ಯೋಜನಾ ವ್ಯವಸ್ಥಾಪಕಿ ಡಾ. ದ್ರಿಷ್ಠಿ ಮಾರವಹ, ಮಾಸ್ಟರ್ ಟ್ರೇನರ್ ಸತೀಶ್ ಮೇತ್ರಿ, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# 'ರೈತರ ಹಿತರಕ್ಷಣೆಗೆ ಸಂಕಲ್ಪ'

ಕೋಲಾರ

ಇಲ್ಲಿನ ಕುರುಗಲ್ ಗ್ರಾಮದಲ್ಲಿ ವೇಮಗಲ್ ಕೈಗಾರಿಕಾ ಪ್ರದೇಶದ ಭೂ ನಿರಾಶಿತ ರೈತರ ಕ್ಷೇಮಾಭಿವೃದ್ಧಿ ಸಂಘದ ಕಚೇರಿಯ ಉದ್ಘಾಟನೆಯನ್ನು ಸಂಘದ ಅಧ್ಯಕ್ಷ ಕುರಗಲ್ ಕೆ.ಎನ್. ಮಂಜುನಾಥ್ ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು.

ವೇಮಗಲ್ ಕೈಗಾರಿಕಾ ಪ್ರದೇಶದ 1ನೇ ಹಂತದಲ್ಲಿ ಸುಮಾರು 666 ಎಕರೆ ಹಾಗೂ 2ನೇ ಹಂತದಲ್ಲಿ ಸುಮಾರು 457 ಎಕರೆ ಭೂಸ್ವಾಧೀನವಾಗಿ ಹಲವಾರು ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. ಕಾರ್ಖಾನೆಗಳು ಮತ್ತು ಸಂಬಂಧಪಟ್ಟ ಇಲಖೆಗಳಿಂದ ಭೂಮಿ ನೀಡಿರುವ ರೈತರಿಗೆ ಯಾರಿಂದಾಲಾದರೂ ಯಾವ ರೀತಿಯ ತೊಂದರೆ, ಕಿರುಕುಳ, ಅನ್ಯಾಯಗಳಾದಲ್ಲಿ ಪರಸ್ಪರ ಚರ್ಚಿಸಿ ಸೂಕ್ತ ಪರಿಹಾರ ಕೊಡಿಸುವುದು, ಭೂ ನಿರಾಶ್ರಿತರ ರೈತರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವುದು ಸಂಘದ ಮುಖ್ಯ ಉದ್ದೇಶವಾಗಿರುತ್ತದೆ ಸಂಘದ ಅಧ್ಯಕ್ಷ ಕುರಗಲ್ ಕೆ.ಎನ್.ಮಂಜುನಾಥ್ ಹೇಳಿದರು. ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಮಲಿಯಪನಹಳ್ಳಿ ಸಿ.ನಾರಾಯಣಸ್ವಾಮಿ, ನಿರ್ದೇಶಕರುಗಳಾದ ಶೀಗೇಹಳ್ಳಿ ಎಸ್.ಎನ್. ನಟರಾಜ್, ವೇಮಗಲ್ ವಿ.ಎಂ.ಕೃಷ್ಣ, ಕುರುಗಲ್ ಗ್ರಾಮದ ವಿ.ಎಂ. ಮುನಿರಾಜ, ಗಣೇಶ, ಮಲಿಯಪನಹಳ್ಳಿ ಗ್ರಾಮದ ಹನುಮಂತಪ್ಪ, ಜಿ.ಮುನಿರಾಜಪ್ಪ, ಮುನಿರಾಜ ಡಿ, ಇದ್ದರು.

# ಕುಡಿಯುವ ನೀರು ಮತ್ತು ಜಲಜೀವನ್ ಮಿಷನ್ ಕಾಮಗಾರಿಗಳ ಪ್ರಗತಿ ಪರಿಶೀಲನೆ

ಕೋಲಾರ

ಬೇಸಿಗೆಯ ಹಿನ್ನೆಲೆಯಲ್ಲಿ ಜಿಲ್ಲೆಯ ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುಂಜಾಗ್ರತೆ ವಹಿಸಬೇಕು ಮತ್ತು ಜಲಜೀವನ್ ಮಿಷನ್ (ಎಎಒ) ಕಾಮಗಾರಿಗಳನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಪ್ರವೀಣ್ ಪಿ. ಬಾಗೇವಾಡಿ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮಂಗಳವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಪಿಡಿಒಗಳು ಹಾಗೂ ಆಡಳಿತಾಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಭೆಯಲ್ಲಿ ಕೋಲಾರ ತಾಲೂಕಿನ ವಿವಿಧ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ನೀರಿನ ಲಭ್ಯತೆಯ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು.

ಅಮ್ಮನಲ್ಲೂರು ಮತ್ತು ರಾಮಪುರ ಗ್ರಾಮಗಳಲ್ಲಿ ಅಂತರ್ಜಲ ಮಟ್ಟ ಕುಸಿದಿರುವ ಹಿನ್ನೆಲೆಯಲ್ಲಿ, ನೀರಿನ ಸಮಸ್ಯೆ ಎದುರಾಗದಂತೆ ಖಾಸಗಿ ಬೋರ್‌ವೆಲ್‌ಗಳನ್ನು ಗುರುತಿಸಿ ಬಾಡಿಗೆಗೆ ಪಡೆಯಲು ಸೂಚಿಸಲಾಯಿತು.

ವಡಗೇರಿ ಮತ್ತು ಚೌಡದೇನಹಳ್ಳಿ ಇಲ್ಲಿನ ಹಳೆಯ ಬೋರ್‌ವೆಲ್‌ಗಳಲ್ಲಿ ಇಳುವರಿ ಕಡಿಮೆಯಾಗಿದ್ದು, ಹೊಸ ಬೋರ್‌ವೆಲ್ ಕೊರೆಯುವ ಪ್ರಸ್ತಾವನೆ ಹಾಗೂ ರೈತರ ಬೋರ್‌ವೆಲ್‌ಗಳನ್ನು ಬಳಸಿಕೊಳ್ಳುವ ಬಗ್ಗೆ ಪಿಡಿಒಗಳು



ಮಾಹಿತಿ ನೀಡಿದರು.

ವಿಫಲವಾದ ಬೋರ್‌ವೆಲ್‌ಗಳ ಬದಲಿಗೆ ತಕ್ಷಣವೇ ಹೊಸ ಪಾಯಿಂಟ್ ಗುರುತಿಸಿ ನೀರಿನ ವ್ಯವಸ್ಥೆ ಮಾಡಲು ಸಿಇಒ ಸೂಚಿಸಿದರು.

ಜೆಜೆಎಂ ಕಾಮಗಾರಿಗಳ ಅನುಷ್ಠಾನದಲ್ಲಿ ವಿಳಂಬ ಮಾಡುತ್ತಿರುವ ಇಂಜಿನಿಯರ್‌ಗಳು ಮತ್ತು ಗುತ್ತಿಗೆದಾರರ ವಿರುದ್ಧ ಸಿಇಒ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಅನೇಕ ಗ್ರಾಮಗಳಲ್ಲಿ ಕಾಮಗಾರಿ ಪೂರ್ಣಗೊಂಡಿದ್ದರೂ ಟಿಸಿ ಇಲ್ಲದ ಕಾರಣ ನೀರು ಸರಬರಾಜು ಸ್ಥಗಿತಗೊಂಡಿದೆ. ಈ ಬಗ್ಗೆ ಬೆಸ್ಕಾಂ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಮುಂದಿನ ಒಂದು ವಾರದೊಳಗೆ ಸಮಸ್ಯೆ ಬಗೆಹರಿಸಬೇಕು ಎಂದು ತಾಕೀತು ಮಾಡಿದರು.

ಜೆಜೆಎಂ ಕಾಮಗಾರಿಗಳು ಕೇವಲ ಅಂಕಿ–ಅಂಶಗಳಿಗೆ ಸೀಮಿತವಾಗದೆ, ಪ್ರತಿಯೊಂದು ಮನೆಗೂ ನಳದ ಮೂಲಕ ನೀರು ತಲುಪಬೇಕು. ಕಾಮಗಾರಿಯ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು ಎಂದು ಸೂಚಿಸಿದರು.

ಜಿಲ್ಲೆಯ ಕೆರೆಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ಲೋಕಾಯುಕ್ತರ ನಿರ್ದೇಶನಗಳನ್ನು ಪಾಲಿಸುವಂತೆ ತಿಳಿಸಲಾಯಿತು.

ಜಿಲ್ಲೆಯ ಒಟ್ಟು ಕೆರೆಗಳ ಪೈಕಿ 173 ಕೆರೆಗಳ ಒತ್ತುವರಿ ತೆರವು ಬಾಕಿ ಇದ್ದು, ರಾಜಸ್ವ ಇಲಾಖೆ ಮತ್ತು ಡಿಡಿಎಲ್‌ಆರ್ ಸಹಯೋಗದೊಂದಿಗೆ ಕೂಡಲೇ ತೆರವು ಕಾರ್ಯಾಚರಣೆ ನಡೆಸಲು ಆದೇಶಿಸಲಾಯಿತು.

ಕೆರೆಗಳ ಸ್ವರೂಪ ಹಾಳಾಗದಂತೆ ಸುತ್ತಲೂ ಟ್ರೆಂಚ್ ಹೊಡೆಯಲು ಹಾಗೂ ಒತ್ತುವರಿ ಜಾಗದಲ್ಲಿನ ಬೆಳೆಗಳನ್ನು ತೆರವುಗೊಳಿಸಲು ಸೂಚನೆ ನೀಡಲಾಯಿತು.

ಪಶುಪಾಲನಾ ಇಲಾಖೆಯ ವತಿಯಿಂದ ನಡೆಯುತ್ತಿರುವ ಬೀದಿ ನಾಯಿಗಳ ಸಂತಾನಹರಣ ಚಿಕಿತ್ಸೆ ಕಾರ್ಯಕ್ರಮದ ಬಗ್ಗೆ ಚರ್ಚಿಸಲಾಯಿತು. ಬಿಬಿಎಂಪಿ ಮಾದರಿಯಲ್ಲಿ ಜಿಲ್ಲೆಯಲ್ಲೂ ಪರಿಣಾಮಕಾರಿಯಾಗಿ ಈ ಯೋಜನೆ ಜಾರಿಗೆ ತರಲು ಮತ್ತು ಎನ್‌ಜಿಒಗಳ ಸಹಕಾರ ಪಡೆಯಲು ನಿರ್ಧರಿಸಲಾಯಿತು.

ಗ್ರಾಮ ಪಂಚಾಯತ್‌ವಾರು ಕಂದಾಯ ವಸೂಲಾತಿ ಪ್ರಗತಿಯನ್ನು ಪರಿಶೀಲಿಸಲಾಯಿತು. ಜಿಲ್ಲೆಯ ಸರಾಸರಿ ವಸೂಲಾತಿ ಪ್ರಮಾಣ ಶೇ. 85 ರಷ್ಟಿದ್ದರೂ, ಕೆಲವು ಪಂಚಾಯತ್‌ಗಳಲ್ಲಿ ಅತ್ಯಂತ ಕಡಿಮೆ ಪ್ರಗತಿ ಕಂಡುಬಂದಿದೆ.

**ಹೊನ್ನೇನಹಳ್ಳಿ ಗ್ರಾಮ ಪಂಚಾಯತ್:** ಕೇವಲ ಶೇ. 67 ರಷ್ಟು ಪ್ರಗತಿ ಸಾಧಿಸಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟವರಿಗೆ 1 to 4 ಚಾರ್ಜ್ ಶೀಟ್ ಸಲ್ಲಿಸಲು ಸೂಚಿಸಲಾಯಿತು. ಶೆಟ್ಟಿಹಳ್ಳಿ, ಕ್ಯಾಪುರ ಹಾಗೂ ನರಸಾಪುರ: ಈ ಪಂಚಾಯತ್‌ಗಳ ಒಟ್ಟು ಬೇಡಿಕೆಯ ವಸೂಲಾತಿ ಪ್ರಮಾಣ ಶೇ. 15 ರಿಂದ 27 ರಷ್ಟಿರುವುದು ಸಿಇಓ ಅವರ ಅಸಮಾಧಾನಕ್ಕೆ ಕಾರಣವಾಯಿತು. ಈ ವ್ಯಾಪ್ತಿಯ ಕಾರ್ಯನಿರ್ವಾಹಕ ಅಧಿಕಾರಿಗಳು (EO) ಹಾಗೂ ಪಿಡಿಒಗಳಿಗೆ ತಕ್ಷಣವೇ ಶೋಕಾಸ್ ನೋಟಿಸ್ ನೀಡಲು ಹಾಗೂ ಕಠಿಣ ಕ್ರಮ ಕೈಗೊಳ್ಳಲು ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳಿಗೆ ಸೂಚಿಸಿದರು. ಈ ಸಭೆಯಲ್ಲಿ ಉಪವಿಭಾಗಾಧಿಕಾರಿ ಜಂಬಗಿ ರೇಣುಕಾಪ್ರಸಾದ್ ದಿಲೀಪ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಟಿ. ಕೆ. ರಮೇಶ್, ಡಿಡಿಎಲ್‌ಆರ್ ಸಂಜಯ್, ಪಶುಪಾಲನಾ ಇಲಾಖೆಯ ಉಪನಿರ್ದೇಶಕ ಡಾ. ರಮೇಶ್, ಎಲ್ಲಾ ತಾಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಪಿಡಿಓಗಳು ಉಪಸ್ಥಿತರಿದ್ದರು.

26/03/2026
ಭಾರತ ಸಾರಥಿ
BHARATHA SARATHI KANNADA DAILY NEWS PAPER
ಬೆಂಗಳೂರು । ಬೆಂ.ಗ್ರಾಮಾಂತರ । ತುಮಕೂರು । ಮೈಸೂರು । ಮಂಡ್ಯ । ರಾಮನಗರ । ಕೋಲಾರ । ಚಿಕ್ಕಬಳ್ಳಾಪುರ । ಚಿತ್ರದುರ್ಗ । ದಾವಣಗೆರೆ । ಶಿವಮೊಗ್ಗ । ಮಂಗಳೂರು । ಉಡುಪಿ । ಹುಬ್ಬಳ್ಳಿ । ಮಡಿಕೇರಿ । ಚಿಕ್ಕಮಗಳೂರು । ಹಾಸನ । ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಶ್ರೀವಿಜೇಂದ್ರ ಸ್ವಾಮಿ ಬ್ರಹ್ಮರಥೋತ್ಸವ ಸಂಭ್ರಮ



ಬೇತಮಂಗಲ

ಪಾಲಾರ್ ನದಿ ತೀರದ ಪುರಾಣ ಪ್ರಸಿದ್ಧ ಶ್ರೀ ವಿಜೇಂದ್ರ ಸ್ವಾಮಿ ದೇವಾಲಯದಲ್ಲಿ 58ನೇ ವರ್ಷದ ಬ್ರಹ್ಮರಥೋತ್ಸವವು ಭಾನುವಾರ ಅತ್ಯಂತ ಸಡಗರ ಮತ್ತು ವೈಭವದಿಂದ ನೆರವೇರಿತು. ಸಾವಿರಾರು ಭಕ್ತರ 'ಗೋವಿಂದಾ.. ಗೋವಿಂದಾ..' ಎಂಬ ನಾಮಸ್ಮರಣೆಯ ನಡುವೆ ರಥವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿತು.

ಜಾತ್ರೆಯ ಅಂಗವಾಗಿ ವಿಜೇಂದ್ರ ಸ್ವಾಮಿಗೆ ವಿಶೇಷ ಪೂಜೆ ಹಾಗೂ ಅಲಂಕಾರಗಳನ್ನು ಮಾಡಲಾಗಿತ್ತು. ಹೂವು ಮತ್ತು ತಳಿರು ತೋರಣಗಳಿಂದ ಮಧುವಣಗಿತ್ತಿಯಂತೆ ಶೃಂಗರಿಸಲ್ಪಟ್ಟಿದ್ದ ರಥವನ್ನು ಭಕ್ತರು ಭಕ್ತಿಯಿಂದ ಎಳೆದು ಪುನೀತರಾದರು.

ರಥೋತ್ಸವದ ಹಾದಿಯುದ್ದಕ್ಕೂ ಭಕ್ತರಿಗೆ ಪಾನಕ, ಮಜ್ಜಿಗೆ ಹಾಗೂ ಪ್ರಸಾದವನ್ನು ವಿತರಿಸಲಾಯಿತು. ಸಾಂಪ್ರದಾಯಿಕ ತಮಟೆ ವಾದನ, ಕೀಲು ಕುದುರೆ, ಉದ್ದ ಬೊಂಬೆಗಳ ಪ್ರದರ್ಶನ ಹಾಗೂ ವಿವಿಧ ಕಲಾತಂಡಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಜಾತ್ರೆಗೆ ವಿಶೇಷ ಮೆರುಗು ನೀಡಿದವು. ಮಧ್ಯಾಹ್ನ 1 ಗಂಟೆಯ ಸುಮಾರಿಗೆ ರಥವು ಬಸ್ ನಿಲ್ದಾಣದ ಬಳಿ ತಲುಪಿದಾಗ, ಶ್ರೀ ನೇತಾಜಿ ಯುವಕರ ಸಂಘದ ವತಿಯಿಂದ ಭಕ್ತಾದಿಗಳಿಗೆ ಬೃಹತ್ ಅನ್ನದಾನ ಸೇವೆ ಹಮ್ಮಿಕೊಳ್ಳಲಾಗಿತ್ತು.

ಕೆಜಿಎಫ್ ಕ್ಷೇತ್ರದ ಶಾಸಕಿ ರೂಪಕಲಾ ಶಶಿಧರ್ ಅವರು ರಥೋತ್ಸವದಲ್ಲಿ ಪಾಲ್ಗೊಂಡು ದೇವರ ದರ್ಶನ ಪಡೆದರು. ಈ ವೇಳೆ ಮಾತನಾಡಿದ ಅವರು, ಇಂತಹ ಧಾರ್ಮಿಕ ಕಾರ್ಯಕ್ರಮಗಳು ಸಮಾಜದಲ್ಲಿ ಶಾಂತಿ ಮತ್ತು ಸಾಮರಸ್ಯವನ್ನು ಮೂಡಿಸುತ್ತವೆ ಎಂದರು.

ಕಾರ್ಯಕ್ರಮದಲ್ಲಿ ದೇಗುಲದ ಕನ್ವಿನರ್ ಎ.ಮು. ಲಕ್ಷ್ಮೀನಾರಾಯಣ, ಮಾಜಿ ಗ್ರಾ.ಪಂ. ಅಧ್ಯಕ್ಷ ವಿನೂ ಕಾರ್ತಿಕ್, ಮುಖಂಡರಾದ ಏರ್ಟೆಲ್ ಸುರೇಶ್, ಅಪ್ಪಿ, ಮಮತಾ ಗಣೇಶ್, ವಾಸವಿ ಟೆಕ್ಸ್ ಟೈಲ್ಸ್ ಮೂರ್ತಿ ಸೇರಿದಂತೆ ಗ್ರಾಮದ ಹಿರಿಯರು ಹಾಗೂ ಸಾವಿರಾರು ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು.

# ಐಪಿಎಲ್ ಮಾದರಿಯ 'ಬ್ಯಾಡ್ಮಿಂಟನ್ ಲೀಗ್–2026'ಕ್ಕೆ ಚಾಲನೆ



ತುಮಕೂರು

"ಕ್ರಿಕೆಟ್‌ನ ಐಪಿಎಲ್ ಮಾದರಿಯಲ್ಲಿ ಬ್ಯಾಡ್ಮಿಂಟನ್ ಕ್ರೀಡೆಯನ್ನು ಉತ್ತುಂಗಕ್ಕೆ ಕೊಂಡೊಯ್ಯಲು ಇಂತಹ ಲೀಗ್‌ಗಳು ಪೂರಕವಾಗಿವೆ. ಯುವ ಕ್ರೀಡಾಪಟುಗಳು ಈ ವೇದಿಕೆಯನ್ನು ಬಳಸಿಕೊಂಡು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಿಂಚಬೇಕು" ಎಂದು ತುಮಕೂರು ನಗರ ಶಾಸಕ ಜಿ.ಬಿ. ಜ್ಯೋತಿಗಣೇಶ್ ಕರೆ ನೀಡಿದರು.

ಟೀಮ್ ಸ್ಮ್ಯಾಶರ್ಸ್ ಮತ್ತು ವಿನ್ನೇಜ್ ಇವೆಂಟ್ಸ್ ಆಯೋಜಿಸಿರುವ 'ತುಮಕೂರು ಬ್ಯಾಡ್ಮಿಂಟನ್ ಲೀಗ್–2026' ಕ್ರೀಡಾಕೂಟಕ್ಕೆ ದೀಪ ಬೆಳಗಿಸುವ ಮೂಲಕ ವಿದ್ಯುಕ್ತವಾಗಿ ಚಾಲನೆ ನೀಡಿ ಅವರು ಮಾತನಾಡಿದರು.

ಹಿರಿಯ ಕ್ರೀಡಾಪಟುಗಳಾದ ಸೋಮೇಶ್, ಸ್ವಾಮಿ, ಲಿಖಿತ, ರೆಡ್ಡಿ ಹಾಗೂ ಜ್ಯೋತಿ ಪ್ರಕಾಶ್ ಅವರ ಪರಿಶ್ರಮದಿಂದ ಈ ಲೀಗ್ ರೂಪುಗೊಂಡಿದೆ. "ಹಿಂದೆ ಬ್ಯಾಡ್ಮಿಂಟನ್ ಆಡಲು ಕೇವಲ ಬೆರಳೆಣಿಕೆಯ ಕ್ಲಬ್‌ಗಳಿದ್ದವು. ಆದರೆ ಈಗ ಪ್ರವೀಣ್ ಅವರು ನಿರ್ಮಿಸಿರುವ ಸುಸಜ್ಜಿತ ಅಂಕಣವು ಕ್ರೀಡಾಪಟುಗಳಿಗೆ ವರದಾನವಾಗಿದೆ. ಇಲ್ಲಿ ಮುಂದಿನ ದಿನಗಳಲ್ಲಿ ರಾಜ್ಯ ಮಟ್ಟದ ಲೀಗ್ ಪಂದ್ಯಗಳು ನಡೆಯುವಂತಾಗಲಿ" ಎಂದು ಶಾಸಕರು ಆಶಿಸಿದರು.

ಕ್ರೀಡೆಯನ್ನು ಕೇವಲ ದೈಹಿಕ ಸಾಮರ್ಥ್ಯಕ್ಕಾಗಿ ಅಲ್ಲದೆ, ವೃತ್ತಿ) ಆಗಿ ಸ್ವೀಕರಿಸುತ್ತಿರುವ ಯುವಕರ ಸಂಖ್ಯೆ ಹೆಚ್ಚುತ್ತಿದೆ. ಆಟಗಾರರು ಕ್ರೀಡಾಸ್ಫೂರ್ತಿಯಿಂದ ಆಟವಾಡಿ ಜಿಲ್ಲೆಗೆ ಕೀರ್ತಿ ತರಬೇಕು ಎಂದು ಆದಿತ್ಯ ಆಸ್ಪತ್ರೆಯ ಡಾ. ತ್ಯಾಗರಾಜು ಮತ್ತು ಡಿವೈಎಸ್ಪಿ ಪರಮೇಶರಯ್ಯ ಅವರು ಶುಭ ಹಾರೈಸಿದರು. ವೀರಶೈವ ಬ್ಯಾಂಕ್ ಅಧ್ಯಕ್ಷ ಗೋವಿಂದರಾಜು ಮಾತನಾಡಿ, ರಾಜ್ಯಮಟ್ಟದ ಟೂರ್ನಮೆಂಟ್ ಆಯೋಜನೆಗೆ ಶಾಸಕರ ಸಹಕಾರ ಕೋರಿದರು.

<u>ಕಣದಲ್ಲಿರುವ ಪ್ರಮುಖ ತಂಡಗಳು</u>

ಈ ಬಾರಿಯ ಲೀಗ್‌ನಲ್ಲಿ ಒಟ್ಟು 8 ತಂಡಗಳು ಕಣಕ್ಕಿಳಿದಿದ್ದು, 72 ಆಟಗಾರರು ತಮ್ಮ ಕೌಶಲ್ಯ ಪ್ರದರ್ಶಿಸಲಿದ್ದಾರೆ.

ತುಮಕೂರು ಸ್ಕ್ವಯರ್ಸ್, ಜಿ.ಆರ್. ಚಾಲೆಂಜರ್ಸ್, ಥಂಡರ್ಸ್ ಸ್ಮ್ಯಾಶರ್ಸ್.

ಗುಬ್ಬಿ ವಾರಿಯರ್ಸ್, ವುಲ್ಫ್ ಪ್ಯಾಕ್ಸ್, ಷಟಲ್ ಸ್ಟ್ರೈಕರ್ಸ್.

ಕುಣಿಗಲ್ ಫ್ಯಾಂಗ್ಸ್ ಹಾಗೂ ತುಮಕೂರು ಪವರ್ ಸ್ಮ್ಯಾಶರ್ಸ್.

ಕೆನರಾ ಬ್ಯಾಂಕ್, ವಿಶ್ವಾಸ್ ಜ್ಯುವೆಲ್ಲರ್ಸ್, ವಿದ್ಯಾವಾಹಿನಿ ಸಂಸ್ಥೆ ಸೇರಿದಂತೆ ಹಲವು ಪ್ರತಿಷ್ಠಿತ ಸಂಸ್ಥೆಗಳು ಈ ಕ್ರೀಡಾಕೂಟಕ್ಕೆ ಪ್ರಾಯೋಜಕತ್ವ ನೀಡಿವೆ. ಕಾರ್ಯಕ್ರಮವನ್ನು ಡಾ. ಶ್ರೀನಿವಾಸ್ ಕುಜ ನಿರೂಪಿಸಿದರು.

# ನೀರಾನೆ ದಾಳಿಗೆ ಬಲಿಯಾದ ಪಶುವೈದ್ಯೆ ಸುಮೀಕ್ಷಾಗೆ ಶ್ರದ್ಧಾಂಜಲಿ



ತುಮಕೂರು

"ಶಿವಮೊಗ್ಗದ ತಾವರೆಕೊಪ್ಪದ ಲಯನ್ ಸಫಾರಿಯಲ್ಲಿ ನೀರಾನೆ ದಾಳಿಗೆ ತುತ್ತಾಗಿ ಯುವ ಪಶುವೈದ್ಯೆ ಡಾ. ಸುಮೀಕ್ಷಾ ರೆಡ್ಡಿ ಮೃತಪಟ್ಟಿರುವುದು ಇಡೀ ಪಶುವೈದ್ಯಕೀಯ ವೃತ್ತಿಕ್ಕೇ ಸಂದ ದೊಡ್ಡ ಆಘಾತ. ಸರ್ಕಾರ ಮತ್ತು ಅರಣ್ಯ ಇಲಾಖೆ ಇನ್ನಾದರೂ ಎಚ್ಚೆತ್ತು ವನ್ಯಜೀವಿಗಳ ಚಿಕಿತ್ಸೆಗೆ ನಿಯೋಜನೆಯಾಗುವ ವೈದ್ಯರ ರಕ್ಷಣೆಗೆ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು" ಎಂದು ಪಶುಪಾಲನಾ ಇಲಾಖೆಯ ಉಪನಿರ್ದೇಶಕ ಡಾ. ಎಚ್. ಎಂ. ಶಿವಪ್ರಸಾದ್ ಒತ್ತಾಯಿಸಿದರು.

ನಗರದ ಪಶುಪಾಲನೆ ಮತ್ತು ಪಶುವೈದ್ಯಕೀಯ ಇಲಾಖೆಯ ತರಬೇತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಡಾ. ಸುಮೀಕ್ಷಾ ರೆಡ್ಡಿ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸಭೆಯಲ್ಲಿ ಮಾತನಾಡಿದ ಗಣ್ಯರು ಈ ಘಟನೆಯ ಸುತ್ತಲಿರುವ ಹಲವು ಗೊಂದಲಗಳನ್ನು ಎತ್ತಿ ತೋರಿಸಿದರು.

<u>ನಿಯಮ ಉಲ್ಲಂಘನೆ:</u> ರಾತ್ರಿಯ ವೇಳೆ ವನ್ಯಜೀವಿಗಳಿಗೆ ಚಿಕಿತ್ಸೆ ನೀಡಲು ನಿಯಮದಲ್ಲಿ ಅವಕಾಶವಿಲ್ಲ. ಆದರೂ ತರಬೇತಿ ವೈದ್ಯೆಯನ್ನು ಕ್ರೂರ ಮೃಗದ ಚಿಕಿತ್ಸೆಗೆ ಕಳುಹಿಸಿದವರು ಯಾರು?

ಇಂತಹ ತುರ್ತು ಸಂದರ್ಭದಲ್ಲಿ ಹಿರಿಯ ಅಧಿಕಾರಿಗಳು ಮತ್ತು ನುರಿತ ವೈದ್ಯರ ಸಮ್ಮುಖದಲ್ಲಿ ಚಿಕಿತ್ಸೆ ನೀಡಬೇಕಿತ್ತು. ಈ ವೇಳೆ ಸುರಕ್ಷತಾ ಶಿಷ್ಟಾಚಾರಗಳನ್ನು ಗಾಳಿಗೆ ತೂರಲಾಗಿದೆಯೇ ಎಂಬ ಪ್ರಶ್ನೆ ಮೂಡಿದೆ.

<u>ಸಿಸಿಟಿವಿ ರಹಸ್ಯ:</u> ಘಟನೆಯ ಸತ್ಯಾಸತ್ಯತೆ ತಿಳಿಯಲು ಸಿಸಿಟಿವಿ ಫೂಟೇಜ್ ಲಭ್ಯವಿಲ್ಲ ಎಂಬ ವರದಿಗಳು ನ್ಯಾಯಯುತ ತನಿಖೆಯ ಬಗ್ಗೆ ಅನುಮಾನ ಮೂಡಿಸಿವೆ.

ಸಹಾಯಕ ನಿರ್ದೇಶಕ ಡಾ. ರುದ್ರಪ್ರಸಾದ್ ಮಾತನಾಡಿ, "ವನ್ಯಜೀವಿಗಳ ಸೇವೆಗೆ ಹೋಗಲು ವೈದ್ಯರು ಹಿಂದೇಟು ಹಾಕುವ ಕಾಲವಿದು. ಇಂತಹ ಸಂದರ್ಭದಲ್ಲಿ ಶ್ರೀಮಂತ ಕುಟುಂಬದ ಏಕೈಕ ಪುತ್ರಿಯಾದ ಸುಮೀಕ್ಷಾ ಅವರು ಉತ್ಸಾಹದಿಂದ ಈ ಕ್ಷೇತ್ರಕ್ಕೆ ಬಂದಿದ್ದರು. ಅವರ ರಕ್ಷಣೆಗೆ ಅರಣ್ಯ ಇಲಾಖೆ ಕ್ರಮ ವಹಿಸಬೇಕಿತ್ತು. ಎರಡು ವರ್ಷದ ಹಿಂದೆ ವಿನಯ್ ಎಂಬ ವೈದ್ಯರು ಆನೆ ದಾಳಿಗೆ ಸಿಲುಕಿದ್ದರು. ಸರ್ಕಾರದ ಈ ನಿರ್ಲಕ್ಷ್ಯಕ್ಕೆ ಇನ್ನೆಷ್ಟು ವೈದ್ಯರು ಬಲಿಯಾಗಬೇಕು?" ಎಂದು ಕಿಡಿಕಾರಿದರು.

<u>ಜಿಲ್ಲಾಧಿಕಾರಿಗಳಿಗೆ ಮನವಿ:</u> ಪಶುವೈದ್ಯರ ರಕ್ಷಣೆಗೆ ಒತ್ತಾಯಿಸಿ ರಾಜ್ಯದ ಎಲ್ಲಾ ಪಶುವೈದ್ಯರು ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. ಪಶುವೈದ್ಯೆ ಡಾ. ಜಯಂತಿ ಮಾತನಾಡಿ, ವೈದ್ಯರು ಪ್ರಾಣಿಗಳ ಚಿಕಿತ್ಸೆಯ ವೇಳೆ ಎಷ್ಟೇ ಅನುಭವವಿದ್ದರೂ ಅತೀವ ಎಚ್ಚರದಿಂದಿರಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಡಾ. ದಿವಾಕರ್, ಡಾ. ಮಂಜುನಾಥ್, ಡಾ. ಶ್ರೀನಿವಾಸ್ ಕುಜ ಸೇರಿದಂತೆ ಹಲವು ಪಶುವೈದ್ಯರು ಪಾಲ್ಗೊಂಡು ಮೃತರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

# ಪಂಚಾಯತಿ ಚುನಾವಣೆಗೆ ಸಿದ್ಧರಾಗಿ: ಸಂಪಂಗಿ



ಬೇತಮಂಗಲ

"ಬಿಜೆಪಿ ಪಕ್ಷವನ್ನು ತಳಮಟ್ಟದಿಂದ ಬಲಪಡಿಸುವ ಮೂಲಕ ಮುಂಬರುವ ಕಮಸಂದ್ರ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ 17 ಸದಸ್ಯರ ಪೈಕಿ ಕನಿಷ್ಠ 15 ಸ್ಥಾನಗಳಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಬೇಕು," ಎಂದು ಮಾಜಿ ಶಾಸಕ ವೈ. ಸಂಪಂಗಿ ಕಾರ್ಯಕರ್ತರಿಗೆ ಕರೆ ನೀಡಿದರು.

ಬೇತಮಂಗಲದ ತಮ್ಮ ತೋಟದ ಮನೆಯಲ್ಲಿ ಹಮ್ಮಿಕೊಂಡಿದ್ದ ಕಮಸಂದ್ರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರ ಪೂರ್ವಭಾವಿ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಗ್ರಾಮ ಪಂಚಾಯಿತಿಯಲ್ಲಿ ನಮ್ಮವರೇ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗಿದ್ದರೆ ಹಳ್ಳಿಗಳ ಅಭಿವೃದ್ಧಿ ಕೆಲಸಗಳು ಸುಲಭವಾಗಿ ನಡೆಯುತ್ತವೆ. ಈ ನಿಟ್ಟಿನಲ್ಲಿ ಕಮಸಂದ್ರ ಪಂಚಾಯಿತಿಯಿಂದ ಆರಂಭವಾಗಿರುವ ಈ ಸಂಘಟನಾ ಪರ್ವವು ಮುಂದಿನ ದಿನಗಳಲ್ಲಿ ತಾಲ್ಲೂಕಿನ ಪ್ರತಿ ಪಂಚಾಯಿತಿಗೂ ವಿಸ್ತರಣೆಯಾಗಲಿದೆ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವಿಗಾಗಿ ಪ್ರತಿಯೊಬ್ಬ ಕಾರ್ಯಕರ್ತರು ಪ್ರಾಮಾಣಿಕವಾಗಿ ಶ್ರಮಿಸಬೇಕು ಎಂದು ತಿಳಿಸಿದರು. "ನಾವು ಅಧಿಕಾರದಲ್ಲಿದ್ದಾಗ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳು ಹಾಗೂ ಬಡವರಿಗೆ ನೀಡಿದ ಸೌಲಭ್ಯಗಳ ಬಗ್ಗೆ ಇಂದಿಗೂ ಕ್ಷೇತ್ರದಲ್ಲಿ ಸಾರ್ವಜನಿಕರು ಚರ್ಚಿಸುತ್ತಿದ್ದಾರೆ. ಆದರೆ ಪ್ರಸ್ತುತ ಹೊಸ ಪಡಿತರ ಚೀಟಿ ಪಡೆಯಲು ಸಹ ಜನಸಾಮಾನ್ಯರಿಗೆ ಸಾಧ್ಯವಾಗುತ್ತಿಲ್ಲ," ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, "ಮುಂದಿನ ಚುನಾವಣೆಯಲ್ಲಿ ಕ್ಷೇತ್ರದ ಜನತೆ ನನ್ನನ್ನು ಶಾಸಕನಾಗಿ ವಿಧಾನಸೌಧಕ್ಕೆ ಕಳುಹಿಸಿಕೊಡಲಿದ್ದಾರೆ ಎಂಬ ಬಲವಾದ ವಿಶ್ವಾಸ ನನಗಿದೆ" ಎಂದರು. ಸಭೆಯಲ್ಲಿ ಕೆಜಿಎಫ್ ಎಪಿಎಂಸಿ ಅಧ್ಯಕ್ಷ ಎಸ್. ಪ್ರವೀಣ್ ಕುಮಾರ್, ಎಸ್ ಸಿ ಮೋರ್ಚಾ ಅಧ್ಯಕ್ಷ ಶ್ರೀರಾಮ್, ಎಸ್ ಟಿ ಮೋರ್ಚಾ ಅಧ್ಯಕ್ಷ ನರಸಿಂಹ, ಮುಖಂಡರಾದ ಅಪ್ಪಯ್ಯ, ರಾಮಚಂದ್ರಪ್ಪ, ಯಾರಗಾನಹಳ್ಳಿ ರಾಜೇಂದ್ರ ಪ್ರಸಾದ್, ಸುಬ್ರಮಣಿ, ನಂದೀಶ್, ಮುರಳಿ, ಕಾರ್ಯಕರ್ತರು ಉಪಸ್ಥಿತರಿದ್ದರು.

# ಶೀಘ್ರದಲ್ಲೇ ಹೃದಯ ರೋಗ ತಪಾಸಣಾ ಕೇಂದ್ರ ಆರಂಭ



ಮಧುಗಿರಿ

"ನಮ್ಮ ದೇಶದ ಅಸಂಖ್ಯಾತ ಮಠಗಳು ಸಮಾಜ ಸೇವೆಯನ್ನೇ ದೈವ ಸೇವೆ ಎಂದು ಭಾವಿಸಿವೆ. ನಾಗರಿಕರಿಗೆ ಗುಣಮಟ್ಟದ ಆರೋಗ್ಯ ಮತ್ತು ಶಿಕ್ಷಣ ನೀಡುವಲ್ಲಿ ಸರ್ಕಾರಗಳೊಂದಿಗೆ ಮಠಗಳು ಹೆಗಲು ಕೊಡುತ್ತಿವೆ" ಎಂದು ತುಮಕೂರಿನ ಶ್ರೀ ಸಿದ್ದಗಂಗಾ ಮಠದ ಕಿರಿಯ ಶ್ರೀಗಳಾದ ಸಿ. ಶಿವಸಿದ್ದೇಶ್ವರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಆಸ್ಪತ್ರೆ ಬೀದಿಯಲ್ಲಿರುವ ಶ್ರೀ ಸಿದ್ದಗಂಗಾ ಆಸ್ಪತ್ರೆ, ಡಯಾಲಿಸಿಸ್ ಸೆಂಟರ್ ಹಾಗೂ ಶ್ರೀ ಶಾರದಾ ದೇವಿ ಕಣ್ಣಿನ ಆಸ್ಪತ್ರೆಯ ಪ್ರಥಮ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

"ಉತ್ತಮ ಆರೋಗ್ಯಕ್ಕಾಗಿ ನಾವು ಜೀವನಶೈಲಿಯನ್ನು ಬದಲಿಸಿಕೊಳ್ಳುವುದು ಅತ್ಯಗತ್ಯ. ವರ್ಷಕ್ಕೆ ಕನಿಷ್ಠ ಎರಡು ಬಾರಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು" ಎಂದು ಕಿವಿಮಾತು ಹೇಳಿದ ಶ್ರೀಗಳು, ಮಧುಗಿರಿ ಭಾಗದ ಜನರ ಅನುಕೂಲಕ್ಕಾಗಿ ಹಿರಿಯ ಶ್ರೀಗಳೊಂದಿಗೆ ಸಮಾಲೋಚಿಸಿ ಶೀಘ್ರದಲ್ಲೇ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಹೃದಯ ರೋಗ ತಪಾಸಣಾ ಕೇಂದ್ರವನ್ನು ಪ್ರಾರಂಭಿಸಲಾಗುವುದು ಎಂಬ ಸಿಹಿ ಸುದ್ದಿ ನೀಡಿದರು. ಬಸವರಾಜು ಹಾಗೂ ವೀರಭದ್ರಪ್ಪ ಅವರ ಕುಟುಂಬದ ಸಮಾಜಸೇವೆಯ ಕನಸು ಈ ಕೇಂದ್ರದ ಮೂಲಕ ನನಸಾಗಿದೆ ಎಂದರು. ಕಾರ್ಯಕ್ರಮದಲ್ಲಿ ದಾನಿಗಳಾದ ಎಚ್.ಬಿ. ಶಿವಕುಮಾರ್, ಎನ್.ಎಂ. ಶಿವಕುಮಾರ್, ಎಚ್.ವಿ. ವೀರೇಶ್, ಕಾಲೇಜಿನ ಸಿಇಒ ಡಾ. ಎಂ.ಎನ್. ಸಂಜೀವ್ ಕುಮಾರ್, ಟಿಎಚ್‌ಒ ಡಾ. ಆನಂದ್, ನೆಫ್ರಾಲಜಿಸ್ಟ್ ಡಾ. ಅರುಣ್, ಪುರಸಭೆ ಮುಖ್ಯಾಧಿಕಾರಿ ಎಂ. ಸುರೇಶ್, ಕಸಾಪ ಅಧ್ಯಕ್ಷೆ ಸಹನಾ ನಾಗೇಶ್ ಹಾಗೂ ಸಮಾಜ ಸೇವಕ ಎಂ.ಜಿ. ಶ್ರೀನಿವಾಸ ಮೂರ್ತಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

# ಜೆಡಿ ಕೃಷ್ಣಪ್ಪ ಪರ ದಲಿತ ಮುಖಂಡರ ಧ್ವನಿ; ಎಡಿ ಆತ್ಮಹತ್ಯೆ ಪ್ರಕರಣಕ್ಕೆ ಟ್ವಿಸ್ಟ್!



ತಿಪಟೂರು

"ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಕೃಷ್ಣಪ್ಪ ಅವರು ನಿಷ್ಠಾವಂತ ಅಧಿಕಾರಿಯಾಗಿದ್ದು, ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನಯ್ಯ ಅವರ ಆತ್ಮಹತ್ಯೆ ಪ್ರಕರಣದಲ್ಲಿ ಅವರ ಹೆಸರನ್ನು ಅನಗತ್ಯವಾಗಿ ಎಳೆದು ತರಲಾಗಿದೆ. ಈ ಕುರಿತು ಪಾರದರ್ಶಕ ತನಿಖೆ ನಡೆಯಬೇಕು" ಎಂದು ಮುಖಂಡ ಕೆ.ಎಂ. ಶಾಂತಪ್ಪ ಒತ್ತಾಯಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಪಾವಗಡದ ಸಮಾಜ ಕಲ್ಯಾಣ ಇಲಾಖೆಯ ಎಡಿ ಮಲ್ಲಿಕಾರ್ಜುನಯ್ಯ ಅವರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ವಿಷಾದನೀಯ. ಆದರೆ, ನಿವೃತ್ತಿಗೆ ಕೇವಲ 15 ದಿನಗಳಿರುವಾಗ ಅವರು ಇಂತಹ ನಿರ್ಧಾರ ಕೈಗೊಂಡಿರುವುದರ ಹಿಂದೆ ವೈಯಕ್ತಿಕ ಕಾರಣಗಳಿರುವ ಸಾಧ್ಯತೆಯಿದೆ ಎಂದು ಅಭಿಪ್ರಾಯಪಟ್ಟರು.

ಜಂಟಿ ನಿರ್ದೇಶಕ ಕೃಷ್ಣಪ್ಪ ಅವರ ಸೇವೆಯನ್ನು ಸ್ಮರಿಸಿದ ಶಾಂತಪ್ಪ ಅವರು, "ಕೃಷ್ಣಪ್ಪ ಅವರು ಜಿಲ್ಲೆಗೆ ಬಂದ ಮೇಲೆ ಸಂವಿಧಾನ ಜಾಗೃತಿ ಜಾಥಾವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾರೆ. 100ರಿಂದ 150 ಕಿಲೋಮೀಟರ್ ಉದ್ದದ ಮಾನವ ಸರಪಳಿ ನಿರ್ಮಿಸಿ ರಾಜ್ಯಮಟ್ಟದಲ್ಲಿ ಜಿಲ್ಲೆಗೆ ಹೆಸರು ತಂದುಕೊಟ್ಟಿದ್ದಾರೆ. ಇಂತಹ ಸಾಧನೆಗಾಗಿ ಸರ್ಕಾರದಿಂದ ಪ್ರಶಸ್ತಿ ಪಡೆದ ಅಧಿಕಾರಿಯ ಮೇಲೆ ಇಲ್ಲಸಲ್ಲದ ಆರೋಪ ಮಾಡುವುದು ಸರಿಯಲ್ಲ" ಎಂದರು.

ಮುಖಂಡ ಯಾಚಿಕಟ್ಟೆ ರಾಘವೇಂದ್ರ ಮಾತನಾಡಿ, "ಮಲ್ಲಿಕಾರ್ಜುನಯ್ಯ ಅವರ ಸಾವು ಮನಕಲಕುವ ಘಟನೆಯಾದರೂ, ಅವರು ಬರೆದಿದ್ದಾರೆ ಎನ್ನಲಾದ ಡೆತ್ ನೋಟ್ ಟೈಪಿಂಗ್ ರೂಪದಲ್ಲಿದೆ. ಇದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಕೃಷ್ಣಪ್ಪ ಅವರು ಯಾವುದೇ ಅಧಿಕಾರಿಗೆ ತೊಂದರೆ ಕೊಟ್ಟವರಲ್ಲ. ಮಲ್ಲಿಕಾರ್ಜುನಯ್ಯ ಅವರು ತಮ್ಮ ಕುಟುಂಬದ ಹಿತದೃಷ್ಟಿಯಿಂದ ಅಥವಾ ವೈಯಕ್ತಿಕ ಒತ್ತಡದಿಂದ ಇಂತಹ ನಿರ್ಧಾರ ತಳೆದು ಕೃಷ್ಣಪ್ಪ ಅವರ ಮೇಲೆ ಆರೋಪ ಮಾಡಿರಬಹುದು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕೂಲಂಕಷ ಪರಿಶೀಲನೆ ನಡೆಸಬೇಕು" ಎಂದು ಆಗ್ರಹಿಸಿದರು. ವಾಲ್ಮೀಕಿ ತಾಲೂಕು ಸಂಘದ ಅಧ್ಯಕ್ಷ ಕೆ.ಎನ್. ಜಯಸಿಂಹ ಮಾತನಾಡಿ, "ನಿಷ್ಠಾವಂತ ಅಧಿಕಾರಿಗಳ ಮೇಲೆ ಸುಳ್ಳು ಆರೋಪ ಹೊರಿಸುವುದು ಖಂಡನೀಯ. ಕೃಷ್ಣಪ್ಪ ಅವರಿಗೆ ನ್ಯಾಯ ಸಿಗದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು" ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಪೆದ್ದಿಹಳ್ಳಿ ನರಸಿಂಹಮೂರ್ತಿ, ಶಿವಕುಮಾರ್ ಮತ್ತಿಘಟ್ಟ, ಕುಪ್ಪಳು ರಂಗಸ್ವಾಮಿ, ಮಂಜುನಾಥ್ ಮಾದಿಹಳ್ಳಿ, ಮಾರನಗೆರೆ ರಮೇಶ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ಮೃತ ಫಲಾನುಭವಿಗಳನ್ನು ಗೃಹಲಕ್ಷ್ಮೀ ಯೋಜನೆಯಿಂದ ಕೈಬಿಡಲು ಕ್ರಮ ವಹಿಸಿ: ಕೆ.ರಾಜು

ರಾಮನಗರ

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಪ್ರಮುಖವಾಗಿರುವ ಗೃಹಲಕ್ಷ್ಮೀ ಯೋಜನೆಯಡಿ ಜಿಲ್ಲೆಯ ಫಲಾನುಭವಿಯಾಗಿ, ತದನಂತರದಲ್ಲಿ ವಯೋಸಹಜ ಸೇರಿದಂತೆ ಇತರೆ ಕಾರಣಗಳಿಂದ ಮೃತರಾದ ಮಹಿಳೆಯರ ಹೆಸರುಗಳನ್ನು ಫಲಾನುಭವಿಗಳ ಪಟ್ಟಿಯಿಂದ ಕೈಬಿಡಲು ಕ್ರಮವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಕೆ. ರಾಜು ಅವರು ಸೂಚಿಸಿದರು.

ಮಂಗಳವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಗೃಹಲಕ್ಷ್ಮೀ ಯೋಜನೆಯಡಿ ನೋಂದಣಿಯಾಗಿ ಮರಣ ಹೊಂದಿದ 6,624 ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಅದರಲ್ಲಿ 1,777 ಫಲಾನುಭವಿಗಳನ್ನು ಗೃಹಲಕ್ಷ್ಮೀ ಯೋಜನೆಯಿಂದ ಕೈಬಿಡಲಾಗಿದೆ. ಬಾಕಿ ಇರುವ 4,847 ಫಲಾನುಭವಿಗಳನ್ನು ಗೃಹಲಕ್ಷ್ಮೀ ಫಲಾನುಭವಿಗಳ ಪಟ್ಟಿಯಿಂದ ತೆಗೆದು ಹಾಕಲು ಶೀಘ್ರವಾಗಿ ಕ್ರಮವಹಿಸುವಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ದಿನೇಶ್ ಅವರಿಗೆ ತಿಳಿಸಿದರು.

ಚನ್ನಪಟ್ಟಣ ತಾಲ್ಲೂಕಿನಲ್ಲಿ 1,700 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 425 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 1,275 ಫಲಾನುಭವಿಗಳು ಬಾಕಿ ಉಳಿದಿದ್ದಾರೆ. ಕನಕಪುರ ತಾಲ್ಲೂಕಿನಲ್ಲಿ 1,660 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 418 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 1,242 ಫಲಾನುಭವಿಗಳು ಬಾಕಿ ಉಳಿದಿದ್ದಾರೆ. ಹಾರೋಹಳ್ಳಿ ತಾಲ್ಲೂಕಿನಲ್ಲಿ 398 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 96 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 302 ಫಲಾನುಭವಿಗಳು ಬಾಕಿ ಉಳಿದಿದ್ದಾರೆ. ಮಾಗಡಿ ತಾಲ್ಲೂಕಿನಲ್ಲಿ 1,375 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 332 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 1,043 ಫಲಾನುಭವಿಗಳು ಬಾಕಿ ಉಳಿದಿದ್ದಾರೆ. ರಾಮನಗರ ತಾಲ್ಲೂಕಿನಲ್ಲಿ 1,491 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 506 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 985 ಫಲಾನುಭವಿಗಳು ಬಾಕಿ ಉಳಿದಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

ಜಿಲ್ಲೆಯ 2,94,399 ಅರ್ಹ ಫಲಾನುಭವಿಗಳ ಪೈಕಿ 2,81,726 (95.70%) ಫಲಾನುಭವಿಗಳು ನೋಂದಣಿಯಾಗಿದ್ದು, ಉಳಿದ 12,673 (4.30%) ಫಲಾನುಭವಿಗಳ ನೋಂದಣಿಗೆ ಬಾಕಿ ಇರುತ್ತದೆ. 27 ಕಂತುಗಳಲ್ಲಿ ಅಂದರೆ 2025ರ ಡಿಸೆಂಬರ್ ಮಾಹೆಯವರೆಗೆ 2,68,612 ಫಲಾನುಭವಿಗಳಿಗೆ 1427,16,26,000 ರೂ.ಗಳನ್ನು ಪಾವತಿಸಲಾಗಿದೆ. 2026ರ ಜನವರಿ ಮಾಹೆಯ 28ನೇ ಕಂತನ್ನು ಇನ್ನೆರಡು ದಿನಗಳಲ್ಲಿ ಪಾವತಿಸಲಾಗುವುದು ಎಂದರು. ಸಭೆಯಲ್ಲಿ ಸಮಿತಿಯ ಉಪಾಧ್ಯಕ್ಷರಾದ ಮಹದೇಶ್, ಎಸ್.ಸಿ. ಶೇಖರ್, ಸಿದ್ದೇಗೌಡ, ಸದಸ್ಯರು ಹಾಗೂ ರಾಮನಗರ ತಾಲ್ಲೂಕು ಅಧ್ಯಕ್ಷರಾದ ರಾಜು ವಿ.ಎಚ್., ಮಾಗಡಿ ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಶಿವಣ್ಣ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರಾದ ಶಿವಮಾದಯ್ಯ, ಎಂ. ಮಹದೇವ್, ಕಾಳಮ್ಮ, ವನಜಾ ಎಸ್.ಜಿ, ಶೋಭಾ ಸೇರಿದಂತೆ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಧನರಾಜ್ ಹಾಗೂ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ವೋಟರ್ ಲಿಸ್ಟ್ ಆಕ್ಷೇಪಣೆಗೆ ಗಡುವು

ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಬೆಂಗಳೂರು ಪೂರ್ವ ನಗರ ಪಾಲಿಕೆಯ ಸಾರ್ವತ್ರಿಕ ಚುನಾವಣೆ–2026ರ ಹಿನ್ನೆಲೆಯಲ್ಲಿ, ಪರಿಷ್ಕೃತ ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ದೂರು ಹಾಗೂ ಆಕ್ಷೇಪಣೆ ಸಲ್ಲಿಸುವ ಅವಧಿಯನ್ನು ಮಾರ್ಚ್ 30, 2026 ರವರೆಗೆ ವಿಸ್ತರಿಸಲಾಗಿದೆ.

ಈ ಕುರಿತು ಮಾಹಿತಿ ನೀಡಿರುವ ಪೂರ್ವ ನಗರ ಪಾಲಿಕೆಯ ಅಪರ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಆಯುಕ್ತರಾದ ಡಿ.ಎಸ್. ರಮೇಶ್, "ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ಸಾರ್ವಜನಿಕರ ಅನುಕೂಲಕ್ಕಾಗಿ ಕಾಲಾವಕಾಶ ನೀಡಲಾಗಿದೆ. ಅಂತಿಮ ಮತದಾರರ ಪಟ್ಟಿ ಸಿದ್ಧಪಡಿಸುವ ಮುನ್ನ ಮತದಾರರು ತಮ್ಮ ಹೆಸರನ್ನು ಪರಿಶೀಲಿಸಿಕೊಂಡು, ಯಾವುದೇ ಲೋಪದೋಷಗಳಿದ್ದಲ್ಲಿ ನಿಗದಿತ ಅವಧಿಯೊಳಗೆ ಅಹವಾಲು ಸಲ್ಲಿಸಬೇಕು" ಎಂದು ಮನವಿ ಮಾಡಿದ್ದಾರೆ.

<u>ಪರಿಶೀಲನೆ ಹೇಗೆ?</u>

ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ವಾರ್ಡ್‌ಗಳ ಕರಡು ಮತದಾರರ ಪಟ್ಟಿಯನ್ನು ಸಂಬಂಧಿತ ಮತದಾರರ ನೋಂದಣಾಧಿಕಾರಿಗಳು ಅಥವಾ ಸಹಾಯಕ ಮತದಾರರ ನೋಂದಣಾಧಿಕಾರಿಗಳ ಕಚೇರಿಯಲ್ಲಿ ವೀಕ್ಷಿಸಬಹುದು. ಅಲ್ಲದೆ, ಸಾರ್ವಜನಿಕರು ಜಿಬಿಎ ಅಧಿಕೃತ ವೆಬ್‌ಸೈಟ್ https://gba.karnataka.gov.in/electoral 2026ನಲ್ಲಿಯೂ ತಮ್ಮ ಹೆಸರನ್ನು ಪರಿಶೀಲಿಸಿಕೊಳ್ಳಬಹುದಾಗಿದೆ.

ಸಂಪರ್ಕಿಸಬೇಕಾದ ವಿಳಾಸ ಮತ್ತು ಅಧಿಕಾರಿಗಳ ವಿವರ:

ಮತದಾರರು ತಮ್ಮ ವ್ಯಾಪ್ತಿಗೆ ಅನುಗುಣವಾಗಿ ಈ ಕೆಳಗಿನ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ವಾರ್ಡ್ ಸಂಖ್ಯೆ 1 ರಿಂದ 27 ಬಸವರಾಜ್ ಎಸ್. ಮಗಿ, ಮತದಾರರ ನೋಂದಣಾಧಿಕಾರಿ, ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರ, ಜಿಬಿಎ ಕಚೇರಿ, ಹಳೇ ಮದ್ರಾಸ್ ರಸ್ತೆ. 9480683002 ero151krpuram@gmail.com

ವಾರ್ಡ್ ಸಂಖ್ಯೆ 28 ರಿಂದ 50 ಆನಂದ್ ಕೆ.ಎಸ್., ಮತದಾರರ ನೋಂದಣಾಧಿಕಾರಿ, ಮಹದೇವಪುರ ವಿಧಾನಸಭಾ ಕ್ಷೇತ್ರ, ಆರ್.ಎಚ್.ಬಿ ಕಾಲೋನಿ, ಮಹದೇವಪುರ ವಲಯ ಕಚೇರಿ. 9945005677 ero174mahadevapura@gmail.com ಮುಕ್ತ ಮತ್ತು ಪಾರದರ್ಶಕ ಚುನಾವಣೆಗೆ ಸಹಕರಿಸಲು ಪ್ರತಿಯೊಬ್ಬ ಮತದಾರರು ಪಟ್ಟಿಯಲ್ಲಿ ತಮ್ಮ ಹೆಸರು ಮತ್ತು ವಿವರಗಳನ್ನು ಖಚಿತಪಡಿಸಿಕೊಳ್ಳುವುದು ಅತ್ಯಗತ್ಯ ಎಂದು ಪಾಲಿಕೆ ತಿಳಿಸಿದೆ.

# ಜಾಗತಿಕ ಉದ್ಯೋಗ ಮಾರುಕಟ್ಟೆಗೆ ಸನ್ನದ್ಧರಾಗಿ: ಸಿಇಒ ಡಾ. ನವೀನ್ ಭಟ್



ಚಿಕ್ಕಬಳ್ಳಾಪುರ

"ವಿಜ್ಞಾನ ಮತ್ತು ತಂತ್ರಜ್ಞಾನವು ನಾಗಲೋಟದಲ್ಲಿ ಮುನ್ನಡೆಯುತ್ತಿರುವ ಇಂದಿನ ಯುಗದಲ್ಲಿ ಯುವಜನರಿಗೆ ಅಪಾರ ಉದ್ಯೋಗಾವಕಾಶಗಳಿವೆ. ಕೃತಕ ಬುದ್ಧಿಮತ್ತೆ ಮತ್ತು ರೋಬೋಟಿಕ್ಸ್‌ನಂತಹ ಆಧುನಿಕ ತಂತ್ರಜ್ಞಾನಗಳನ್ನು ಮೈಗೂಡಿಸಿಕೊಂಡು ವಿದ್ಯಾರ್ಥಿಗಳು ಜಾಗತಿಕ ಸ್ಪರ್ಧೆಗೆ ಸನ್ನದ್ಧರಾಗಬೇಕು" ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ವೈ. ನವೀನ್ ಭಟ್ ತಿಳಿಸಿದರು.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಹಾಗೂ ಜಿಲ್ಲಾ ವೃತ್ತಿಪರ ವೃತ್ತಿ ಮಾರ್ಗದರ್ಶನ ಘಟಕದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕೆರಿಯರ್ ಮೇಳ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

<u>ಕೂಪ ಮಂಡೂಕಗಳಾಗಬೇಡಿ: ಜಾಗತಿಕ ವೇದಿಕೆ ನಿಮ್ಮದಾಗಲಿ:</u> ಉದ್ಯೋಗಾವಕಾಶಗಳು ಈಗ ಕೇವಲ ಒಂದು ರಾಜ್ಯ ಅಥವಾ ದೇಶಕ್ಕೆ ಸೀಮಿತವಾಗಿಲ್ಲ. ಇಡೀ ವಿಶ್ವವೇ ಒಂದು ಮುಕ್ತ ಮಾರುಕಟ್ಟೆಯಾಗಿದೆ. "ವಿದ್ಯಾರ್ಥಿಗಳು ಒಂದೆರಡು ಸಣ್ಣಪುಟ್ಟ ಕ್ಷೇತ್ರಗಳಿಗೆ ಅಂಟಿಕೊಳ್ಳದೆ, ವಿಶಾಲವಾಗಿ ಯೋಚಿಸಬೇಕು. ಸಿವಿಲ್ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದ ಜಿಲ್ಲೆಯವರೇ ಆದ ಭಾರತರತ್ನ ಡಾ. ಸರ್ ಎಂ. ವಿಶ್ವೇಶ್ವರಯ್ಯ, ವಿಜ್ಞಾನಿ ಸಿ.ಎನ್.ಆರ್. ರಾವ್, ಡಾ. ಎಚ್. ನರಸಿಂಹಯ್ಯ ಹಾಗೂ ನಾರಾಯಣ ಮೂರ್ತಿ ಅವರಂತಹ ಮಹನೀಯರನ್ನು ಮಾದರಿಯಾಗಿ ಸ್ವೀಕರಿಸಬೇಕು" ಎಂದು ಅವರು ಕರೆ ನೀಡಿದರು.

<u>ಯುವನಿಧಿ ಯೋಜನೆಯ ಸದುಪಯೋಗ ಪಡೆಯಿರಿ:</u> ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಯಲುವಳ್ಳಿ ಎನ್. ರಮೇಶ್ ಮಾತನಾಡಿ, "ರಾಜ್ಯ ಸರ್ಕಾರ ಜಾರಿಗೆ ತಂದಿರುವ 'ಯುವನಿಧಿ' ಯೋಜನೆಯು ನಿರುದ್ಯೋಗಿ ಯುವಜನರಿಗೆ ಆಸರೆಯಾಗಿದೆ. ಪದವೀಧರರಿಗೆ ರೂ. 3,000 ಹಾಗೂ ಡಿಪ್ಲೊಮಾ ಅಭ್ಯರ್ಥಿಗಳಿಗೆ ರೂ. 1,500 ನಿರುದ್ಯೋಗ ಭತ್ಯೆ ನೀಡಲಾಗುತ್ತಿದೆ. ಇದು ದೇವರಾಜ ಅರಸು ಅವರ ಕಾಲದ ಶಿಷ್ಯವೇತನ ಯೋಜನೆಯ ಮುಂದುವರಿದ ಭಾಗವಾಗಿದ್ದು, ಅರ್ಹರು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು" ಎಂದು ಮನವಿ ಮಾಡಿದರು.

<u>ತಜ್ಞರಿಂದ ಮಾರ್ಗದರ್ಶನ:</u>

ಮೇಳದಲ್ಲಿ ಅನಹತ ಯುನೈಟೆಡ್ ಫೌಂಡೇಷನ್‌ನ ರಾಘವೇಂದ್ರ, ಶಿಕ್ಷಕ ಎಚ್. ಸುಧಾಕರರೆಡ್ಡಿ, ಹಾಸನ ತಾಂತ್ರಿಕ ಕಾಲೇಜಿನ ಡಾ. ಎಲ್. ತಿಮ್ಮೇಶ್ ಹಾಗೂ ನಂದಿ ಮೋಕ್ಷಗುಂಡಂ ಸಂಸ್ಥೆಯ ಕೆ.ಸಿ. ಸಚಿನ್ ಅವರು ವಿದ್ಯಾರ್ಥಿಗಳಿಗೆ ಭವಿಷ್ಯದ ವೃತ್ತಿ ಬದುಕಿನ ಕುರಿತು ಅಮೂಲ್ಯ ಸಲಹೆಗಳನ್ನು ನೀಡಿದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಮೇಶ್, ಡಯಟ್ ಉಪನಿರ್ದೇಶಕ ಎಂ. ಮುನಿಕೆಂಪೇಗೌಡ, ಹಿರಿಯ ಉಪನ್ಯಾಸಕಿ ಟಿ.ಎಚ್. ಯಶೋಧ ಸೇರಿದಂತೆ ಬಿ.ಇಡಿ, ಐಟಿಐ ಮತ್ತು ಪಿಯುಸಿ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

Printed by gandasi sadananda swamy, published by gandasi sadanandaswamy, owned by gandasi sadananda swamy. Printed at LAVANYA MUDRANA No. 79, TR mill, compound, 5th main 9th corss, Chamarajpet Bangalore-560018, published at No.531, prakruthi nilaya, kalikanagar, Andrahalli, Vishwaneedam Post, Bangalore-560091. Editor: Gandasi sadanandaswamy